4. ಚುನಾವಣಾ ಪ್ರಸ್ತಾವ :

ವಿಷಯ : 2009ರ ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕಕಲೆಗಳ ವಿಶ್ವವಿದ್ಯಾಲಯ ಅಧಿನಿಯಮದ ಕಲಂ 20(ಡಿ) ಮೇರೆಗೆ ವಿಶ್ವವಿದ್ಯಾಲಯ ಸಿಂಡಿಕೇಟ್‌ಗೆ ಒಬ್ಬರು ವಿಧಾನಸಭಾ ಸದಸ್ಯರನ್ನು ಚುನಾಯಿಸುವುದು.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 2009ರ ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ ಕಲಂ 20(ಐ) ಮೇರೆಗೆ ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಸಿಂಡಿಕೇಟ್‌ಗೆ ಒಬ್ಬರು ವಿಧಾನಸಭಾ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

5. ನಿಯಮ 69ರ ಮೇರೆಗೆ

(ಮುಂದುವರೆದ ಚರ್ಚೆ)

ವಿಷಯ : ರಾಜ್ಯದಲ್ಲಿ ಇತ್ತೀಚೆಗೆ ಉಂಟಾಗಿರುವ ತೀವ್ರ ವಿದ್ಯುತ್ ಸಮಸ್ಯೆ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ನಾವು ನಿಯಮ 60ರಲ್ಲಿ ಕೊಟ್ಟಿದ್ದ ವಿಷಯವನ್ನು ನಿಯಮ 69ಕ್ಕೆ convert ಮಾಡಿದ್ದೀರಿ. ರಾಜ್ಯದಲ್ಲಿ ಈ ಸರ್ಕಾರ ಬಂದು 18 ತಿಂಗಳುಗಳಾಗಿದ್ದು, ಸನ್ಮಾನ್ಯ ಮುಖ್ಯಮಂತ್ರಿಯವರು ವಿಧಾನ ಸಭೆ ಚುನಾವಣೆಯ ಸಂದರ್ಭದಲ್ಲಿ ನಮ್ಮ ರೈತಾಪಿ ಜನರಿಗೆ I.P.ಸೆಟ್‌ಗೆ freeಯಾಗಿ electricity ಕೊಡುತ್ತೇವೆಂಬ ಮಾತನ್ನು ಹೇಳಿದ್ದರು. ಇದರ ಜೊತೆಗೆ ದಿವಸಕ್ಕೆ ಕನಿಷ್ಟ 10 ರಿಂದ 12 ಗಂಟೆಯವರೆಗೊ, 20 ಗಂಟೆಯವರೆಗೊ ವಿದ್ಯುತ್ ಕೊಡುತ್ತೇವೆಂದು ಆ ದಿವಸ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಇವತ್ತು ಸಹ ನಾನು ನೋಡಿದೆ. ನಿನ್ನೆ ನಮ್ಮ ರೈತರಿಗೆ ಸಾವಿರ ಮೆಗಾವ್ಯಾಟ್ ವಿದ್ಯುತ್ ಅನ್ನು ಖರೀದಿ

ಮಾಡುತ್ತೇವೆಂಬ ಮಾತನ್ನು ಸಹ ಹೇಳಿದ್ದಾರೆ. ನಾನು ಅವರು ನೀಡಿರುವ ಮಾಹಿತಿ ಪ್ರಕಾರವೇ ಹೇಳುತ್ತೇನೆ. ಈ ರಾಜ್ಯದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ 18 ತಿಂಗಳಲ್ಲಿ 2,500 ಕೋಟಿ ರೂಪಾಯಿಯ high cost ವಿದ್ಯುತ್ ಅನ್ನು ಖರೀದಿ ಮಾಡಿರುವಂಥದ್ದನ್ನು ಸಹ ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇದರ ಜೊತೆಗೆ ಇವತ್ತು 5 ಕಂಪನಿಗಳು ಯಾವ ಮಟ್ಟಕ್ಕೆ ಹೋಗಿವೆಯೆಂದರೆ, ಈ 5 ಕಂಪನಿಗಳಲ್ಲಿ ಕಳೆದ 18 ತಿಂಗಳುಗಳಲ್ಲಿ ಎಷ್ಟು ಲಾಸ್ ಆಗಿದೆಯೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮತ್ತು 2005 ರಿಂದ 2008 ರವರೆಗೂ ನಾವು ಹೇಳಬೇಕಾಗುತ್ತದೆ, ಏಕೆಂದರೆ ಆಗ ನೀವೇ ಮಂತ್ರಿಗಳಾಗಿದ್ದೀರಿ, ನೀವು ಏನು ಮಾಡುತ್ತಿದ್ದೀರಿ, ನೀವು ಏನು ಕ್ರಮವನ್ನು ತೆಗೆದುಕೊಂಡಿಲ್ಲವೆಂಬ ಭಾವನೆಗಳು ಆಡಳಿತ ಪಕ್ಷದ ಸದಸ್ಯರುಗಳಲ್ಲಿ ಇರಬಹುದು. ಇಲ್ಲಿ ಈಗ ಮಾಜಿ ಇಂಧನ ಮಂತ್ರಿಗಳು ಇಲ್ಲ, ಅವರು ಈಗ ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು, ಆದರೆ ಇವತ್ತು ಶಿವಮೊಗ್ಗದಲ್ಲಿ ಗಲಭೆಯಾಗಿದ್ದು ಅಲ್ಲಿ ಶಾಂತಿಯನ್ನು ಕಾಪಾಡಲು ಹೋಗಿದ್ದಾರೆ. ಅದಕ್ಕೆ ಆ ವಿಷಯವನ್ನು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ರಾಜ್ಯದಲ್ಲಿ 2005 ರಿಂದ 2008ರವರೆಗೆ ಎಷ್ಟು ಗಂಟೆಗಳ ಕಾಲ ವಿದ್ಯುತ್ ಅನ್ನು ಅದು single phase ಇರಬಹುದು, three phase ನಲ್ಲಿ ಎಷ್ಟು ವಿದ್ಯುತ್ ಅನ್ನು ಕೊಟ್ಟರೆಂಬ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಯವರೆ ಇವತ್ತು ಇಂಧನ ಸಚಿವರು ಆಗಿದ್ದಾರೆ. ಅವರು ಉತ್ತರವನ್ನು ಕೊಡುವಾಗ ಹೇಳಬೇಕು. ಅದೇ ರೀತಿ 2008 ರಿಂದ ಇವತ್ತಿನವರೆಗೂ ಎಷ್ಟು ಗಂಟೆಯವರೆಗೆ ವಿದ್ಯುತ್ ಅನ್ನು ಅದು single phase ಇರಬಹುದು, three phase ಇರಬಹುದು, ಎಷ್ಟು ಕೊಟ್ಟಿದ್ದಾರೆಂಬುದನ್ನು ಹೇಳಬೇಕು. ಬೆಂಗಳೂರು ನಗರದಲ್ಲಿ 2005 ರಿಂದ 2008ರವರೆಗೆ ಒಂದು ದಿವಸವೂ ಲೋಡ್ ಶೆಡ್ಡಿಂಗ್ ಮಾಡಿರಲಿಲ್ಲ. ಇದರ ಜೊತೆಗೆ ನಗರ ಪ್ರದೇಶದಲ್ಲೂ ಸಹ ನಾವು 24 ಗಂಟೆಗಳ ಕಾಲ ವಿದ್ಯುತ್ ಅನ್ನು ಕೊಡುವ ವ್ಯವಸ್ಥೆಯನ್ನು ಕೆಲವು ಕಡೆಗಳಲ್ಲಿ ಮಾಡಿದ್ದೆವು. ಆದರೆ

ಇವತ್ತು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ರೀತಿಯಾಗಲು ಏನು ಕಾರಣ? ಯಾವ ಉದ್ಧೇಶ? ನಾನು ತಮ್ಮ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಬೆಸ್ಕಾಂನಲ್ಲಿರಬಹುದು, MESCOM, CHESCOM, HESCOM ಅಥವಾ ಚಾಮುಂಡೇಶ್ವರಿ ವಿದ್ಯುತ್ ಕಂಪನಿ ಇರಬಹುದು. ಈ 5 ಕಂಪೆನಿಗಳಲ್ಲಿ 2007–08ರಲ್ಲಿ 40 ಲಕ್ಷ 195 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಕೊಟ್ಟಿದ್ದಾರೆ. ಅದೇ ರೀತಿ 2008–09ರಲ್ಲಿ 40 ಲಕ್ಷದ 129 ಮಿಲಿಯನ್ ಯೂನಿಟ್ ಅನ್ನು ಕೊಟ್ಟಿದ್ದಾರೆ. ಇಲ್ಲಿ ಹೆಚ್ಚಿಗೆ ಕೊಟ್ಟಿಲ್ಲ, 2007–2008ರಲ್ಲಿ ಎಷ್ಟು ಇತ್ತೊ, 2008–09ರಲ್ಲೂ ಅಷ್ಟೆ ವಿದ್ಯುತ್ ಕೊಟ್ಟಿರುವುದು. ತಮಗೆ ಈ ಮಾಹಿತಿ ಬೇಕಾದರೆ ಕಳುಹಿಸಿ ಕೊಡುತ್ತೇನೆ. ಇದರಲ್ಲಿ 2007–08ನೇ ಸಾಲಿಗೆ ಹೊಲಿಸಿದರೆ ಎರಡು ವರ್ಷ ಅಷ್ಟೆ ವಿದ್ಯುತ್ ಕೊಟ್ಟಿರುವಂಥದ್ದು. 2007–08ರಲ್ಲಿ 40 ಲಕ್ಷ 195 ಮಿಲಿಯನ್ ಯೂನಿಟ್ ಇದ್ದಿದ್ದು 2008–09ರಲ್ಲಿ 40 ಲಕ್ಷ 129 ಮಿಲಿಯನ್ ಯೂನಿಟ್ ಇದೆ, ಅಂದರೆ ಇನ್ನು 100 ಮಿಲಿಯನ್ ಯೂನಿಟ್ ಕಡಿಮೆ ಕೊಟ್ಟಿದ್ದಾರೆ. ಇಲ್ಲಿ 2,500 ಕೋಟಿ ರೂಪಾಯಿಯ high cost ವಿದ್ಯುತ್ ಅನ್ನು ಖರೀದಿ ಮಾಡುವ ಅವಶ್ಯಕತೆ ಇತ್ತಾ? ಇಷ್ಟು ವಿದ್ಯುತ್ ಅನ್ನು ಯಾವ ಉದ್ಧೇಶಕ್ಕಾಗಿ ಖರೀದಿ ಮಾಡಿದ್ದೀರಿ? ಇದರ ಬಗ್ಗೆ enquiry ಮಾಡಬೇಕಾಗುತ್ತದೆ. ಇದರಲ್ಲಿ ಇಂಧನ ಸಚಿವರ lapse ಇದೆಯೋ, ಅಧಿಕಾರಿಗಳ lapse ಇದೆಯೋ, ಅಥವಾ ಇದರ ಹಿಂದೆ ಯಾರು ಇದ್ದಾರೆ? ಏಕೆಂದರೆ ಈ ಎರಡು ವರ್ಷಗಳಲ್ಲೂ 40 ಲಕ್ಷ ಮಿಲಿಯನ್ ಯೂನಿಟ್ ಇರುವಾಗ, 2008–09ರಲ್ಲೂ ಅಷ್ಟೆ ವಿದ್ಯುತ್ ಅನ್ನು ಕೊಟ್ಟಿದ್ದಾರೆ. ಇದರಲ್ಲಿ separate ಆಗಿ ಏನು ಕೊಟ್ಟಿಲ್ಲ. ಇಲ್ಲಿ high cost current ಖರೀದಿ ಮಾಡುವ ಅವಶ್ಯಕತೆ ಇತ್ತಾ? ಇವತ್ತು ರಾಜ್ಯದ 5 ಕಂಪೆನಿಗಳು ಯಾವ ಮಟ್ಟಕ್ಕೆ ಹೋಗಿವೆಯೆಂಬುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇದರ ಬಗ್ಗೆ ತನಿಖಾ ದಳದಿಂದ ತನಿಖೆ ಮಾಡಿಸಿದರೆ ಒಳ್ಳೆಯದು. High cost current ಅನ್ನು ಯಾವ ಉದ್ಧೇಶಕ್ಕಾಗಿ ಖರೀದಿ ಮಾಡಿದರು? ಅದು ಎಲ್ಲಿ ಹೋಯಿತು ಎಂಬ ಬಗ್ಗೆ

CBI ತನಿಖೆ ಮಾಡಿಸುತ್ತಾರಾ? ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ. ನಾನು ಹೇಳುವಂಥದ್ದು ನನ್ನ ಕಾಲದ್ದು ತನಿಖೆ ಮಾಡಿಸಲಿ, ನಾನು ಸಚಿವನಾಗಿದ್ದಾಗ ಏನು ಮಾಡಿದ್ದೇನೆಂಬ ಬಗ್ಗೆ ಲೋಕಾಯುಕ್ತರ ತನಿಖೆಗೆ ಕೊಟ್ಟಿದ್ದಾರೆ, ಅದನ್ನು COD ತನಿಖೆಗೆ ಯಾವುದಕ್ಕೆ ಬೇಕಾದರೂ ಕೊಟ್ಟಿರಲಿ, ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಈ 2,500 ಕೋಟಿ ರೂಪಾಯಿಗಳ high cost current ಅನ್ನು ಖರೀದಿ ಮಾಡುವಂಥ ಅವಶ್ಯಕತೆ ಇತ್ತಾ? ನಾವು ಉದಾಹರಣೆಗೆ ಹೇಳುವುದಾದರೆ 2006–07ರಲ್ಲಿ high cost current ಅನ್ನು ಕೇವಲ 16 ಕೋಟಿ 632 ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದು, 2007–08ರಲ್ಲಿ 28 ಕೋಟಿ 35 ಲಕ್ಷ ರೂಪಾಯಿಗಳಿಗೆ ವಿದ್ಯುತ್ ಖರೀದಿ ಆಗಿರುವಂಥದ್ದು, 2008–09ರಲ್ಲಿ ಸುಮಾರು 1,312 ಕೋಟಿ ರೂಪಯಿಗಳಿಗೆ high cost current ಖರೀದಿ ಆಗಿದೆ. ಅದೇ ರೀತಿ 2009ರ ಏಪ್ರಿಲ್, ಮೇ ತಿಂಗಳಲ್ಲಿ 796 ಕೋಟಿ ರೂಪಾಯಿಗಳಿಗೆ ಖರೀದಿ ಮಾಡಿದ್ದು, ಎಲ್ಲಾ ಸೇರಿ ಒಟ್ಟು 2,500 ಕೋಟಿ ರೂಪಾಯಿಗಳಿಗೆ high cost current ಅನ್ನು ಖರೀದಿ ಮಾಡಿದ್ದಾರೆ. ಅದು ಯಾವ್ಯಾವ ಕಂಪೆನಿಗಳಿಂದ ಖರೀದಿ ಮಾಡಲಾಗಿದೆಯೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಒಂದು ಉದಾಹರಣೆಯನ್ನು ಹೇಳುವುದಾದರೆ 2008ರಲ್ಲಿ high cost current ಅನ್ನು ಖರೀದಿ ಮಾಡಿರುವಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಜಿಂದಾಲ್‌ನಿಂದ(JWS) ಸುಮಾರು 298 ಕೋಟಿ ರೂಪಾಯಿಗಳ high cost current ಅನ್ನು ರೂ.7.76 ಪೈಸೆಯಿಂದ ರೂ.8.80 ಪೈಸೆಯವರೆಗೂ ಖರೀದಿ ಆಗಿದೆ. ಅದೇ ರೀತಿ ಟಾಟಾ ಕಂಪೆನಿಯಿಂದ ಸುಮಾರು 1 ಕೋಟಿ 16 ಲಕ್ಷ ರೂಪಾಯಿಗಳವರೆಗೂ ವಿದ್ಯುತ್ ಖರೀದಿ ಆಗಿದೆ. ಅದು ಅಲ್ಲದೆ Indian Energyಯಿಂದ 28 ಕೋಟಿ ರೂಪಾಯಿಗಳಿಗೆ ಖರೀದಿ ಮಾಡಲಾಗಿದೆಯೆಂದು ಹೇಳಿದ್ದಾರೆ. ಇದರಲ್ಲಿ 6. ರೂ. ಗಳಿಂದ ರೂ. 9.37 ಪೈಸೆಗೆ ಖರೀದಿ ಆಗಿದೆ. ಅದೇ ರೀತಿಯಾಗಿ VVNL ನಿಂದ 13 ಕೋಟಿ 47 ಲಕ್ಷ ರೂಪಾಯಿಗಳಿಗೆ ವಿದ್ಯುತ್ ಖರೀದಿ ಆಗಿದೆ. ತಣ್ಣೀರ್‌ಬಾವಿ ಎಂದರೆ GMR 384 ಕೋಟಿ ರೂಪಾಯಿಗಳಿಗೆ high cost current

ಖರೀದಿ ಆಗಿದೆ ಎಂದರೆ ರೂ.5.50 ಪೈಸೆಯಿಂದ ರೂ.8.85 ಪೈಸೆಯವರೆಗೆ ಖರೀದಿಯಾಗಿದೆ. ಇದರ ಜೊತೆಗೆ co–generation ನಲ್ಲಿ ನಾವು ಅಧಿಕಾರದಲ್ಲಿದ್ದಾಗ ರೂ.2.35 ಪೈಸೆಗೆ agreement ಆಗಿತ್ತು, 15 ವರ್ಷಗಳಿಗೆ agreement ಆಗಿರುವಂಥದ್ದನ್ನು ಕಿತ್ತು ಹಾಕಿದ್ದಾರೆ. ಇದರಲ್ಲಿ ಸರ್ಕಾರ ಯಾವ ರೀತಿ ಶಾಮೀಲಾಗಿದೆಯೆಂಬುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇದು ಒಂದರಲ್ಲೇ 372 ಕೋಟಿ ರೂಪಾಯಿಗಳಿಗೆ high cost current ಖರೀದಿ ಆಗಿದೆ. ಅದೂ ರೂ.6.50 ಪೈಸೆಯಿಂದ ರೂ.7.25 ಪೈಸೆಗೆ ಖರೀದಿ ಮಾಡಲಾಗಿದೆ. ಮೊದಲು ರೂ.2.35 ಪೈಸೆಗೆ agreement ಆಗಿರುವಂಥದ್ದನ್ನು ತೆಗೆದು ಹಾಕಿ, ಇವತ್ತು ರೂ.7.25 ಪೈಸೆಯವರೆಗೆ ಖರೀದಿ ಮಾಡಿ 372 ಕೋಟಿ ರೂಪಾಯಿಗಳ ವಿದ್ಯುತ್ ಖರೀದಿ ಆಗಿದೆ. ಅದೇ ರೀತಿಯಾಗಿ bio–mass plant ನಿಂದ 42 ಕೋಟಿ ರೂಪಾಯಿಗಳ ವಿದ್ಯುತ್ ಖರೀದಿಯಾಗಿದೆ. ಛತ್ತೀಸ್‌ಗಡದಿಂದ ವಿದ್ಯುತ್ ಅನ್ನು ತಂದರು, ಅಲ್ಲಿ ಬಿಜೆಪಿ ಸರ್ಕಾರ ಇದೆಯಲ್ಲಾ ಅಲ್ಲಿಂದ ಕಡಿಮೆ ಬೆಲೆಗೆ ಏನಾದರೂ ವಿದ್ಯುತ್ ತರುತ್ತಾರೆಂಬ ಭಾವನೆ ಇತ್ತು. ಆದರೆ ಅಲ್ಲಿ ಕೊಟ್ಟಿರುವಂಥದ್ದು ಎಷ್ಟೆಂದರೆ ಒಂದು ಯೂನಿಟ್‌ಗೆ ರೂ.9.05 ಪೈಸೆಯಂತೆ 166 ಕೋಟಿ ರೂಪಾಯಿಗಳ ವಿದ್ಯುತ್ ಅನ್ನು ಛತ್ತೀಸ್‌ಗಡದಿಂದ ಖರೀದಿಸಿ ತರಲಾಗಿದೆ. ಇದೆಲ್ಲಾ ಸೇರಿ ಒಟ್ಟು ಸುಮಾರು 2,500 ಕೋಟಿ ರೂಪಾಯಿಗಳ high cost current ಖರೀದಿಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ.

ಶ್ರೀ ಕೆ. ವೆಂಕಟೇಶ್ : ನೀವು ಹೇಳುತ್ತಿರುವುದನ್ನು ಅವರು ಕೇಳಿಸಿಕೊಳ್ಳುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಕೇಳಿಸಿಕೊಳ್ಳುತ್ತಾರೋ, ಬಿಡುತ್ತಾರೋ, ವಿಷಯವನ್ನು ನಾನು ಸಭಾಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ವೆಂಕಟೇಶ್: ಮಾಜಿ ಮಂತ್ರಿಗಳು ಅನೇಕ ದಾಖಲೆಗಳ ಸಮೇತ ಮಾತನಾಡುತ್ತಿದ್ದಾರೆ. ಅವರು ಕೇಳಿಸಿಕೊಳ್ಳುತ್ತಲೇ ಇಲ್ಲ.

ಅಧ್ಯಕ್ಷರು : ಕೇಳಿಸಿಕೊಳ್ಳುತ್ತಿದ್ದಾರೆ, ನೀವು ಮಾತನಾಡಿ.

11.50 ಎ.ಎಂ.

ಶ್ರೀ ಉಮೇಶ್ ವಿ ಕತ್ತಿ : ಮಾಜಿ ಮಂತ್ರಿಗಳು ಇರುವುದನ್ನೇ ಹೇಳುತ್ತಿದ್ದಾರೆ. ಅದನ್ನೇನು ಗಮನಿಸಬೇಕಾಗಿಲ್ಲ, ನಮ್ಮ ಕಡೆ ಎಲ್ಲ ಅಂಕಿಅಂಶಗಳಿವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಇರುವುದನ್ನೇ ಮಾತನಾಡುತ್ತಿದ್ದಾರೆ ಎಂದು ಅವರು ಹೇಳಿದರು. ಅಂದರೆ ಮಾತನಾಡುವ ಅವಶ್ಯಕತೆ ಇಲ್ಲ ಎಂದು ಕಾಣುತ್ತಿದೆ.

ಅಧ್ಯಕ್ಷರು : ರೇವಣ್ಣನವರೇ ನೀವು ಮಾತನಾಡಿ. ಇಲ್ಲದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ. ಅವರು ಕೇಳಿದ ತಕ್ಷಣ ನೀವು ಯೀಲ್ಡ್ ಆಗಬೇಡಿ. ನೀವು ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ಸುಮಾರು 3,738 ದಶಲಕ್ಷ ಯೂನಿಟ್, 2,597 ಕೋಟಿ ರೂಪಾಯಿಗಳಲ್ಲಿ high cost current ಖರೀದಿಯಾಗಿದೆ. ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. Co–generation ನಲ್ಲಿ ಸುಮಾರು 372 ಕೋಟಿ ರೂಪಾಯಿಗಳಲ್ಲಿ ಕರೆಂಟ್ ಖರೀದಿ ಮಾಡಿದ್ದಾರೆ. ಹಿಂದೆ P.P.A. ಆಗಿದ್ದು ಪ್ರತಿ ಯೂನಿಟ್ಟಿಗೆ ರೂ.2.80ರಿಂದ ರೂ.3.30 ಎಂದು ಆಗಿತ್ತು. 10 ವರ್ಷ P.P.A. ಇರುವಾಗ ಅದನ್ನು ತೆಗೆದು ಈಗ ನೀವು 7 ರೂಪಾಯಿ ಕೊಡುತ್ತಿದ್ದೀರಲ್ಲ, ಇದು ಯಾವ ನ್ಯಾಯ? ನೀವು ಯಾರ ಜೊತೆ ಶಾಮೀಲಾಗಿದ್ದೀರಿ? ಇದರಲ್ಲಿ ಎಷ್ಟು ಹಣ ಸಿಕ್ಕಿದೆ? ಈ ಹಣ ಯಾರದ್ದು? ನೀವೇ ಹೇಳಿ, 2.80 ರೂಪಾಯಿಗಳಲ್ಲಿ ಎಷ್ಟು ಅಗ್ರೀಮೆಂಟ್ ಆಗಿತ್ತು, 3.30 ರೂಪಾಯಿಗಳಲ್ಲಿ ಎಷ್ಟು ಅಗ್ರೀಮೆಂಟ್ ಆಗಿತ್ತು? ಯಾವ ಉದ್ದೇಶಕ್ಕಾಗಿ P.P.A. ಇರುವುದನ್ನು ನೀವು ತೆಗೆದು ಹಾಕಿದಿರಿ? ಪ್ರತಿ ಯೂನಿಟ್ ಕರೆಂಟಿಗೆ ಏಳೂವರೆ ರೂಪಾಯಿಗಳನ್ನು ಕೊಡುವಂಥದ್ದು ಏನಿತ್ತು? 2,597 ಕೋಟಿ ರೂಪಾಯಿಗಳಲ್ಲಿ high cost current ಖರೀದಿಯಾಗಿದ್ದು, ಇದರಲ್ಲಿ ಸುಮಾರು ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಿದ್ದೇನೆ. ಕೇವಲ ಒಂದು ಗಂಟೆ load shedding ಮಾಡಿದ್ದರೆ ಈ 2,597 ಕೋಟಿ ರೂಪಾಯಿಗಳನ್ನು ಉಳಿಸಬಹುದಾಗಿತ್ತು.

ಬೇಕಾದರೆ ಇಲಾಖೆಯವರು ಮಾಹಿತಿ ತರಿಸಲಿ, ಮುಖ್ಯಮಂತ್ರಿಗಳು ಮಾಹಿತಿ ಕೊಡಲಿ. ಇವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಹಿಂದಿನವರು ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಹಿಂದೆ ನಾನು ಏನು ಕ್ರಮ ತೆಗೆದುಕೊಂಡಿದ್ದೇನೆ ಎನ್ನುವುದನ್ನು ಮುಖ್ಯಮಂತ್ರಿಗಳು ಉತ್ತರ ಕೊಟ್ಟಮೇಲೆ, ಕ್ಲಾರಿಫಿಕೇಷನ್ ಕೇಳುವ ಸಮಯದಲ್ಲಿ ನಾನು ಹೇಳುತ್ತೇನೆ. ಈ high cost current ಖರೀದಿ ಮಾಡುವ ಅವಶ್ಯಕತೆಯೇ ಇರಲಿಲ್ಲ. ಹಿಂದೆ 2007ರಲ್ಲಿ ನಾನು ಕ್ರಮ ತೆಗೆದುಕೊಂಡಿದ್ದೆ. ಏನು ಮಾಡಿದ್ದೆ ಎನ್ನುವುದನ್ನು ಆಮೇಲೆ ಹೇಳುತ್ತೇನೆ. ಇವತ್ತು ಮುಖ್ಯಮಂತ್ರಿಗಳೇ ಇಂಧನ ಸಚಿವರಾಗಿದ್ದಾರೆ. ಅವರೇ ಹೇಳಲಿ, ಹಿಂದೆ ನಾನು ಏನು ಕ್ರಮ ತೆಗೆದುಕೊಂಡಿದ್ದೆ, 25 ವರ್ಷಗಳ ಕಾಲ ಏನಾಗಬೇಕಿತ್ತು, ಕರೆಂಟ್ ಖರೀದಿ ಯಾವ ರೀತಿ ಮಾಡಬೇಕಾಗಿತ್ತು ಎನ್ನುವ ಮಾಹಿತಿಯನ್ನು ನಾನು ತಮ್ಮ ಗಮನಕ್ಕೆ ಕೊಡುತ್ತಿದ್ದೇನೆ. 2007ರಲ್ಲಿ ನಾನು ಮಂತ್ರಿಯಾಗಿದ್ದಂಥ ಕಾಲದಲ್ಲಿ, ಮುಂದಿನ ಏಳು ವರ್ಷಗಳಿಗೆ 600 ಮೆಗಾವ್ಯಾಟ್ ವಿದ್ಯುತ್ತಿಗೆ national bid tender ಅನ್ನು ಕರೆದಿದ್ದೆವು. ಅದೇ ರೀತಿ ಇನ್ನೊಂದು ಕಡೆ 2,000 ಮೆಗಾವ್ಯಾಟ್‌ಗೆ, ಒಟ್ಟು 2,600 ಮೆಗಾವ್ಯಾಟ್‌ಗೆ ನಾವು P.C.K.L. ಎನ್ನುವ ವಿದ್ಯುತ್ ಖರೀದಿ ಮಾಡುವ ಕಂಪನಿಯ ಮುಖೇನ ನಾವು national bid ಅನ್ನು ಕರೆದಿದ್ದೆವು. ಆ ಟೆಂಡರನ್ನು finalize ಮಾಡಿದ್ದರೆ 2,597 ಕೋಟಿ ರೂಪಾಯಿಗಳಲ್ಲಿ ಕರೆಂಟ್ ಖರೀದಿ ಮಾಡುವುದು ಇರುತ್ತಿತ್ತೇ? ಕೇವಲ 2.50 ರೂಪಾಯಿಗಳಿಂದ 2.75 ರೂಪಾಯಿಗಳಿಗೆ ಕರೆಂಟ್ ಸಿಗುತ್ತಿತ್ತು. ಇನ್ನೂ 25 ವರ್ಷಗಳವರೆಗೆ 2,600 ಮೆಗಾವ್ಯಾಟ್ ವಿದ್ಯುತ್ತನ್ನು ಖರೀದಿ ಮಾಡಲು ನಾವು ಮಾಡಿದ್ದೆವು. ಸರ್ಕಾರ ಯಾವ ಉದ್ದೇಶಕ್ಕಾಗಿ, ಯಾರ ಜೊತೆ ಶಾಮೀಲಾಗಿ 2,597 ಕೋಟಿ ರೂಪಾಯಿಗಳ ವಿದ್ಯುತ್ತನ್ನು ಖರೀದಿ ಮಾಡಿತು ಎನ್ನುವುದನ್ನು ಹೇಳಬೇಕು. ಉದಾಹರಣೆಗೆ ಹೇಳುವುದಾದರೆ, ನಾನು ಅಧಿಕಾರದಲ್ಲಿದ್ದಾಗ high cost ವಿದ್ಯುತ್ತನ್ನು ಖರೀದಿ ಮಾಡಲೇ ಇಲ್ಲ. ತಣ್ಣೀರುಬಾವಿ ಯೋಜನೆಯ ವಿದ್ಯುತ್ ಒಂದು ಯೂನಿಟ್ಟಿಗೆ 10 ರೂಪಾಯಿ ಆಗುತ್ತಿತ್ತು. ಅವರಿಂದ ಕರೆಂಟ್ ತೆಗೆದುಕೊಳ್ಳದಿದ್ದರೆ 2.50 ರೂಪಾಯಿಗಳನ್ನು

ಕೊಡಬೇಕಾಗಿತ್ತು. ನಾವು 2.50 ರೂಪಾಯಿಗಳನ್ನು ಕೊಟ್ಟುಕೊಂಡು, ಒಂದು ಯೂನಿಟ್‌ನ್ನು 50 ಪೈಸೆಯಿಂದ 2.50 ರೂಪಾಯಿಗಳವರೆಗೆ ಖರೀದಿ ಮಾಡಿರುವುದನ್ನು ಮುಖ್ಯಮಂತ್ರಿಗಳು ಕಡತ ತೆಗೆದು ನೋಡಲಿ. ಹಿಂದೆ ನಾನು central gridನಿಂದ ಎಲ್ಲೆಲ್ಲಿ ಖರೀದಿ ಮಾಡಿದ್ದೇವೆ ಎನ್ನುವುದನ್ನು ನೋಡಲಿ. 6 ತಿಂಗಳ ಮುಂಚೆಯೇ ನಾವು ಅದಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದೆವು. ಈ ಸರ್ಕಾರ ಬಂದ ಮೇಲೆ ಏನು ಮಾಡಿದೆ ಎನ್ನುವುದನ್ನು ಹೇಳಬೇಕು. ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳ ನಷ್ಟ ಎಷ್ಟು ಎನ್ನುವುದನ್ನು ಹೇಳಬೇಕಾಗುತ್ತದೆ. ಇದನ್ನು ಹೇಳುತ್ತಿರುವುದು ನಾನಲ್ಲ. K.E.R.C. ಯವರು ದಿನಾಂಕ: 4–9–2008 ರಲ್ಲಿ ಆದೇಶ ಕೊಟ್ಟಿದ್ದಾರೆ. ಏನು ಆದೇಶ ಕೊಟ್ಟಿದ್ದಾರೆ ಎಂದರೆ, ಆದಾಯದಲ್ಲಿ ಇದ್ದಂಥ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯನ್ನು 2008–09ರಲ್ಲಿ ನಷ್ಟಕ್ಕೆ ತಂದಿದ್ದಾರೆ. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಇದನ್ನು ಮುಚ್ಚಬೇಕಾದಂಥ ಪರಿಸ್ಥಿತಿ ಬರುತ್ತದೆ ಎಂದು ಹೇಳಿದ್ದಾರೆ. ಇದನ್ನು ಹೇಳಿರುವುದು ನಾನಲ್ಲ. K.E.R.C.ಯವರು ಮಾಡಿರುವಂಥ ಆದೇಶದ ಒಂದು ಪ್ರತಿಯನ್ನು ತಮ್ಮ ಗಮನಕ್ಕಾಗಿ ಕೊಡುತ್ತಿದ್ದೇನೆ. ರಾಜ್ಯದಲ್ಲಿರುವ ಐದು ವಿದ್ಯುತ್ ಸರಬರಾಜು ಕಂಪನಿಗಳು ಎಷ್ಟು ನಷ್ಟ ಅನುಭವಿಸಿವೆ, ವಿದ್ಯುತ್ ಖರೀದಿಯಲ್ಲಿ ಎಷ್ಟು ನಷ್ಟವಾಗಿದೆ ಎನ್ನುವ ಮಾಹಿತಿಯನ್ನು ತಮ್ಮ ಗಮನಕ್ಕೆ ಕೊಡುತ್ತೇನೆ. 2008, ಈ ಒಂದು ವರ್ಷದಲ್ಲಿಯೇ ಸುಮಾರು 3,000 ಕೋಟಿ ರೂಪಾಯಿ ನಷ್ಟವಾಗಿದೆ. ನಮ್ಮ ಹತ್ತಿರ ಎಲ್ಲ ಮಾಹಿತಿ ಇದೆ. ಮಾಹಿತಿ ಇಲ್ಲದೇ ನಾನು ಮಾತನಾಡುವುದಿಲ್ಲ. ಯಾವುದೇ ವಿಷಯವಿದ್ದರೂ ಮಾಹಿತಿ ತೆಗೆದುಕೊಂಡೇ ನಾವು ಮಾತನಾಡಬೇಕಾಗುತ್ತದೆ. ಅದಕ್ಕೋಸ್ಕರ ಮಾಹಿತಿ ಇಟ್ಟುಕೊಂಡೇ ಮಾತನಾಡುತ್ತಿದ್ದೇನೆ, ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ಮಾಹಿತಿ ಎಲ್ಲವೂ ನಿಮ್ಮ ಹತ್ತಿರವೇ ಇರುವಂತಿದೆ. ಅದರ ಕಾಪಿಯನ್ನಾದರೂ ಕಳುಹಿಸಿಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಯಾವುದೇ ಕಾಪಿ ಬರುವುದಿಲ್ಲ. ಯಾವುದೇ ಕಾಪಿ ಬರದ ಹಾಗೆ ನೀವು ಎಲ್ಲದಕ್ಕೂ ಬೀಗ ಹಾಕಿ, ವಿರೋಧ ಪಕ್ಷದವರ್ಯಾರಿಗೂ ಕೊಡಬಾರದು ಎಂದು ನೀವೇ ಹೇಳಿಬಿಟ್ಟಿದ್ದೀರಲ್ಲ. ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಕಾಪಿ ಕೊಡಿ ಎಂದು ಕೇಳಿದರು. ಇಲ್ಲ ಸ್ವಾಮಿ, ನಾವು ಬೀಗ ಹಾಕಿಟ್ಟುಕೊಂಡಿದ್ದೇವೆ ಎಂದು ಹೇಳಿದಿರಿ. ಸರ್ಕಾರದ ದಾಖಲೆಗಳ ಕಾಪಿಯನ್ನು ಕೇಳುವುದಕ್ಕೋಸ್ಕರವಾಗಿಯೇ ಇವತ್ತು ಕೆಲವರು KIADB ಮುಂದೆ ಧರಣಿ ಮಾಡುತ್ತಿದ್ದಾರೆ. ಆ ಪರಿಸ್ಥಿತಿ ಬಂದಿದೆ. ನನ್ನ ಹತ್ತಿರ ದಾಖಲಾತಿ ಇಲ್ಲ, ಇರುವಂಥ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಷ್ಟೇ.

ಶ್ರೀ ಉಮೇಶ್ ವಿ. ಕತ್ತಿ: ನಮಗೇ ಸಿಗಲಿಲ್ಲ, ನಿಮಗೆ ಹೇಗೆ ಸಿಕ್ಕಿತು?

ಶ್ರೀ ಹೆಚ್.ಡಿ. ರೇವಣ್ಣ : ಉಮೇಶ್ ಕತ್ತಿಯವರೇ ತಮ್ಮ ಖಾತೆ ಸರಿಯಿಲ್ಲ, ಅದಕ್ಕೋಸ್ಕರವಾಗಿ ನೀವೆಲ್ಲ ಮಾತನಾಡಬೇಕು ಎಂದು ಹೇಳಿ, ಕೆಲವು ಮಾಹಿತಿಗಳನ್ನು ಕಳುಹಿಸಿಕೊಟ್ಟಿದ್ದಾರೆ. BESCOM ನಲ್ಲಿ 2007ರವರೆಗೆ, ಈ ಖಾತೆಯನ್ನು ನಾನು ಬಿಡುವಂಥ ಸಂದರ್ಭದಲ್ಲಿ 480 ಕೋಟಿ ರೂಪಾಯಿಗಳ ಠೇವಣಿ ಇತ್ತು. ಆದರೆ 2008–09ರಲ್ಲಿ 994 ಕೋಟಿ ರೂಪಾಯಿ ನಷ್ಟವಾಗಿದೆ. ಅದೇ ರೀತಿ, MESCOM ನಲ್ಲಿ 278 ಕೋಟಿ ರೂಪಾಯಿಗಳ ನಷ್ಟವಾಗಿದೆ. CHESCOM ನಲ್ಲಿ 484 ಕೋಟಿ ರೂಪಾಯಿಗಳ ನಷ್ಟವಾಗಿದೆ. HESCOMನಲ್ಲಿ 1,246 ಕೋಟಿ ನಷ್ಟವಾಗಿದೆ. GESCOMನಲ್ಲಿ ಕೋಟಿ ರೂಪಾಯಿಗಳ ನಷ್ಟವಾಗಿದೆ. 2008–09 ಈ ಒಂದು ವರ್ಷದಲ್ಲಿಯೇ ಒಟ್ಟು 3,491 ಕೋಟಿ ರೂಪಾಯಿ ನಷ್ಟವಾಗಿದೆ. ಅವರ ಇಲಾಖೆಯ ಮಾಹಿತಿಯ ಪ್ರಕಾರವೇ ಇದನ್ನು ನಾನು ಹೇಳುತ್ತಿದ್ದೇನೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಏನಾದರೂ ಇದ್ದರೆ ನಂತರ ಮುಖ್ಯಮಂತ್ರಿಗಳು ಹೇಳಲಿ. 2008–09ರಲ್ಲಿ 3,491 ಕೋಟಿ ರೂಪಾಯಿ ನಷ್ಟವಾಗಿದೆ. ಇವತ್ತು 5 ಕಂಪನಿಗಳ ನಷ್ಟ ಎಷ್ಟು ಎನ್ನುವುದನ್ನು KERC ಮುಂದೆ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 2009–10ಕ್ಕೆ BESCOMಗೆ ಸಂಭಾವಿತ 1694 ಕೋಟಿ ರೂ.ಗಳು.,

MESCOMಗೆ ಸಂಭಾವಿತ ನಷ್ಟ 417 ಕೋಟಿ ರೂ.ಗಳು, GESCOM ಗೆ ಸಂಭಾವಿತ ನಷ್ಟ 412 ಕೋಟಿ ರೂ.ಗಳು, CHESCOM ಗೆ ಸಂಭಾವಿತ ನಷ್ಟ 259 ಕೋಟಿ ರೂ.ಗಳು, HESCOM ಗೆ ಸಂಭಾವಿತ ನಷ್ಟ 707 ಕೋಟಿ ರೂ.ಗಳು 2008–09 ಮತ್ತು 2009–10 ಸೇರಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎರಡು ವರ್ಷಗಳಲ್ಲಿ ಒಟ್ಟು 5830 ಕೋಟಿ ರೂ.ಗಳ ನಷ್ಟ ಈ ಐದೂ ಕಂಪನಿಗಳಿಗೆ ಆಗಿದೆ ಎನ್ನುವುದನ್ನು ನಾನು ಹೇಳುತ್ತಿಲ್ಲ, KERC ಮುಂದೆ ಐದೂ ಕಂಪನಿಗಳು ಸಂಭಾವಿತ ನಷ್ಟ ಇಷ್ಟಾಗುತ್ತದೆಂಬುದನ್ನು ಹೇಳಿರುವ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ಬೇಡಿಕೆ ಜಾಸ್ತಿ ಇದೆ, ಆಗ ಬೇಡಿಕೆ ಇರಲಿಲ್ಲ ಎನ್ನುವ ಭಾವನೆ ಬರಬಾರದು. 2004–05ರಲ್ಲಿ ಲಿಂಗನಮಕ್ಕಿಯಲ್ಲಿ ಎಷ್ಟು ಪ್ರಮಾಣದಲ್ಲಿ ನೀರಿತ್ತು? 2008–09ರಲ್ಲಿ ಎಷ್ಟು ನೀರಿತ್ತು? ಆ ಬಗ್ಗೆಯೂ ಎರಡು ವರ್ಷಗಳ average ಅನ್ನು ತಮ್ಮ ಗಮನಕ್ಕೆ ತರುತ್ತೇನೆ. 2004–05ಕ್ಕೆ ಮತ್ತು 2008–09ಕ್ಕೆ ಹೋಲಿಸಿದರೆ, ಇವತ್ತು ನೀರಿನ ಒಳ ಹರಿವು ಜಾಸ್ತಿ ಇದೆ. ಆದರೂ ಸಹ ಇವತ್ತು ಬೇಡಿಕೆ ಎಷ್ಟಿದೆ? ಕೊರತೆ ಎಷ್ಟಿದೆ? 2007–08ರಲ್ಲಿ 24.92% ಕೊರತೆ ಇತ್ತು. 2008–09ರಲ್ಲಿ 26.57% ಕೊರತೆ ಇರುವುದು. ಅಂದರೆ ಕೇವಲ 1.6% peak load ಕೊರತೆ ಇರುವುದು. 1.6% peak load ನಷ್ಟು ಮಾತ್ರ ಕೊರತೆ ಇದ್ದರೆ ಅದಕ್ಕೆ ಇವರು 2500 ಕೋಟಿ ರೂ.ಗಳಷ್ಟು ವಿದ್ಯುತ್ ಅನ್ನು 2008–09ಕ್ಕೆ purchase ಮಾಡುವ ಅವಶ್ಯಕತೆ ಇತ್ತೇ? ಇವತ್ತು ಕೇವಲ 6% ಮಾತ್ರ ವಿದ್ಯುತ್ ಬೇಡಿಕೆ ಲಭ್ಯವಿರುವುದು. ಇಷ್ಟೆಲ್ಲಾ ಇದ್ದರೂ, high cost ವಿದ್ಯುತ್ purchase ಮಾಡುವ ಅವಶ್ಯಕತೆ ಇತ್ತೇ? ಇದಲ್ಲದೆ, ಇವತ್ತು ರಾಜ್ಯದಲ್ಲಿನ ಐದೂ ಕಂಪನಿಗಳಿಂದ (BESCOM, MESCOM, HESCOM, MESCOM, CHESCOM) revenue ವಸೂಲಿ ಎಷ್ಟಿದೆ ಎನ್ನುವ ಬಗ್ಗೆ ಹೇಳುತ್ತೇನೆ. ಸುಮಾರು 26608 ಕೋಟಿ ರೂ.ಗಳಷ್ಟು ಬಾಕಿ ವಸೂಲಿಯಾಗಬೇಕಾಗಿದೆ. ಏಕೆ ವಸೂಲು ಮಾಡಿಲ್ಲ? ಕಾರಣವೇನು? ಇದರ ಉದ್ದೇಶವೇನು? ಇದರಲ್ಲಿ ಯಾರ್ಯಾರಿದ್ದಾರೆ? ಸಾಹುಕಾರರು, ಬಡವರು ಎಷ್ಟಿದ್ದಾರೆ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಹಾಸನದಲ್ಲಿ, ಮೈಸೂರಿನಲ್ಲಿ, ಚಿಕ್ಕಮಗಳೂರಿನಲ್ಲಿ ಎಷ್ಟು ಬಾಕಿ ಇದೆ ಎನ್ನುವ ಬಗ್ಗೆ ಜಿಲ್ಲಾವಾರು ಮಾಹಿತಿ ಹೇಳಿದರೆ ಒಳ್ಳೆಯದು.

ಶ್ರೀ ಹೆಚ್.ಡಿ. ರೇವಣ್ಣ : ಜಿಲ್ಲಾವಾರು ಮಾಹಿತಿಯನ್ನು ಸರ್ಕಾರದವರು ತರಿಸಿಕೊಂಡು ಹೇಳುವುದಕ್ಕೆ ಮುಖ್ಯಮಂತ್ರಿಗಳಿಗೆ ಶಕ್ತಿ ಇದೆ. ಅವರು ಹೇಳಬೇಕು. 26609 ಕೋಟಿ ರೂ. ಬಾಕಿ ಇದೆ. ಐದು ಕಂಪನಿಗಳ ಸಾಲವನ್ನು 2007–08ಕ್ಕೆ ಹೋಲಿಸಿದರೆ 5778 ಕೋಟಿ ರೂ. ಸಾಲವಿತ್ತು. ಸಾಲವಿದ್ದದ್ದು ಒಂದೇ ವರ್ಷಕ್ಕೆ 8009 ಕೋಟಿ ರೂ.ಗಳಿಗೆ ಏರಿದೆ. ಒಂದು ಕಡೆ ಸಾಲ, ಇನ್ನೊಂದು ಕಡೆ ನಷ್ಟ, ಮತ್ತೊಂದು ಕಡೆ 26000 ಕೋಟಿ ರೂ.ಗಳ ಬಾಕಿ ವಸೂಲಿಯಾಗಿಲ್ಲ. ಐದು ಕಂಪನಿಗಳ ಸಾಲದ ಪಟ್ಟಿಯನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕಾಗುತ್ತದೆ. 6 ವರ್ಷಗಳಲ್ಲಿ ಈ ಐದೂ ಕಂಪನಿಗಳಿಗೆ ಎಷ್ಟೆಷ್ಟು ಬಾಕಿ ಬರಬೇಕೆನ್ನುವುದನ್ನು ಗಮನಕ್ಕೆ ತಂದಿದ್ದೇನೆ. 1000 ಮೆ.ವ್ಯಾ. ವಿದ್ಯುತ್ ಅನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಅದನ್ನು ಎಲ್ಲಿಂದ ತರುತ್ತಾರೆ? ಯಾವ ರಾಜ್ಯದಲ್ಲಿ ವಿದ್ಯುತ್ ಹೆಚ್ಚಿದೆ ಎನ್ನುವುದನ್ನು ಸದನಕ್ಕೆ ತಿಳಿಸಬೇಕು. 'ಜನತೆಗೆ ಇನ್ನು ತುಸು ನೆಮ್ಮದಿ. ನಮ್ಮ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ 6 ಗಂಟೆ ವಿದ್ಯುತ್ ನೀಡುವಂತೆ ಒತ್ತಾಯಿಸಿ ಬೆಂಗಳೂರಿನ KPTCL ಕಛೇರಿ ಎದುರು ಸೋಮವಾರ ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ಧರಣಿ ನಡೆಸಿದಾಗ ಜಲಸಂಪನ್ಮೂಲ ಸಚಿವರಾದ ಬಸವರಾಜ ಬೊಮ್ಮಾಯಿಯವರು ಹೋಗಿ ಅವರ ಹತ್ತಿರ ಮನವಿ ತೆಗೆದುಕೊಂಡು 1000 ಮೆ.ವ್ಯಾ. ವಿದ್ಯುತ್ ಅನ್ನು ನಾವು ಒದಗಿಸುತ್ತೇವೆಂದು' ಹೇಳಿದ್ದಾರೆ. ಆ ವಿದ್ಯುತ್ ಅನ್ನು ಎಲ್ಲಿಂದ ತರುತ್ತಾರೆ. ವಿದ್ಯುತ್ ಯಾವ ರಾಜ್ಯದಲ್ಲಿದೆ ಎಂದು ಹೇಳಬೇಕು. ಛತ್ತೀಸ್‌ಗಡ ಮತ್ತು ಒರಿಸ್ಸಾ ರಾಜ್ಯಗಳನ್ನು ಬಿಟ್ಟರೆ ಬೇರೆಲ್ಲೂ ಹೆಚ್ಚು ವಿದ್ಯುತ್ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆ ವಿದ್ಯುತ್ ತರುವುದಕ್ಕೆ ಲೈನ್ ಏನಾದರೂ ರೆಡಿಯಾಗಿದೆಯೇ? 1000 ಮೆ.ವ್ಯಾ. ವಿದ್ಯುತ್ ಕೊಡುತ್ತೇನೆಂದು ಅವರು ಹೇಳಿದರೂ ಅಲ್ಲಿಂದ ತರುವುದಕ್ಕೆ ಅವಕಾಶವಿದೆಯೇ

ಎನ್ನುವುದನ್ನಾದರೂ ಹೇಳಲಿ. ರಾಜ್ಯದ ಜನತೆಗೆ ಸರ್ಕಾರ ಎಷ್ಟು ದಿವಸ ಸುಳ್ಳನ್ನು ಹೇಳುವುದಕ್ಕಾಗುತ್ತದೆ? ಚುನಾವಣೆ ಸಂದರ್ಭದಲ್ಲಿ free ಯಾಗಿ ಕರೆಂಟ್ ಕೊಡುತ್ತೇವೆಂದು ಸುಳ್ಳು ಹೇಳಿದರು. ಇವತ್ತು 1000 ಮೆ.ವ್ಯಾ. ವಿದ್ಯುತ್ ತರುತ್ತೇವೆಂದು ಹೇಳಿದ್ದೀರಿ, ಎಲ್ಲಿಂದ ತರುತ್ತೀರಿ? ಉದಾಹರಣೆಗೆ ಹೇಳುವುದಾದರೆ, ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ, ನಾಗಾರ್ಜುನ ಕಂಪನಿಯಿಂದ 900 ಮೆ.ವ್ಯಾ. ವಿದ್ಯುತ್ ತರುತ್ತೇವೆಂದು ಹೇಳಿದರು. ದಯಮಾಡಿ, ಆ ವಿದ್ಯುತ್ ಅನ್ನು ಯಾವ ರೀತಿ ತರುತ್ತಾರೆನ್ನುವುದನ್ನು ಹೇಳಬೇಕು. ನಾಗಾರ್ಜುನ ಕಂಪನಿಯಿಂದ ಇನ್ನು 5–6 ತಿಂಗಳಲ್ಲಿ 900 ಮೆ.ವ್ಯಾ. ವಿದ್ಯುತ್ ಅನ್ನು ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಮೊನ್ನೆಯ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಆ project ಕೆಲಸ ಮುಗಿಯಬೇಕಾಗಿತ್ತು. ಆದರೆ, ಇವತ್ತಿನವರೆಗೂ ಅದರ ಕೆಲಸ ಮುಗಿದಿಲ್ಲ. ಉಡುಪಿ power plant ನಿಂದ 900 ಮೆ.ವ್ಯಾ. ವಿದ್ಯುತ್‌ಗೆ ಯೂನಿಟ್‌ಗೆ 2.50 ರೂ.ನಂತೆ PPA ಯನ್ನು ಹಿಂದೆ ನಾವು ಮಾಡಿದ್ದೆವು. ಇಷ್ಟು ಹೊತ್ತಿಗೆ ಸರಬರಾಜು ಮಾಡಿ ಎರಡು ವರ್ಷಗಳಾಗಬೇಕಾಗಿತ್ತು. ಇದಕ್ಕೆ ಅಡ್ಡಿಪಡಿಸಿದವರು ಯಾರೆಂಬುದನ್ನು ಹೇಳಬೇಕು. ಮುಖ್ಯಮಂತ್ರಿಯವರು ಆ ಯೋಜನೆಯನ್ನು 9 ತಿಂಗಳಲ್ಲಿ ಪೂರ್ಣಗೊಳಿಸುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಸುಳ್ಳು ಹೇಳಿಸಿದ್ದಾರೆನ್ನುವುದಕ್ಕೆ ಇದೊಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ನಾಗಾರ್ಜುನ ಕಂಪನಿಯಿಂದ 900 ಮೆ.ವ್ಯಾ. ವಿದ್ಯುತ್ ತರುವುದಕ್ಕೆ ಲೈನ್ ಇದೆಯೇ? ಅದನ್ನು ತರಲು 400 ಕೆ.ವಿ. transmission line ಹಾಕಬೇಕಾಗುತ್ತದೆ. ಆ ಕೆಲಸವಾಗಿದೆಯೇ? ಆ ಕೆಲಸವಾಗಬೇಕಾದರೆ ಇವತ್ತಿನಿಂದ ಕಷ್ಟಪಟ್ಟು ಮಾಡಿದರೂ ಇನ್ನೂ 2–3 ವರ್ಷಗಳು ಬೇಕಾಗುತ್ತದೆ. ಈ 400 ಕೆ.ವಿ. transmission line ಹಾಕಿ ನಾವು ವಿದ್ಯುತ್ ತೆಗೆದುಕೊಳ್ಳದಿದ್ದರೆ, ಅದನ್ನು ತೆಗೆದುಕೊಳ್ಳುವವರೆಗೂ ಆ ಕಂಪನಿಗೆ ಯೂನಿಟ್ ಒಂದಕ್ಕೆ 2.50 ರೂ.ನಂತೆ ಸುಮ್ಮನೆ ಕೊಡುತ್ತಿರಬೇಕಾಗುತ್ತದೆ. ಇದರ ಬಗ್ಗೆ ಏನಾದರೂ ಜಾಸ್ತಿ ಮಾಡುವುದಕ್ಕೆ ಮೀಟಿಂಗ್ ಆಗಿರಬಹುದು.

ಏಕೆಂದರೆ, PPA ಇರುವುದನ್ನು 3.20 ರೂ. ಇದ್ದುದ್ದನ್ನು 6.50 ರೂ.ಗೆ ಮಾಡಿದರಲ್ಲ, ಅದೇ ರೀತಿ ನಾಗಾರ್ಜುನ ಕಂಪನಿಗೆ ಜಾಸ್ತಿ ಕೊಡಬೇಕೆಂದು ಒಂದು ಸುತ್ತಿನ ಮಾತುಕತೆ ನಡೆದಿದೆಯೇನೋ ಗೊತ್ತಿಲ್ಲ. ಆ ಲೈನ್ ಎಳೆಯಬೇಕಾದ ಕೆಲಸವೇನಾಗಬೇಕಾಗಿತ್ತು ಅದು ಇವತ್ತಿನವರೆಗೂ ಆಗಿಲ್ಲ. ಒಂದು ಯೂನಿಟ್‌ಗೆ ರೂ.2.50ರಂತೆ ಕೊಟ್ಟು ವಿದ್ಯುತ್ ತರುವುದಕ್ಕೆ ಈ ಹಣ ಯಾರದು? ಆ ಲೈನ್ ಎಳೆಯಲಿ, ಬಿಡಲಿ ಅವರಿಗೆ ಯೂನಿಟ್ ಒಂದಕ್ಕೆ 2.50 ರೂ. free ಆಗಿ ಕೊಡಲೇಬೇಕು. 2.50 ರೂ. ನಂತೆ ಲೆಕ್ಕ ಹಾಕಿದರೆ ಎಷ್ಟು ಲುಕ್ಸಾನು ಆಗುತ್ತದೆ ಎನ್ನುವುದನ್ನು ಇಂಧನ ಇಲಾಖೆಯನ್ನು ವಹಿಸಿಕೊಂಡ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಇದರಿಂದ ಎಷ್ಟು ಲುಕ್ಸಾನು ಆಗುತ್ತದೆ, ಕಾರಣವೇನು, ಯಾವ ಉದ್ದೇಶದಿಂದ ಆಗಿದೆ? 900 MW ವಿದ್ಯುತ್ ತೆಗೆದುಕೊಳ್ಳುವ ಸಂಬಂಧ ಲೈನ್ ಎಳೆದಿಲ್ಲ, ಕೆಲಸ ಆಗಿಲ್ಲ ಇದರಿಂದ ಈ ಐದೂ ಕಂಪನಿಗಳ ಮೇಲೆ burden ಬೀಳುತ್ತದೆ. ಕೇಂದ್ರ ಸರ್ಕಾರದ ಮೇಲೆ, ಇವರು ಕರೆಂಟ್ ಕೊಡಲಿಲ್ಲ, ಅವರು ಕರೆಂಟ್ ಕೊಡಲಿಲ್ಲ ಎಂದು ಆಪಾದನೆ ಮಾಡುವುದು ಇದೆ. ಜುರಾಲ ಅಂತರರಾಜ್ಯ ವಿದ್ಯುತ್ ಯೋಜನೆಯಿಂದ 130 MW ವಿದ್ಯುತ್ ಬರಬೇಕು. ಕರ್ನಾಟಕದ ಪಾಲು ಏನಿದೆ ಅದನ್ನು ತೆಗೆದುಕೊಳ್ಳುವುದಕ್ಕೆ, ಆಂಧ್ರ ಪ್ರದೇಶದಿಂದ ಪಡೆಯುವುದಕ್ಕೆ ರಾಜ್ಯ ಸರ್ಕಾರ ಏನು ಪ್ರಯತ್ನ ಮಾಡಿದೆ? ಏನು ಕ್ರಮ ತೆಗೆದುಕೊಂಡಿದೆ? ಇರುವ 130 MW ವಿದ್ಯುತ್ ಅನ್ನೇ ತೆಗೆದುಕೊಳ್ಳುವುದಕ್ಕೆ ಇವರಿಗೆ ಅವಕಾಶವಿಲ್ಲ. ಒಂದು ಕಡೆ ನಾಗಾರ್ಜುನ ಕಂಪನಿಯಿಂದ ವಿದ್ಯುತ್ ತೆಗೆದುಕೊಳ್ಳುವ ಕೆಲಸ 2 ವರ್ಷಗಳಲ್ಲಿ ಆಗಬೇಕಾಗಿತ್ತು. ಆದರೆ, ಆಗಲಿಲ್ಲ. ಐದೂ ಕಂಪನಿಗಳ ಮೇಲೆ burden ಬೀಳುತ್ತಿದೆ. ಉದಾಹರಣೆಗೆ ನಾವು 2007ರಲ್ಲಿ 7 ವರ್ಷಗಳಿಗೆ, 25 ವರ್ಷಗಳಿಗೆ tender ಕರೆದಿದ್ದರೆ 2600 MW ವಿದ್ಯುತ್ ಕೇವಲ 2.50 ರೂ.ಗೆ ಸಿಗುತ್ತಿತ್ತು. ಇವತ್ತು 8–9 ರೂ. ಗೆ ಖರೀದಿ ಮಾಡುವ ಅವಶ್ಯಕತೆಯೇ ಇರಲಿಲ್ಲ. ಸರ್ಕಾರ ಯಾವ ರೀತಿ ಎಡವುತ್ತಿದೆ ಎನ್ನುವುದನ್ನು ನೋಡಬೇಕು. ಹಿಂದಿನ ಸರ್ಕಾರ ಮಾಡಿಲ್ಲ ಎಂದು ಹಿಂದಿನ ಸರ್ಕಾರದ ಮೇಲೆ ಆಪಾದನೆ ಮಾಡುತ್ತೀರಲ್ಲ. ಅದರ ಬಗ್ಗೆ

ನಾನು ಎಳೆಎಳೆಯಾಗಿ ಬಿಡಿಸಿ ಹೇಳುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ನಾಗಾರ್ಜುನ ಕಂಪನಿಯಿಂದ ಇನ್ನು 9 ತಿಂಗಳಲ್ಲಿ 900 MW ವಿದ್ಯುತ್ ಅನ್ನು ತಂದು ಕೊಡುತ್ತೇವೆಂದು ಹೇಳಿಸಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ರೇವಣ್ಣನವರೆ, ನೀವು ಈ ಇಲಾಖೆಯ ಬಗ್ಗೆ ಒಂದು ರೀತಿ expert ಇದ್ದೀರಿ. ಎಲ್ಲವೂ ನಿಮಗೆ ಗೊತ್ತಿದೆ. ತಮ್ಮ ಕಾಲಾವಧಿಯಲ್ಲಿ grid ಗೆ ಹೊಸದಾಗಿ ವರ್ಷಕ್ಕೆ ಎಷ್ಟು ವಿದ್ಯುತ್ ಸೇರ್ಪಡೆ ಮಾಡಿದ್ದೀರಿ? ಯಾವುದಾದರೂ ಒಂದು ವರ್ಷ 500 MW ದಾಟಿದಂಥ ಉದಾಹರಣೆ ಇದೆಯೇ? ನಿಮ್ಮ period ನಲ್ಲಿ, ಬೇರೆ ಬೇರೆ period ನಲ್ಲಿ ಆಗಿರುವ ಬಗ್ಗೆ ನಿಮ್ಮ ಹತ್ತಿರ ಎಲ್ಲಾ ದಾಖಲೆ ಇದೆಯಲ್ಲವೇ? ಯಾವ್ಯಾವ ವರ್ಷ ಎಷ್ಟೆಷ್ಟು ವಿದ್ಯುತ್ ಸೇರಿಸಿದ್ದಾರೆ? 480–500 MW ಗಿಂತ ಹೆಚ್ಚು ಎಂದೂ ಸೇರಿಸದೇ ಇದ್ದರೆ demand ಗೆ ತಕ್ಕಂತೆ ಕೊರತೆಯನ್ನು ಪೂರೈಸುವುದಾದರೂ ಹೇಗೆ? ಅಧಿಕಾರದಲ್ಲಿದ್ದವರು ನೀವು? ಇಲಾಖೆಯನ್ನು ನೋಡಿದವರು ನೀವು. ಹೆಚ್ಚು ವಿದ್ಯುತ್ ಉತ್ಪಾದನೆ ಕಡೆ ಗಮನ ಕೊಡದಿದ್ದವರು ನೀವು. ಆರೋಪ ಮಾಡುತ್ತಿರುವವರೂ ನೀವೇ? ನಾವೇನು ಉತ್ತರ ಕೊಡೋಣ? ಹಾಗಾದರೆ, ಯಡಿಯೂರಪ್ಪನವರೆ, ನಮ್ಮ ಕಾಲದಲ್ಲಿ ಇಷ್ಟು ವರ್ಷದಿಂದ ಇಷ್ಟು ವರ್ಷಕ್ಕೆ ಇಷ್ಟು ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಿದೆವು, ನೀವು ಬಂದ ಮೇಲೆ ಹಳೆಯದನ್ನು ಯಾವುದನ್ನೂ improve ಮಾಡಲಿಲ್ಲ, ವಿದ್ಯುತ್ ಉತ್ಪಾದನೆ ಕಡೆಗೆ ಗಮನ ಕೊಡಲಿಲ್ಲ ಎಂದು ಹೇಳಿದರೆ ನಾನು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ನಮ್ಮ ಕಾಲದಲ್ಲಿ ಏನು ಮಾಡಿದೆವು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಬಯಸಿದ್ದಾರೆ. ಅದನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ. ಅಧಿಕಾರಿಗಳು ನಿಮಗೆ ಸರಿಯಾಗಿ ಚೀಟಿ ಬರೆದುಕೊಡುವುದಿಲ್ಲ. ನೀವು ಅಧಿಕಾರಿಗಳಿಂದ correct ಆಗಿ ಚೀಟಿ ಬರೆಸಿಕೊಂಡು ಹೇಳಬೇಕು. ಅವರು ಸುಮ್ಮನೆ ನಿಮ್ಮ ಕೈಯಲ್ಲಿ ತಪ್ಪು ಮಾಹಿತಿ ಹೇಳಿಸಿ ಸದನದಲ್ಲಿ ನಿಮ್ಮನ್ನು ಪೇಚಿಗೆ ಸಿಲುಕಿಸುತ್ತಾರೆ.

ರಾಜ್ಯಪಾಲರ ಭಾಷಣದಲ್ಲಿ, 'ನನ್ನ ಸರ್ಕಾರವು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ವಿದ್ಯುತ್ ಯೋಜನೆಗಳ ಅಭಿವೃದ್ಧಿಗಾಗಿ ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಬಿಜಾಪುರ ಜಿಲ್ಲೆಯ ಕೊಡ್ಲಿಗಿಯಲ್ಲಿ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮವು (NTPC) ಸ್ಥಾಪಿಸುವ 4000 ಮೆಗಾವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಯೋಜನೆಗಾಗಿ ಭೂಸ್ವಾಧೀನವನ್ನು ಆರಂಭಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು BHELನ ಸಹಯೋಗದಲ್ಲಿ ಯರಮರಸ್‌ನಲ್ಲಿ 1600 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿದೆ ಮತ್ತು ಯಡ್ಲಾಪುರದಲ್ಲಿ 800 ಮೆಗಾವ್ಯಾಟ್ ಸಾಮರ್ಥ್ಯದ ಕಾಮಗಾರಿಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಿದೆ. ಈ ಎರಡೂ ಯೋಜನೆಗಳಿಗೆ ಪರಿಸರ ಇಲಾಖೆಯ ಅನುಮೋದನೆ ದೊರೆತಿವೆ. 2 x 699 ಮೆಗಾವ್ಯಾಟ್ ಉಡುಪಿ ವಿದ್ಯುತ್ ಯೋಜನೆ ಈ ವರ್ಷದ ಮಧ್ಯ ಭಾಗದಲ್ಲಿ ಆರಂಭವಾಗುವ ನಿರೀಕ್ಷೆ ಇದೆ' ಎಂದು ಹೇಳಿಸಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ಹೇಳಿದಂತೆ 600 ಮೆಗಾವ್ಯಾಟ್ ವಿದ್ಯುತ್ ಅನ್ನು ಈ ವರ್ಷದಲ್ಲಿ ಕೊಡುವುದಕ್ಕೆ ನೀವು ಶಕ್ತರಿದ್ದೀರಾ? ಉಡುಪಿ ಪವರ್ ಪ್ಲಾಂಟ್‌ನಿಂದ ವಿದ್ಯುತ್ ತೆಗೆದುಕೊಳ್ಳುವುದಕ್ಕೆ 400 ಕೆ.ವಿ. transmission line ಎಳೆದಿದ್ದೀರಾ? ಈ ಕೆಲಸ ಮುಗಿದಿದೆಯೇ? ಎನ್ನುವ ಬಗ್ಗೆ ನಿಮ್ಮ ಅಧಿಕಾರಿಗಳಿಂದ ಮಾಹಿತಿ ತೆಗೆದುಕೊಳ್ಳಿ. ಇದನ್ನು ಮಾಡುತ್ತಾರೋ ಇಲ್ಲವೋ? ಇದನ್ನು ಮಾಡುವುದಕ್ಕೆ ಇನ್ನೂ 3 ವರ್ಷ ಬೇಕು. ಮಾಡಿಲ್ಲವೆಂದರೆ ಸಭೆಗೆ ಹೇಳಿ. ಇಲ್ಲವೆಂದು ಹೇಳಿಬಿಟ್ಟರೆ ನೀವು ಹೇಳಿದ್ದಕ್ಕೆ ನಾನು ಭಾಗಿಯಾಗುತ್ತೇನೆ. ಇಲ್ಲವೆಂದರೆ ನಾಗಾರ್ಜುನ ಕಂಪನಿಯಿಂದ ನೀವು ಕರೆಂಟ್ ತೆಗೆದುಕೊಳ್ಳಲಿ ಬಿಡಲಿ ನೀವು 2.50 ರೂ. ನಂತೆ PPA agreement ಪ್ರಕಾರ ಅವರಿಗೆ ಹಣ ಕೊಡಲೇಬೇಕು. ಕೊಡಬೇಕೋ ಇಲ್ಲವೋ ಹೇಳಲಿ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಉದಾಹರಣೆಗೆ ಬಳ್ಳಾರಿ ಯೂನಿಟ್‌ನಿಂದ 500 MW ವಿದ್ಯುತ್ ಪಡೆಯುವುದಕ್ಕೆ ಎಷ್ಟು ವರ್ಷಗಳಿಂದ ಅದು ನೆನೆಗುದಿಗೆ ಬಿದ್ದಿದೆ? ಯಾರ ಕಾಲದಲ್ಲಿ ಅದಕ್ಕೆ ಅನುಮತಿ ಕೊಟ್ಟು ಆ ಕೆಲಸ ಮಾಡಿ ಮೊನ್ನೆ

ಅದ್ವಾನಿಯವರನ್ನು ಕರೆದುಕೊಂಡು ಬಂದು ಉದ್ಘಾಟನೆ ಮಾಡಿಸಿದವರು ಯಾರು?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಅವರ ಕಾಲದಲ್ಲಿ ......

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಏನೂ ಮಾಡಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದಕ್ಕೆ ಅವರು ಉತ್ತರ ಹೇಳುವುದನ್ನು ಕೇಳುವುದಕ್ಕೂ ತಮಗೆ ಸಹನೆ ಇಲ್ಲವೇ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ರೇವಣ್ಣನವರು ಹೇಳುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸುತ್ತಾರೆ. ಬಚ್ಚೇಗೌಡರೆ ತಾವು ಕುಳಿತುಕೊಳ್ಳಿ. ತಾವು ಇಂಧನ ಸಚಿವರಲ್ಲ, ಕಾರ್ಮಿಕ ಸಚಿವರು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಆಯವ್ಯಯದ ಪುಸ್ತಕ ತೆಗೆದು ನೋಡಿ. ಬಳ್ಳಾರಿಯದ್ದು ರೇವಣ್ಣನವರು ಮಂತ್ರಿಯಾಗಿದ್ದ ಕಾಲದಲ್ಲಿ ಆಗಿದ್ದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ವಿರೋಧ ಪಕ್ಷದ ಸದಸ್ಯನಾಗಿ ನಾನು ನನ್ನ ಕೆಲಸವನ್ನು ಮಾಡುತ್ತೇನೆ. ಅವರಿಗೇನಾದರೂ ಆ ಇಲಾಖೆಗೆ ಸಂಬಂಧ ಇದ್ದರೆ ನಿಂತು ಮಾತನಾಡುವುದಕ್ಕೆ ಹೇಳಿ. ಅವರು ನಿಯಮಾವಳಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಹೇಳಿ. ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಮಧ್ಯೆ ಯಾರೂ interfere ಆಗುವುದು ಬೇಡ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಮುಖ್ಯಮಂತ್ರಿಯವರು defend ಮಾಡಿಕೊಳ್ಳುತ್ತಾರೆ. ಬಚ್ಚೇಗೌಡರೆ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : As a Minister ನನಗೂ ಮಾಹಿತಿ ಇದೆ. I can defend the Government.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮುಖ್ಯಮಂತ್ರಿಯವರು ಶಕ್ತರಲ್ಲವೇ? ಅವರಿಗೆ ನಿಮ್ಮ ಅವಶ್ಯಕತೆ ಇದೆಯೇ? ಅವರೇ defend ಮಾಡಿಕೊಳ್ಳುತ್ತಾರೆ. ನೀವು ಕುಳಿತುಕೊಳ್ಳಿ. ಮುಖ್ಯಮಂತ್ರಿಯವರು ಹೇಳುವಾಗ ನೀವು ಸಭೆಯಲ್ಲಿರಲಿಲ್ಲ. ಅವರೇನು ಹೇಳಿದರೆಂದು ತಿಳಿದುಕೊಂಡು ಆಮೇಲೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು: Please, ಬಚ್ಚೇಗೌಡರೆ, ಮಾನ್ಯ ರೇವಣ್ಣನವರೆ, ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮುಖ್ಯಮಂತ್ರಿಯವರು ನಿಮ್ಮ ಕಾಲದಲ್ಲಿ ನೀವೇನು ಮಾಡಿದಿರಿ ಎಂದು ಕೇಳಿದರು. ವರಾಹಿ ಯೋಜನೆಯಿಂದ 280 MW ವಿದ್ಯುತ್ ಉತ್ಪಾದನೆ ಇದೆ. ಇದನ್ನು ಯಾರು ಮಾಡಿದ್ದು? ಇದಕ್ಕೆ ನಾನು foundation ಹಾಕುವುದಕ್ಕೆ ಹೋಗಿಲ್ಲ. ನನ್ನ ಕಾಲದಲ್ಲಿ administration clearance ಎಲ್ಲಾ ಕೊಟ್ಟು ಕೆಲಸಕ್ಕೆ ಚಾಲನೆ ಕೊಟ್ಟೆ. ನನಗೆ foundation, ಶಂಕುಸ್ಥಾಪನೆ ಮುಖ್ಯ ಅಲ್ಲ. ಜನತೆಗೆ ವಿದ್ಯುತ್ ಕ್ಷಾಮ ನೀಗಿಸುವುದೊಂದೇ ಉದ್ದೇಶ. ನಾನು ಕೆಲಸ ಮಾಡಿಸಿ ಮುಖ್ಯಮಂತ್ರಿಯವರು ಉದ್ಘಾಟನೆ ಮಾಡಲಿ ಎಂದು ಕೀ ಕೊಟ್ಟಿದ್ದೇನೆ. ನಾವು ಅದನ್ನು ಮಾಡದೇ ಹೋಗಿದ್ದರೆ ವರಾಹಿಯಿಂದ 280 MW ವಿದ್ಯುತ್ ಬರುತ್ತಿತ್ತೇ? ಮುಖ್ಯಮಂತ್ರಿಯವರು ಹೋಗಿ inauguration ಮಾಡುವುದಕ್ಕೆ ಅವಕಾಶ ಇರುತ್ತಿತ್ತೇ? ಬಳ್ಳಾರಿ 2ನೇ ಹಂತದ 500 MW ವಿದ್ಯುತ್ ಉತ್ಪಾದನಾ ಯೋಜನೆಯನ್ನು ಯಾರ ಕಾಲದಲ್ಲಿ ಮಾಡಿದ್ದು? ನಾಗಾರ್ಜುನ ಕಂಪನಿಯಿಂದ unit ಗೆ 2.50 ರೂ. ನಂತೆ 1200 MW ವಿದ್ಯುತ್ ಅನ್ನು ತೆಗೆದುಕೊಂಡಿದ್ದು ಯಾರು? ನಾಗಾರ್ಜುನ ಯೋಜನೆ ಎಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು? 1200 MW ವಿದ್ಯುತ್ ಯೋಜನೆಯನ್ನು ಮಾಡಿದ್ದು ಯಾರು? ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಅದನ್ನು ಮಾಡಿದ್ದು ಯಾರು? ಮುಖ್ಯಮಂತ್ರಿಯವರು ಅಧಿಕಾರಕ್ಕೆ ಬಂದು 18 ತಿಂಗಳಲ್ಲಿ ಮಾಡಿದ್ದಾರೆಯೇ?

ರಾಯಚೂರು 8th unit ಯಾರ ಕಾಲದಲ್ಲಿ ಆಯಿತು? ನಾನು 20 ವರ್ಷದ ಮುಂದಕ್ಕೆ ಏನು ಯೋಚನೆ ಮಾಡಿದ್ದೆ ಎನ್ನುವುದಕ್ಕೆ 20–20 vision: KPCL, KPTCL ನಲ್ಲಿ ಏನು ಮಾಡಿದ್ದೇನೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ನನಗೆ ಹೇಳಲಿ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಸಚಿವರು) : ಮುಖ್ಯಮಂತ್ರಿಯವರೇ ಆಗ ಹಣಕಾಸು ಸಚಿವರಾಗಿದ್ದರು. ಅವರ ಸಹಕಾರದಿಂದ ಮಾಡಿದ್ದಾರೆಂದು ನಾನು ನೆನಪು ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಬಳ್ಳಾರಿ ವಿದ್ಯುತ್ ಉತ್ಪಾದನೆ ಯೋಜನೆ ಮಾಡಿದಾಗ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದರು. ಅವರ ಸಹಕಾರ ಎಂದರೆ ಕಾರಜೋಳ್‌ರವರೆ ಇಲ್ಲಿ ಕೇಳಿ., ಅವರಿಗೇನಂದರೆ ರೇವಣ್ಣನವರನ್ನು ಡಿವಿಯೇಟ್ ಮಾಡಿ ಮುಚ್ಚಿಕೊಂಡು ಹೋಗಬೇಕು ಎನ್ನುವುದು ಒಂದೆ. ಬೇಡ ಎನ್ನುವುದಾದರೆ ನಾನು ಕುಳಿತುಕೊಳ್ಳುತ್ತೇನೆ., ದಾಖಲಾತಿ ಸಮೇತವಾಗಿ ಹೇಳುತ್ತಿದೇನೆ. ಇನ್ನೇನು ಹೇಳಬೇಕು.

ಅಧ್ಯಕ್ಷರು : Please ಅವರು ಮಾತನಾಡಲಿ ಬಿಡಿ. ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಕಾರಜೋಳ್‌ರವರಿಗೆ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು : ಅದು ಬೇಡ. ನೀವು ಇದರ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ತಾವು ದಯಮಾಡಿ ಆಡಳಿತ ಪಕ್ಷದ ಮಂತ್ರಿಗಳಿಗೆ ಹೇಳಬೇಕು.

ಅಧ್ಯಕ್ಷರು : ನಾಯ್ಡುರವರೇ Please.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಕಟ್ಟಾ ಸುಬ್ರಮಣ್ಯ ನಾಯ್ಡುರವರ ಸೀಟು ಆ ಕಡೆ ಹಾಕಿ ಬಿಡಿ. ಪ್ರತಿ ಸಾರಿ ರೇವಣ್ಣನವರನ್ನು ಡೈವರ್ಟ್ ಮಾಡುವುದೇ ನಿಮ್ಮ ಕೆಲಸ..

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನೀವೇ ಇಲ್ಲಿಗೆ ಬನ್ನಿ ಸ್ವಾಮಿ. ನಾವು ಅಲ್ಲಿಗೆ ಬರುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಾವು ಬರುವ ಕಾಲ ಬಂದಾಗ ದೇವರು ಅವಕಾಶ ಕೊಟ್ಟಾಗ ಬರುತ್ತೇವೆ ಯೋಚನೆ ಮಾಡಬೇಡಿ. ರೇವಣ್ಣನವರು Point to point ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನು ಕೇಳಿದರು. ನಿಮ್ಮ ಕಾಲದಲ್ಲಿ ಎಷ್ಟು ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಿದಿರಿ? ನಿಮ್ಮ ಕೊಡುಗೆ ಏನು ಹೇಳಿ ಎಂದಾಗ, ಅವರು statistics ಪ್ರಕಾರ ಬಳ್ಳಾರಿ ಎರಡನೇ ಹಂತದಲ್ಲಿ ಐದುನೂರು ಮೆ.ವ್ಯಾ. ವಿದ್ಯುತ್ ಯಾರು ತಂದರು, ವರಾಹಿ ಯೋಜನೆಯಲ್ಲಿ ವಿದ್ಯುತ್ ಯಾರು ತಂದರು, ನಾಗಾರ್ಜುನ ಯೋಜನೆಯಲ್ಲಿ ವಿದ್ಯುತ್ ಯಾರು ಮಾಡಿದರು ಎಂದು ಅವರು statistics ಕೊಡುತ್ತಿದ್ದಾರೆ. ನಿಮಗೆ ನಾಚಿಕೆಯಾಗುತ್ತದೆನೋ ಅದಕೋಸ್ಕರವಾಗಿ ಅವರನ್ನು ನೀವು ಡೈವರ್ಟ್ ಮಾಡುವುದಕ್ಕೆ ಹೋಗುತ್ತೀರಾ? ಏಕೆ ಹಾಗೆ ಮಾಡುತ್ತೀರಿ? ಅವರು ಭಾಷಣ ಮಾಡಲಿ ಬಿಡಿ.

ಅಧ್ಯಕ್ಷರು : ಶಿವಲಿಂಗೇಗೌಡರವರೆ ಕುಳಿತುಕೊಳ್ಳಿ.

ಶ್ರೀ ಬಿ.ಎನ್.ಬಚ್ಚೇಗೌಡ : ಏಕೆ ನಾಚಿಕೆಯಾಗಬೇಕು?

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾಡಿಲ್ಲವಲ್ಲ ಅದಕ್ಕೆ ನಾಚಿಕೆಯಾಗಬೇಕು. ಈಗ ಮಾನ್ಯ ಮುಖ್ಯಮಂತ್ರಿಗಳು ಕೇಳಿದ್ದಕ್ಕೆ ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅವರನ್ನು ನೀವು ಡೈವರ್ಟ್ ಮಾಡಬೇಕು ಅಷ್ಟೆ ನಿಮ್ಮದು ಬೇರೆ ಏನೂ ಇಲ್ಲ. ಸನ್ಮಾನ್ಯ ಅಧ್ಯಕ್ಷರೆ ಇದು ಸರಿಯಿಲ್ಲ.

ಅಧ್ಯಕ್ಷರು : ನೀವು ಕುಳಿತುಕೊಳ್ಳಿ, ನೀವು ಅನುಮತಿ ತೆಗೆದುಕೊಳ್ಳದೇ ಏನು ಬೇಕಾದರೂ ಮಾತನಾಡಬಹುದೆ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಅವರಿಗೆ ಹೇಳಿ ಸ್ವಾಮಿ, ಅವರಿಬ್ಬರಿಗೂ ಮೊದಲು ದಯಮಾಡಿ ಹೇಳಿ.

ಅಧ್ಯಕ್ಷರು : ನೀವು ಮೊದಲು ಕುಳಿತುಕೊಳ್ಳಿ. Please. ನಿಮಗೆ ಅನುಮತಿ ಕೊಟ್ಟಿಲ್ಲ ನೀವು ಕುಳಿತುಕೊಳ್ಳಿ. ಬಚ್ಚೇಗೌಡರವರೆ Please ಕುಳಿತುಕೊಳ್ಳಿ. Please ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ರೇವಣ್ಣನವರು ಒಳ್ಳೆಯ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ಸಿನವರು ಕೂಡ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೂ ಇವತ್ತು ವಿದ್ಯುತ್ ಕೊರತೆ ಇದೆ. ನಮಗೆ ಹದಿನಾಲ್ಕು ಸಾವಿರ ಮೆ.ವ್ಯಾ. ಬೇಕಾಗಿದ್ದರೆ, ಪೂರೈಕೆ ಆಗುತ್ತಿರುವುದು ಏಳು ಸಾವಿರ ಮೆ.ವ್ಯಾ. ಅದಕ್ಕೆಲ್ಲಾ ಬಿಜೆಪಿಯೇ ಕಾರಣ. ಅವರಿಬ್ಬರೂ ಯಾರೂ ಅಲ್ಲ. ಅವರಿಬ್ಬರೂ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ನಾವು ಅಸಮರ್ಪಕರಾಗಿದ್ದೇವೆ. ಕಾರಣ ಏನೆಂದರೆ, ಆ ಇಪ್ಪತ್ತು ತಿಂಗಳಲ್ಲಿ ವಿದ್ಯುತ್‌ನ್ನು ಮೇಲಿಂದ ತಂದು ಕೆಳಗಡೆ ಕೂಡಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಇವರೆಲ್ಲಾ ಇಷ್ಟೆಲ್ಲಾ ಕೆಲಸ ಮಾಡಿದ್ದರೆ ಏತಕ್ಕಾಗಿ ಇವತ್ತು ವಿದ್ಯುತ್ ಕೊರತೆಯಿದೆ? ಏಳು ಸಾವಿರ ಮೆ.ವ್ಯಾ. ಕೊರತೆಯಿದೆ? ನಾನು ಅದು ಮಾಡಿದೆ, ಇದು ಮಾಡಿದೆ ರಾಜ್ಯ ಕಟ್ಟಿದೆ, ಹೌದು ಇಲ್ಲವೆಂದು ನಾವು ಹೇಳಲಿಲ್ಲ. ಆಗಿದ್ದರೆ ಇಷ್ಟು ಬೇಡಿಕೆ ಬರುತ್ತದೆಂದು ನಿಮಗೆ ಗೊತ್ತಾಗಲಿಲ್ಲವೆ? ನೀವು ಯೋಚನೆ ಮಾಡಿರಲಿಲ್ಲವೆ? ಹದಿನಾಲ್ಕು ಸಾವಿರ ಮೆ.ವ್ಯಾ. ಬೇಕು ಎಂದು ನಿಮಗೆ ಗೊತ್ತಿರಲಿಲ್ಲವೆ? ಇನ್ನು ಹತ್ತು ವರ್ಷಕ್ಕೆ ಇಪ್ಪತ್ತು ಸಾವಿರ ಮೆ.ವ್ಯಾ. ಬೇಕಾಗುತ್ತದೆಂದು ನಿಮಗೆ ಗೊತ್ತಿರಲಿಲ್ಲವೆ? ನೀವು ಹೊರ ರಾಜ್ಯದ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿರಾ? ಹೊಸ ಯೋಜನೆಗಳನ್ನು ಜಾರಿಗೆ ತರುವಂಥ ಪ್ರಯತ್ನ ಮಾಡಿದಿರಾ? ನಾವೇ ಮಾಡಿದ್ದು ನಾವೇ ಮಾಡಿದ್ದು ಎಂದು ಬೆನ್ನು ತಟ್ಟಿಕೊಳ್ಳುತ್ತೀರಲ್ಲಾ, ತಾವು ಮಾಡಿರುವ ಬಗ್ಗೆಯಾಗಲಿ, ತಮ್ಮ ಬಗ್ಗೆ ವೈಯುಕ್ತಿಕವಾಗಿ, ತಾವು ಒಳ್ಳೆಯ ಕೆಲಸಗಾರರು. ನಿಮ್ಮ ಬಗ್ಗೆ ನಾವೇನು ಟೀಕೆ ಮಾಡುತ್ತಿಲ್ಲ. ರೇವಣ್ಣನವರು ಪಟ್ಟು ಹಿಡಿದರೆ ಬಿಡುವುದಿಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಒಳ್ಳೆಯ ಕೆಲಸಗಳನ್ನು ಹೇಗೆ ಮಾಡಿದರು ಎಂಬುದು ನನಗೆ ಗೊತ್ತಿದೆ. ಆದರೆ, ಈ ರಾಜ್ಯದ ಜನತೆಗೆ ಎಷ್ಟು ಬೇಕಾಗಿತ್ತು ಎಂಬ ಬಗ್ಗೆ future planning ಏನಾದರೂ ಮಾಡಿದಿರಾ? ಮಾಡಿದ್ದರೆ ಇವತ್ತು ಈ

12.20 ಪಿ.ಎಂ.

ಯುವಕರ ಬಗ್ಗೆ ರೈತರ ಬಗ್ಗೆ ಇಷ್ಟು ಕಳಕಳಿ ವ್ಯಕ್ತಪಡಿಸುತ್ತಿದ್ದೀರಲ್ಲಾ, ರೈತರ ಬಗ್ಗೆ ಇಷ್ಟೊಂದು ಮೊಸಳೆ ಕಣ್ಣೀರನ್ನು ಸುರಿಸುತ್ತಿದ್ದೀರಲ್ಲಾ, ಯಾರು ಸ್ವಾಮಿ ಇದಕ್ಕೆಲ್ಲಾ ಕಾರಣ? ಇವರಲ್ಲ ಕಾರಣ ನಾವೆ? ಯಾರು ಕಾರಣರು?

ಅಧ್ಯಕ್ಷರು : Please ಅವರು ಮಾತನಾಡಲಿ ಬಿಡಿ. ನೀವು ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡು ಪ್ರಶ್ನೆಗಳಿಗೆ ನಾನು ಉತ್ತರಿಸಬೇಕಾಗುತ್ತದೆ, ಇಲ್ಲದಿದ್ದರೆ ಕಷ್ಟವಾಗುತ್ತದೆ. ಏಕೆಂದರೆ, ರೇವಣ್ಣನವರು ಕೊಡದೇ ಓಡಿ ಹೋದರೂ ಎನ್ನುವುದು ಬೇಡ. ಎರಡು ನಿಮಿಷ ನನಗೆ ಅವಕಾಶ ಕೊಡಿ. ಮೊದಲು ನಮ್ಮ ಕಾರಜೋಳ್‌ರವರ ಪ್ರಶ್ನೆಗೆ ಉತ್ತರಿಸಿ ನಂತರ ನಮ್ಮ ಕಟ್ಟಾರವರ ಪ್ರಶ್ನೆಗೆ ಉತ್ತರಿಸುತ್ತೇನೆ. ಇವರಿಬ್ಬರಿಗೂ ಉತ್ತರ ಕೊಡುವ ಶಕ್ತಿ ದೇವರು ನನಗೆ ಸ್ವಲ್ಪ ಕೊಟ್ಟಿದ್ದಾನೆ. ಕಾರಜೋಳ್‌ರವರು ಒಂದು ಮಾತು ಹೇಳಿದರು. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು. ಅವರ ಅಧ್ಯಕ್ಷತೆಯಲ್ಲಿ ವಿದ್ಯುತ್ ಬಗ್ಗೆ ಒಂದು committee formation ಮಾಡಿ, cabinet sub committee ಮಾಡಿದರು. cabinet ನಲ್ಲಿ ಒಪ್ಪಿಕೊಂಡರು. next cabinet ನಲ್ಲಿ ಬೇಡ ಎಂದು ಹೇಳಿಲ್ಲವಾ ಕೇಳಿ, ಅದನ್ನು ಮಾಡಿ order ಆಗಿ GO issue ಆದ ಮೇಲೆ ಏಕೆ ಓಡಿ ಹೋದರು ಮುಖ್ಯಮಂತ್ರಿಗಳು?. ನನಗೆ ಬೇಡ ಸಾರ್ ಅವರಿಗೆ ಮಾಡಿದ್ದೆವಲ್ಲ. ನನ್ನ ಕೈಯಲ್ಲಿ ಮಾಡಲಿಕ್ಕೆ ಆಗಿಲ್ಲ. ದಯಮಾಡಿ ಸ್ವಲ್ಪ ಕೇಳಿ. ಅವರು ಹೇಳುವವರೆಗೆ ಕೇಳಿಲ್ಲವೆ? ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ cabinet sub committee ಮಾಡಿ ಏನು ಮಾಡಬೇಕೆಂಬುದನ್ನು ನಿರ್ಣಯ ಮಾಡಿ, ಈಗಿನ ಮುಖ್ಯಮಂತ್ರಿಗಳು ಓಡಿ ಹೋದರು ನಾನು ಬೇಡ ಎಂದು ಹೇಳಿದ್ದನೆ? cabinet sub committee ಯನ್ನು ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಈ ರಾಜ್ಯಕ್ಕೆ ಇನ್ನು 25 ವರ್ಷದಲ್ಲಿ ಏನು ಮಾಡಬೇಕೆಂಬುದನ್ನು ಪುಸ್ತಕ ಮಾಡಿ ಇಟ್ಟಿದ್ದೇನೆ. ಬೇಕಾದರೆ ತೆಗೆದು

ನೋಡಲಿ. Vision 2020 ಎಂದು KPCL, KPTCL ನಲ್ಲಿ ದಾಖಲಾತಿ ಪ್ರಕಾರವಾಗಿ ಏನೇನು ಮಾಡಬೇಕೆಂದು ಪುಸ್ತಕ ರೂಪದಲ್ಲಿ ಮಾಡಿರುವ ಬಗ್ಗೆ ಈ ಹದಿನೆಂಟು ತಿಂಗಳಲ್ಲಿ ಏನಾದರೂ ಕ್ರಮ ತೆಗೆದುಕೊಂಡಿದ್ದರೆ ಹೇಳಲಿ. ಉದಾಹರಣೆಗೆ ಹೇಳುವುದಾದರೆ, 2007 ರಲ್ಲಿ national bidding ಮಾಡಿದ್ದೇವು KPCL ನಿಂದ Power purchasing bidding ಆಗಿತ್ತು. ಏಳು ವರ್ಷಕ್ಕೆ ಆರು ನೂರು ಮೆ.ವ್ಯಾ.ವಿದ್ಯುತ್, ಇಪ್ಪತ್ತೈದು ವರ್ಷಕ್ಕೆ ಎರಡು ಸಾವಿರ ಮೆ.ವ್ಯಾ., ಆ ದಿವಸ ಡಿಮ್ಯಾಂಡ್ ಇರಲಿಲ್ಲ. ಎರಡು ಸಾವಿರ ಆರು ನೂರು ಮೆ.ವ್ಯಾ. ಗೆ tender ಕರೆದಿದ್ದೇವೆಲ್ಲ Tender ಏಕೆ Finalize ಮಾಡಿಲ್ಲ. ಎರಡು ರೂಪಾಯಿ ಐವತ್ತು ಪೈಸೆಗೆ ವಿದ್ಯುತ್ ಸಿಗುವುದಾದರೆ ಏಕೆ finalize ಮಾಡಿಲ್ಲ. ಎರಡು ಸಾವಿರದ ಐದುನೂರು ತೊಂಬತ್ತೇಳು ಕೋಟಿ ರೂಪಾಯಿಗಳಗೆ high cost ವಿದ್ಯುತ್ ಖರೀದಿಸುವ ಅವಶ್ಯಕತೆ ಇತ್ತೆ? ಒಂಬತ್ತೂವರೆ ರೂಪಾಯಿಗೆ ಮಾಡಿದ್ದೀರಾ ದಯಮಾಡಿ ಈ ಬಗ್ಗೆ ಹೇಳಿ. ಹೀಗಾಗಿ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಿಂದಿನವರು ಯಾರ್‍ಯಾರು ಏನೇನು ಮಾಡಿಲ್ಲವೆಂದು ಹೇಳುತ್ತಿರಿ. ದೇವೇಗೌಡರವರು ಮುಖ್ಯಮಂತ್ರಿಯಾಗಿದ್ದಾಗ, ಪ್ರಧಾನ ಮಂತ್ರಿಯಾಗಿದ್ದಾಗ ಏನು ಮಾಡಿದರು ಎಂದು ನಿನ್ನೆ ಕೆಲವು ಸದಸ್ಯರಾದ ನಾಗರಾಜು, ಸುರೇಶ್‌ಗೌಡರು ಹರಿಹರದ ಶಾಸಕರು ಕೇಳಿದ್ದಾರೆ. ದೇವೇಗೌಡರವರು ಇಂಧನ ಇಲಾಖೆಗೆ ಈ ರಾಜ್ಯಕ್ಕೆ ಏನು ಕೊಡುಗೆ ಕೊಟ್ಟರು ಎಂದು ಕೇಳಿದ್ದಾರೆ. ಅದಕ್ಕೂ ಉತ್ತರಿಸಬೇಕಾಗುತ್ತದೆ. ವಾಜಪೇಯಿಯವರ ಸರ್ಕಾರ NDA Government ಕೇವಲ ಹದಿಮೂರು ದಿನಗಳು ಮಾತ್ರ ಇತ್ತು. ಆಗ ಇನ್ನೂ ವಿಶ್ವಾಸಮತವನ್ನೇ ಗಳಿಸಿರಲಿಲ್ಲ. ಇಂಥ ಸಂದರ್ಭದಲ್ಲಿ Enron ಗೆ ಹದಿಮೂರು ದಿವಸದಲ್ಲಿ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಿ ಮಾನ್ಯ ವಾಜಪೇಯಿರವರು Enron, ಅದರ ಮೇಲೆ ಶಿವಸೇನೆ ಏನು ಆಪಾದನೆ ಮಾಡಿದ್ದಾರೆ? ಅದೇ ರೀತಿ ಶರದ್ ಪವಾರ್ ಏನು ಮಾಡಿದ್ದಾರೆ?

ಇದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಆರೋಪ ಬಂತು. ನಂತರ ದೇವೇಗೌಡರವರು ಪ್ರಧಾನ ಮಂತ್ರಿಗಳಾದರು.

ನಂತರ ಅವರೇನಾದರೂ ರಾಜಕೀಯ ಸೇಡು ತೆಗೆದುಕೊಂಡರಾ? ಹಿಂದೆ ಹದಿಮೂರು ದಿವಸದಲ್ಲಿ ಏನು Cabinet ನಿರ್ಣಯ ಆಗಿತ್ತು ಅದು conformation ಗೆ ಬಂದಾಗ ದೇವೇಗೌಡರವರು ಆ ದಿವಸ UPA Government ನ ಎಲ್ಲಾ ಸಚಿವ ಸಂಪುಟದ ಸಹದ್ಯೋಗಿಗಳು, ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಇದನ್ನು ಮಾಡಕೂಡದು ಎಂದು ವಿರೋಧಿಸಿದರು. ಆದರೆ, ದೇವೇಗೌಡರವರು ರಾಜಕೀಯ ವೈರತ್ವ ಮಾಡುವುದಕ್ಕೆ ಹೋಗಲಿಲ್ಲ. ಮಹಾರಾಷ್ಟ್ರದ ಜನತೆಯ ಹಿತದೃಷ್ಟಿಯಿಂದ ಅದನ್ನು ಸಾವಿರದ ನಾನೂರು ಮೆ.ವಾ.ನ Enron ಅನ್ನು Cabinet ನಲ್ಲಿ approve ಮಾಡಿರುವುದನ್ನು ದಯಮಾಡಿ ಮಾನ್ಯ ಯಡಿಯೂರಪ್ಪನವರು ಕಡತ ತೆಗೆಸಿಕೊಳ್ಳಲಿ. ಅದೇ NDA Government ಈ ರಾಜ್ಯಕ್ಕೆ ಐದು ವರ್ಷದಲ್ಲಿ ಏನು ವಿದ್ಯುತ್‌ಗೆ ಸಹಕಾರ ಮಾಡಿದರು? ದೇವೇಗೌಡರವರು ಇದ್ದಾಗ ಎಂಟು ಸಾವಿರದ ಐದುನೂರು ಮೆ.ವ್ಯಾ. ವಿದ್ಯುತ್‌ಗೆ administration sanction ಕೊಟ್ಟಿರುವ ಬಗ್ಗೆ ಬೇಕಾದರೆ ಅವರು ಹೇಳಲಿ. ಇವತ್ತು ಇಲ್ಲಿಯೇ ನಮ್ಮ ಇಂಧನ ಇಲಾಖೆಯ ಕಾರ್ಯದರ್ಶಿಗಳು ಕುಳಿತಿದ್ದಾರೆ. ಅವರೇ ಆಗ KPCLನ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಅವರ ಕಡೆಯಿಂದ ಇದು ಆಗಿತ್ತೋ ಇಲ್ಲವೋ ಎನ್ನುವ ಬಗ್ಗೆ ಚೀಟಿ ತರಿಸಿಕೊಳ್ಳಲಿ. ಎಂಟು ಸಾವಿರದ ಐದುನೂರು ಮೆ.ವ್ಯಾ. ವಿದ್ಯುತ್‌ಗೆ ದೇವೇಗೌಡರವರು ಮಾಡಿರುವುದನ್ನು ತರಿಸಿ ನೋಡಲಿ. ಉದಾಹರಣೆಗೆ ಹೇಳುವುದಾದರೆ, ಮಂಗಳೂರಿನಲ್ಲಿ cogentrics ನಲ್ಲಿ ಭ್ರಷ್ಟಾಚಾರ ಆಗಿದೆ ಎಂದು ದೇವೇಗೌಡರವರ ಮೇಲೆ ಸುಪ್ರೀಂ ಕೋರ್ಟ್ ನಲ್ಲಿ ಯಾರು ಸ್ವಾಮಿ ಕೇಸ್ ಹಾಕಿದ್ದರು? ಅದು ಏನಾಯಿತು ಸ್ವಾಮಿ? ದೇವೇಗೌಡರವರು ವಾಜಪೇಯಿಯವರಿಗೆ ಒಂದು ಪತ್ರ ಬರೆದರು. ಸ್ವಾಮಿ, ನೀವು ಹದಿಮೂರು ದಿವಸದಲ್ಲಿ ವಿಶ್ವಾಸಮತ ಗಳಿಸದೇ ಇರುವಂಥ ಸಂದರ್ಭದಲ್ಲಿ ತೆಗೆದುಕೊಂಡಿದ್ದ ನಿರ್ಣಯಕ್ಕೆ ನಮ್ಮ ಇಡೀ UPA Government ನ Cabinet ನ ಸಹದ್ಯೋಗಿಗಳು ಎಲ್ಲಾ ವಿರೋಧಿಸಿದರು, ಅದರೂ ನಾನು Enron ಅನ್ನು ರಾಜಕೀಯ ವೈರತ್ವ ಮಾಡದೇ ಮಾಡಿದ್ದೇನೆ. ಆದರೆ, ನೀವು

ಈ ರಾಜ್ಯದ ಜನತೆಯ ದೃಷ್ಟಿಯಿಂದ ಇದನ್ನು ಮಾಡಬೇಡಿ ಎಂದು ಪತ್ರ ಬರೆದರು, ಬೇಕಾದರೆ ಅದನ್ನು ತರಿಸಿ. ಇದರಲ್ಲಿ ಏನಾದರೂ ಅವ್ಯವಹಾರ ನಡೆಸಿದ್ದರೆ CBI ತನಿಖೆ ಮಾಡಿ ಎಂದು ದೇವೇಗೌಡರವರು ಪತ್ರ ಬರೆದಿದ್ದಾರೋ ಇಲ್ಲವೋ ಎಂದು ಅದರ ಕಾಪಿ ತರಿಸಿ ಹೇಳಿ. ದಾಖಲಾತಿ ಬೇಕು ಎಂದರೆ ನಾನು ದಾಖಲಾತಿ ಕೊಡುವುದಕ್ಕೆ ಸಿದ್ಧನಿದ್ದೇನೆ. 8500 ಮೆ.ವ್ಯಾ ವಿದ್ಯುತ್‌ನ್ನು ಎನ್‌ಡಿಎ ಸರ್ಕಾರದವರು ಅವತ್ತಿನ ದಿವಸ ಕೊಟ್ಟಿದ್ದರೆ ಇವತ್ತಿ ದಿವಸ ರಾಜ್ಯದಲ್ಲಿ ಈ ಪರಿಸ್ಥಿತಿ ಆಗುತ್ತಿತ್ತೆ? ಮತ್ತೆ 2597 ಕೋಟಿ ರೂಪಾಯಿ ಕೊಟ್ಟು ವಿದ್ಯುತ್‌ನ್ನು ಖರೀದಿ ಮಾಡತಕ್ಕಂಥ ಅವಶ್ಯಕತೆ ಇರುತ್ತಿತ್ತೆ? ಈ ವಿಷಯವೆಲ್ಲವನ್ನು ಬಿಟ್ಟು ಅವರ ಕಾಲದಲ್ಲಿ ಮತ್ತು ಇವರ ಕಾಲದಲ್ಲಿ ಹಾಗೂ ಮಾನ್ಯ ದೇವೇಗೌಡರ ಕಾಲದಲ್ಲಿ ಈ ರಾಜ್ಯಕ್ಕೆ ಏನು ಮಾಡಿದ್ದಾರೆಂದು ಹೇಳುತ್ತಿದ್ದೀರಿ. 8500 ಮೆ.ವ್ಯಾ. ವಿದ್ಯುತ್ ಬಗ್ಗೆ ಹೇಳುವುದಾದರೆ, ಶರಾವತಿ ಟ್ರಯಲ್ ರೇಸ್‌ನಲ್ಲಿ 240 ಮೆ.ವ್ಯಾ. ಮತ್ತೆ ಆಲಮಟ್ಟಿ ಪವರ್ ಸ್ಟೇಷನ್‌ನಿಂದ 280 ಮೆ.ವ್ಯಾ., ನಾಗಾರ್ಜುನ ಕನ್ಸ್‌ಟ್ರಕ್ಷನ್‌ರವರಿಂದ 1000 ಮೆ.ವ್ಯಾ. ಮತ್ತೆ ಕೊಜೆಂಟ್ರಿಕ್ಸ್ ನಿಂದ 1000 ಮೆ.ವ್ಯಾ. ಇರಬಹುದು. ಮತ್ತೆ ಇದೇ ರೀತಿಯಾಗಿ ಮಂಗಳೂರಿನಲ್ಲಿ ಭಾಟಿಯಾ ಲಿಮಿಟೆಡ್‌ನಿಂದ 4000 ಮೆ.ವ್ಯಾ. ವಿದ್ಯುತ್‌ನ್ನು 5 ವರ್ಷಗಳವರೆಗೆ ತಾತ್ಕಾಲಿಕವಾಗಿ ಪಡೆದುಕೊಳ್ಳುವುದರ ಬಗ್ಗೆ ಇತ್ತು. ಈಗ ಇಂಧನ ಇಲಾಖೆಯ ಕಾರ್ಯದರ್ಶಿಗಳು ಹಿಂದೆ ಕೆಪಿಸಿ ಯಲ್ಲಿದ್ದರು. ಬೇಕಾದರೆ ಇದಕ್ಕೆ ಸಂಬಂಧಪಟ್ಟಂಥ ಕಡತಗಳೆಲ್ಲವನ್ನು ತೆಗೆಸಿ ನೋಡಿ. ಇದು ಕಾರ್ಯರೂಪಕ್ಕೆ ಬರುವುದಕ್ಕೆ ಆ ಸಂದರ್ಭದಲ್ಲಿದ್ದಂಥ ಮಾನ್ಯ ವಾಜಪೇಯಿರವರ ಎನ್‌ಡಿಎ ಸರ್ಕಾರ ಬಿಡಲಿಲ್ಲ. ಆದ್ದರಿಂದ ನಾನೇನು ಮಾಡಲಿ?

(ಗೊಂದಲ)

ತಾವು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳಿ. ಕಾರ್ಯರೂಪಕ್ಕೆ ಬರುವುದು ಅಥವಾ ಬಿಡುವುದರ ಬಗ್ಗೆ ಆನಂತರ ಮಾತನಾಡೋಣ.

ಅಧ್ಯಕ್ಷರು:– ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ದಯವಿಟ್ಟು ಕುಳಿತುಕೊಳ್ಳಿ. ಮಧ್ಯದಲ್ಲಿ ತಾವೇಕೆ Interfere ಆಗುತ್ತೀರಿ. ಮಾನ್ಯ ರೇವಣ್ಣರವರೆ, ತಾವೇಕೆ ಮಧ್ಯದಲ್ಲಿ ಯೀಲ್ಡ್ ಆಗುತ್ತೀರಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು:– ನಮ್ಮವರು ಪ್ರಧಾನ ಮಂತ್ರಿಯಾಗಿದ್ದಾಗ ಮಾನ್ಯ ಲಾಲು ಪ್ರಸಾದ್ ಯಾದವ್‌ರವರು ಬಿಹಾರ ರಾಜ್ಯದ ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅಲ್ಲಿಗೆ 4500 ಮೆ.ವ್ಯಾ. ಅನ್ನು ಮಂಜೂರು ಮಾಡುತ್ತಾರೆ. ಅದಕ್ಕೆ ನಾವೇನು ಬೇಡವೆಂದು ಹೇಳಿದ್ದೇವೆಯೇ. ಆದರೆ, ಕರ್ನಾಟಕ ರಾಜ್ಯಕ್ಕೆ ಒಂದು ಮೆ.ವ್ಯಾ. ಅನ್ನು ಮಂಜೂರು ಮಾಡಿಲ್ಲ. ಏತಕ್ಕೋಸ್ಕರ ಮಂಜೂರು ಮಾಡಿಲಿಲ್ಲ? ನಮ್ಮವರೆ ತಾನೆ ಆಗ ಪ್ರಧಾನ ಮಂತ್ರಿಗಳಾಗಿದ್ದು, ಅದನ್ನು ಯಾರು ಕೇಳುವುದು ಬೇಡವೆ?

ಅಧ್ಯಕ್ಷರು:– ಮಾನ್ಯ ರೇವಣ್ಣರವರೆ, ತಾವು ಯೀಲ್ಡ್ ಆಗಬೇಡಿ. ತಾವು ಮಾತನಾಡಿ ಬೇಗ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಗೆ ಇಂಧನ ಇಲಾಖೆ ಬಗ್ಗೆ ಗೊತ್ತಿಲ್ಲ. ಆದರೆ, ಬೆಂಗಳೂರಿನಲ್ಲಿ ಕೈಗಾರಿಕಾ ನಿವೇಶನಗಳು ಎಲ್ಲೆಲ್ಲಿ ಇವೆ ಎಂದು ಕೇಳಿ ಅದರ ಬಗ್ಗೆ ಅವರು ಹೇಳುತ್ತಾರೆ. ಮತ್ತೆ ಯಾವುದನ್ನು 4(1) ಮತ್ತು ಯಾವುದನ್ನು ಡಿ–ನೋಟಿಫಿಕೇಷನ್ ಮಾಡಬೇಕೆಂಬುದನ್ನು ಕೇಳಿ ಅದರ ಬಗ್ಗೆ ಕೂಡ ಅವರು ಹೇಳುತ್ತಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:– ನೀವು ಏನು ಮಾಡುತ್ತೀರಿ ಎಂಬುದರ ಬಗ್ಗೆ ಸ್ವಲ್ಪವಾದರು ಗೊತ್ತಿದೆ. ನಿಮ್ಮ ಬಗ್ಗೆ ಪೂರ್ತಿಯಾಗಿ ನನಗೆ ಗೊತ್ತಿಲ್ಲ. ನಿಮ್ಮಲ್ಲಿರುವ ಹಾಳವನ್ನು ಕಂಡುಹಿಡಿಯುವುದಕ್ಕೆ ಮತ್ತು ಅರ್ಥ ಮಾಡಿಕೊಳ್ಳುವುದಕ್ಕೆ ನನ್ನಿಂದ ಆಗುವುದಿಲ್ಲವೆಂದು ನನಗೆ ಗೊತ್ತಿದೆ. ನಾನೇನು ಮಾಡಲಿ ಹೇಳಿ? ನನಗೆ ಇರತಕ್ಕಂಥ ಶಕ್ತಿ ಇಷ್ಟೆ. ಆದರೆ, ನಿಮಗೆ ಶಕ್ತಿ ಜಾಸ್ತಿ ಇದೆ.

ಅಧ್ಯಕ್ಷರು:– ಮಾನ್ಯ ರೇವಣ್ಣರವರೆ, ಮಾತನಾಡಿ ಬೇಗ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ 8500 ಮೆ.ವ್ಯಾ.ಗೆ ಕ್ಲಿಯರ್ ಇತ್ತೆ ಅಥವಾ ಇಲ್ಲವೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಕಡತ ತೆಗೆಸಿ ನೋಡಬಹುದಾಗಿದೆ. ಇಂಧನ ಇಲಾಖೆಯಲ್ಲಿರುವ ಕಾರ್ಯದರ್ಶಿಗಳು ಒಳ್ಳೆಯ ಅಧಿಕಾರಿಗಳಾಗಿದ್ದಾರೆ. ಅವರ ಬಗ್ಗೆ ಯಾವುದೇ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅವರು ಆಗ ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಆದ್ದರಿಂದ, 8500 ಮೆ.ವ್ಯಾ. ವಿದ್ಯುತ್‌ಗೆ ಕೇಂದ್ರ ಸರ್ಕಾರ ಕ್ಲಿಯರೆನ್ಸ್ ಕೊಟ್ಟಿತ್ತೋ ಅಥವಾ ಇಲ್ಲವೋ ಎಂದು ಅವರನ್ನು ಕೇಳಿ? ಕೊಜೆಂಟ್ರಿಕ್ಸ್ ಬಗ್ಗೆ ಏನಾದರು ಅವ್ಯವಹಾರ ಆಗಿದ್ದರೆ ತಾವು ಬೇಕಾದರೆ ಸಿಬಿಐ ತನಿಖೆ ನಡೆಸಿ. ರಾಜ್ಯದ ಹಿತದೃಷ್ಟಿಯಿಂದ ಇದಕ್ಕೆ ಕ್ಲಿಯರೆನ್ಸ್ ಕೊಡಿ ಎಂದು ನಾವು ಮಾನ್ಯ ವಾಜಪೇಯಿರವರಿಗೆ ಕೇಳಿದ್ದೆವೋ ಅಥವಾ ಇಲ್ಲವೋ ಎಂಬ ಬಗ್ಗೆ ಅವರ ಕಡೆಯಿಂದ ಮಾಹಿತಿ ತರಿಸಿಕೊಳ್ಳಿ. ಇಲ್ಲದಿದ್ದರೆ ಇದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ನಾನು ತಮಗೆ ಕೊಡುತ್ತೇನೆ. 8500 ಮೆ.ವ್ಯಾ. ನಮ್ಮ ರಾಜ್ಯಕ್ಕೆ ಬಂದಿದ್ದರೆ, ನಾವೇನು ಬೇಡವೆಂದು ಹೇಳುವುದಕ್ಕೆ ಆಗುತ್ತಿರಲಿಲ್ಲ. ಎನ್‌ಡಿಎ ಸರ್ಕಾರ 5 ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಏನು ಕೊಟ್ಟರು? ಆಂಧ್ರಪ್ರದೇಶದಲ್ಲಿ 4000 ಮೆ.ವ್ಯಾ.ಗೆ ಸಿಂಹಾದ್ರಿ ಪ್ರಾಜೆಕ್ಟ್ ಮಾಡಿದರು. ಆ ಸಂದರ್ಭದಲ್ಲಿ ಎನ್‌ಡಿಎ ಸರ್ಕಾರ ಕರ್ನಾಟಕದಲ್ಲಿ ಏತಕ್ಕೆ ಮಾಡಲಿಲ್ಲ? ಯುಪಿಎ ಸರ್ಕಾರ 4000 ಮೆ.ವ್ಯಾ.ವಿದ್ಯುತ್ ಉತ್ಪಾದನೆ ಪ್ರಾಜೆಕ್ಟನ್ನು ಉತ್ತರ ಕರ್ನಾಟಕ ಭಾಗದಲ್ಲಿ ಮಾಡಬೇಕೆಂದು ಮಾಡಿದರು. ಅದನ್ನು ತಡೆ ಮಾಡಿದವರು ಯಾರು? ಇದನ್ನು ಮಾಡೇ ತೀರುತ್ತೇವೆಂದು ಮಾನ್ಯ ಈಶ್ವರಪ್ಪನವರು ಹೇಳಿದರು. ಆದರೆ, ಉತ್ತರ ಕರ್ನಾಟಕದಲ್ಲಿ ಏನು ಮಾಡಿದರು? ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಇಲ್ಲಿಲ್ಲ. ಅಲ್ಲಿ ಇದರ ಬಗ್ಗೆ ವಿರೋಧ ಮಾಡಿದಾಗ ನಾಳೆ ದಿವಸ ಎಂಎಲ್ಎ ರವರನ್ನು ಮನೆಗೆ ಕಳುಹಿಸುತ್ತಾರೆಂದು ಗೊತ್ತಾಗಿ ಅಲ್ಲಿ ಈ ಪ್ರಾಜೆಕ್ಟನ್ನು ನಿಲ್ಲಿಸಿದ್ದೀರಿ. 4000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಪ್ರಾಜೆಕ್ಟ್‌ಗೆ ಯುಪಿಎ ಸರ್ಕಾರ ರೆಡಿಯಾಗಿತ್ತು. ಇದನ್ನು ಮಾಡಬೇಡಿ ಎಂದು

ಹಿಡಿದುಕೊಂಡಿದ್ದೇವೆಯೇ? ಉದಾಹರಣೆಗೆ ಹೇಳುವುದಾದರೆ, 28 ಜಿಲ್ಲೆಗಳಲ್ಲಿ ರಾಜೀವ್‌ಗಾಂಧಿ ವಿದ್ಯುತ್‌ಕರಣ ಯೋಜನೆಯಲ್ಲಿ ಯುಪಿಎ ಸರ್ಕಾರ ಸುಮಾರು 80 ಲಕ್ಷ ಕುಟುಂಬಕ್ಕೆ ವಿದ್ಯುತ್ ಕೊಟ್ಟಿದೆ. ಎನ್‌ಡಿಎ ಸರ್ಕಾರ 5 ವರ್ಷ ಅಧಿಕಾರದಲ್ಲಿದ್ದಾಗ ಇದನ್ನು ಏಕೆ ಮಾಡಲಿಲ್ಲ? 1800 ಕೋಟಿ ರೂಪಾಯಿಗಳನ್ನು ನಾನು ಕ್ಲಿಯರ್ ಮಾಡಿಸಿ ಕೊಟ್ಟಿದ್ದೇನೆ. ಆದರೂ ಕೂಡ ಎನ್‌ಡಿಎ ಸರ್ಕಾರ ಇದನ್ನು ಏಕೆ ಮಾಡಲಿಲ್ಲ? ಆಗ ಇವರು ಎಲ್ಲಿಗೆ ಹೋಗಿದ್ದರು. ಅವತ್ತಿನದಿವಸ ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದರು. Daily availability of energy ಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನಾನು ತರಿಸಿದ್ದೇನೆ. ಇದರಲ್ಲಿರುವ ಮಾಹಿತಿ ಪ್ರಕಾರ ಫೆಬ್ರವರಿ ತಿಂಗಳಲ್ಲಿ demand 140 ಮೆ.ವ್ಯಾ. ಇದೆ. Available ಇರತಕ್ಕಂಥದ್ದು 120 ಮೆ.ವ್ಯಾ. ಮತ್ತು Purchase 10.8 ಮೆ.ವ್ಯಾ. ಹಾಗೂ gap 9.2 ಮೆ.ವ್ಯಾ. ಇದೆ ಎಂದು ಹೇಳಿದ್ದೀರಿ. ಮಾರ್ಚ್ ತಿಂಗಳಲ್ಲಿ demand 144 ಮೆ.ವ್ಯಾ. ಇದೆ. Available ಇರತಕ್ಕಂಥದ್ದು 120 ಮೆ.ವ್ಯಾ. ಮತ್ತು Purchase 15.6 ಮೆ.ವ್ಯಾ. ಹಾಗೂ gap 9.6 ಮೆ.ವ್ಯಾ. ಇದೆ ಎಂದು ಹೇಳಿದ್ದೀರಿ. ಮತ್ತೆ ಏಪ್ರಿಲ್ ತಿಂಗಳಲ್ಲಿ demand 140 ಮೆ.ವ್ಯಾ. ಇದೆ. Available ಇರತಕ್ಕಂಥದ್ದು 120 ಮೆ.ವ್ಯಾ. ಮತ್ತು Purchase 12.00 ಮೆ.ವ್ಯಾ. ಹಾಗು gap 8.00 ಮೆ.ವ್ಯಾ. ಇದೆ ಎಂದು ಹೇಳಿದ್ದೀರಿ. ಮೇ ತಿಂಗಳಲ್ಲಿ demand 135 ಮೆ.ವ್ಯಾ. ಇದೆ. Available ಇರತಕ್ಕಂಥದ್ದು 130 ಮೆ.ವ್ಯಾ. ಮತ್ತು Purchase 12.00 ಮೆ.ವ್ಯಾ. ಹಾಗು gap 3.00 ಮೆ.ವ್ಯಾ. ಇದೆ ಎಂದು ಹೇಳಿದ್ದೀರಿ. ಮತ್ತೆ ಇದರಲ್ಲಿ ಚಿಂದಾಲ್‌ನಿಂದ 4.8 ಮೆ.ವ್ಯಾ. ವಿದ್ಯುತ್‌ನ್ನು 4.5 ರೂಪಾಯಿಗಳಂತೆ ಖರೀದಿ ಮಾಡಿದ್ದು, ಇದಕ್ಕಾಗಿ 66.96 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಮಾನ್ಯ ಉಮೇಶ್ ಕತ್ತಿಯವರು ಕಳುಹಿಸಿಕೊಟ್ಟಂಥ ಮಾಹಿತಿ ಪ್ರಕಾರ ಇರತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. NTPC 50 ಮೆ.ವ್ಯಾ. ಮತ್ತೆ ರಿಲಿಯನ್ಸ್‌ನಿಂದ 2.4 ಮೆ.ವ್ಯಾ. ತೆಗೆದುಕೊಂಡಿದ್ದೀರಿ. ಇವತ್ತಿನದಿವಸ 4.5 ರೂಪಾಯಿ ದರದಲ್ಲಿ 33 ಕೋಟಿ ರೂಪಾಯಿ ಕೊಟ್ಟು ಪೂನಾದಲ್ಲಿರುವ ಸಂಸ್ಥೆಯಿಂದ ಖರೀದಿ

ಮಾಡಲಾಗುತ್ತದೆಂದು ಹೇಳಿದ್ದೀರಿ. ಫೆಬ್ರವರಿ ತಿಂಗಳಲ್ಲಿ ಸುಮಾರು 136 ಕೋಟಿ ರೂಪಾಯಿ ಕೊಟ್ಟು High cost current ಖರೀದಿ ಮಾಡುತ್ತೇವೆಂದು ಹೇಳಿದ್ದೀರಿ. ಅದೇ ರೀತಿಯಲ್ಲಿ ಜಿಂದಾಲ್, ಜಿಎಮ್‌ಆರ್, ಎನ್‌ಟಿಪಿಸಿ, IEC ಯಿಂದ 349 ಕೋಟಿ ರೂಪಾಯಿ ಕೊಟ್ಟು ಮಾರ್ಚ್ ತಿಂಗಳಲ್ಲಿ ಕರೆಂಟ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮತ್ತೆ ಏಪ್ರಿಲ್ ತಿಂಗಳಲ್ಲಿ ಅಂದರೆ, 1.4.2010 ರಿಂದ 31.5.2010ರವರೆಗೆ ಸುಮಾರು 7 ರೂಪಾಯಿ ದರದಂತೆ 700 ಮೆ.ವ್ಯಾ. ವಿದ್ಯುತ್ ಸರಬರಾಜಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಇನ್ನು ಫೈನಲೈಸ್ ಆಗಿಲ್ಲ. ಒಂದು ಯುನಿಟ್‌ಗೆ 7 ರೂಪಾಯಿಯಂತೆ ಟೆಂಡರ್ ಹಾಕಿದರೆ ಪರವಾಗಿಲ್ಲ. ಒಂದು ವೇಳೆ 9 ರೂಪಾಯಿಗೆ ಆದರೆ ಇದಕ್ಕಾಗಿ ಎಷ್ಟು ಹಣ ಆಗುತ್ತದೆಂಬುದರ ಬಗ್ಗೆ ಕೂಡ ಅರ್ಥ ಮಾಡಿಕೊಳ್ಳಬೇಕಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಕೇವಲ 300 ಮೆ.ವ್ಯಾ. ವಿದ್ಯುತ್ ಖರೀದಿ ಮಾಡುವುದಕ್ಕೆ 615 ಕೋಟಿ ರೂಪಾಯಿ ಆಗುತ್ತದೆ. ಆದರೆ, ಇದಕ್ಕೆ ಸರ್ಕಾರ ಕೇವಲ 200 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಇನ್ನು 415 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಬಾಕಿ ಹಣವನ್ನು ಇವರು ಬಿಡುಗಡೆ ಮಾಡದಿದ್ದರೆ ವಿದ್ಯುತ್‌ನ್ನು ಅವರು ಕೊಡುವುದಿಲ್ಲ. High cost current ಖರೀದಿ ಬಗ್ಗೆ ನಾನು ಹೇಳಿದ್ದೇನೆ. ಇದು ಒಂದು ಕಡೆ ಇರಲಿ. ಒಂದೊಂದೇ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ 1000 ಮೆ.ವ್ಯಾ. ವಿದ್ಯುತ್‌ನ್ನು ಖರೀದಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇದನ್ನು ಎಲ್ಲೆಲ್ಲಿಂದ ಅಥವಾ ಯಾವ್ಯಾವ ರಾಜ್ಯದಿಂದ ಖರೀದಿ ಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಿ? ಏಕೆಂದರೆ, ಸುಳ್ಳು ಹೇಳಿ ಈ ರಾಜ್ಯದ ಜನತೆಯನ್ನು ಕಗ್ಗತ್ತಲೆಯಲ್ಲಿ ಮುಳುಗಿಸುವಂಥ ಕೆಲಸವನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ 7 ರಿಂದ 10 ಗಂಟೆಯವರಿಗೆ ಪ್ರತಿ ದಿವಸ ಕರೆಂಟ್ ಹೋಗದ ಹಾಗೆ ವ್ಯವಸ್ಥೆ ಮಾಡಿದ್ದೆ. ಇನ್ನು ನಾಲ್ಕು ದಿವಸದಲ್ಲಿ ವಿದ್ಯುತ್

ಖರೀದಿ ಮಾಡಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದ ಹಾಗೆ ಕರೆಂಟ್ ಕೊಡುತ್ತೇವೆಂದು ಒಂದು ಕಡೆ ಮಾನ್ಯ ಈಶ್ವರಪ್ಪನವರು ಇನ್ನೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಕೇವಲ ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟರೆ ಬೇರೇನು ಮಾಡುತ್ತಿಲ್ಲ. ನಾಳೆಯಿಂದ ಪರೀಕ್ಷೆ ಪ್ರಾರಂಭವಾಗುತ್ತಿದೆ. ಇವತ್ತಿನ ದಿವಸ ದೊಡ್ಡ ದೊಡ್ಡ ಜನರ ಮಕ್ಕಳು ಜನರೇಟರ್ ಆನ್ ಮಾಡಿಕೊಂಡು ಓದುತ್ತಾರೆ. ಆದರೆ, ಇವತ್ತಿನ ದಿವಸ ಬಡ ಜನರ ಮಕ್ಕಳ ಪರಿಸ್ಥಿತಿ ಏನಾಗಬೇಕು? ಇವರು ದಿನಕ್ಕೆ 2–3 ಗಂಟೆ ಸರಿಯಾಗಿ ಕರೆಂಟ್ ಕೊಡುತ್ತಿಲ್ಲ. ಇವರ ಉದ್ದೇಶ ಏನು? ಮಾನ್ಯ ಅಧ್ಯಕ್ಷರೆ, ಇದು ಒಂದು ಕಡೆ. ನಮ್ಮ ರಾಜ್ಯದ ಮಕ್ಕಳ ಭವಿಷ್ಯದ ಬಗ್ಗೆ ಅವರ ತಂದೆ–ತಾಯಿಗಳು ಅವರು ಪಾಸಾಗುತ್ತಾರೋ ಫೇಲಾಗುತ್ತಾರೋ ಎನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಫಸ್ಟ್‌ಕ್ಲಾಸ್ ಅಲ್ಲ ಮುಂದಿನ ವರ್ಷಕ್ಕೆ ಹೋದರೆ ಸಾಕು ಎನ್ನುವ ಪರಿಸ್ಥಿತಿ ಬಂದು ವಿದ್ಯಾಭ್ಯಾಸಕ್ಕೆ ಈ ವರ್ಷ ತೊಂದರೆಯಾಗಿದೆ ಎಂದು ಹೇಳಬೇಕಾಗುತ್ತದೆ.

ಶ್ರೀ ಓಲೇಕಾರ್ : ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು: ಮಾನ್ಯ ಓಲೇಕಾರವರೆ, ನೀವು ಸುಮ್ಮನೆ ಎದ್ದೆದ್ದು ನಿಂತು ಮಾತನಾಡುತ್ತೀರಲ್ಲಾ? Please ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ : ನಿಮಗೆ ಅರ್ಥಂಬರ್ಥ ಗೊತ್ತಿದೆ ಬಿಡಿ. ರೇವಣ್ಣನ ಮೇಲೆ ಇಲ್ಲಿ ಹೇಳಿಬಿಟ್ಟು ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಎರಡು ಕಾಗದಕ್ಕೆ ಸಹಿ ಹಾಕಿಸಿಕೊಳ್ಳುವುದು ಬಿಟ್ಟರೆ ಬೇರೆ ಏನು ಇಲ್ಲ, ಕುಳಿತುಕೊಳ್ಳಿ, ಏಕೆ ತಲೆ ಕೆಡಿಸಿಕೊಳ್ಳುತ್ತೀರಿ. ಒಂದು ಕಡೆ ರಾಜ್ಯದ ರೈತಾಪಿ ಜನರಿಗೆ I.P.set ಗೆ ವಿದ್ಯುತ್ ಇಲ್ಲ. ಕಂಪ್ಲೀಟ್ ಬೆಳೆ ಸರ್ವನಾಶವಾಗಿದೆ. ಇನ್ನೊಂದು ಕಡೆ ವಿದ್ಯಾರ್ಥಿಗಳ ಭವಿಷ್ಯ ಸಂಪೂರ್ಣವಾಗಿ ಹಾಳಾಗಿದೆ. ಇನ್ನೊಂದು ಕಡೆ ಕೈಗಾರಿಕೋದ್ಯಮಿಗಳ ಭವಿಷ್ಯವೂ ಹಾಳಾಗಿ ಹೋಗಿದೆ. ಈ ರಾಜ್ಯದ ಇಂಧನ ಇಲಾಖೆ ಇವತ್ತು ಮುಖ್ಯಮಂತ್ರಿಗಳ ಕೈಯಲ್ಲಿ ಇದೆ. ಆದರೂ ಮುಖ್ಯಮಂತ್ರಿಗಳು ಚುನಾವಣೆಯಲ್ಲಿ ರಾಜ್ಯದ ಜನತೆಗೆ ಏನು ಹೇಳಿ ಗೆದ್ದು ಬಂದರು. High cost current ಖರೀದಿಗೆ ಇವತ್ತು ರಾಜ್ಯದಲ್ಲಿ 2500

ಕೋಟಿ ರೂ. ಖರ್ಚಾಗುತ್ತಿದೆ. ಇದರ ಬಗ್ಗೆ ಸಮಗ್ರವಾಗಿ CBI ಯಿಂದ ತನಿಖೆ ಮಾಡಿಸಿದರೆ ಗೊತ್ತಾಗುತ್ತದೆ. ಇನ್ನು KPCL ಬಗ್ಗೆ ತೆಗೆದುಕೊಳ್ಳಬೇಕಾದರೆ, ನಾನು ದಾಖಲಾತಿ ಇಲ್ಲದೆ ಮಾತನಾಡುವುದಕ್ಕೆ ಹೋಗುವುದಿಲ್ಲ. ದಾಖಲಾತಿ ಇಟ್ಟುಕೊಂಡೆ ನಾನು ಮಾತನಾಡಬೇಕಾಗುತ್ತದೆ. ಏಕೆಂದರೆ, ಒಂದು ಕಡೆ ಕರೆಂಟಿನ ಪರಿಸ್ಥಿತಿ, ಇನ್ನೊಂದು ಕಡೆ ಹೇಗೆ ಲೂಟಿ ನಡೆಯುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇವತ್ತು ಉದಾಹರಣೆಯಾಗಿ ಹೇಳಬೇಕಾದರೆ, ಆಮದು ಕಲ್ಲಿದ್ದಲು ಹೇಗೆ ಖರೀದಿಯಾಗುತ್ತಿದೆ ಎನ್ನುವುದರ ಬಗ್ಗೆ ಲೆಕ್ಕವನ್ನು ಹೇಳಬೇಕಾಗುತ್ತದೆ. ಕಲ್ಲಿದ್ದಲು ಹಗರಣದ ಬಗ್ಗೆ ಎರಡು ಸಲ ನಿಯಮ 69ರಲ್ಲಿ ಚರ್ಚೆಗೆ ಕೇಳಿದ್ದೆ, ಅವರು ಚರ್ಚೆಗೆ ಮುಂಚೆ ಎನ್‌ಕ್ವಾಯರಿ ಮಾಡಿಸುತ್ತೇನೆಂದು ಹೇಳಿದರು. ಅದನ್ನು ಏನು ಮಾಡಿದರು ಎನ್ನುವುದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. KPCL ದಿಂದ ಈ ಸರ್ಕಾರದಲ್ಲಿ ಯಾವ ರೀತಿಯಾಗಿ ಲೂಟಿ ನಡೆಯುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾನು KPCLನ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಆಪಾದನೆ ಮಾಡುತ್ತಿಲ್ಲ. ಅವರು ಪ್ರಾಮಾಣಿಕ ಅಧಿಕಾರಿಗಳು, ಅವರು ಕಡತದಲ್ಲಿ ಏನು ಬರೆದಿದ್ದಾರೆ ಎನ್ನುವುದನ್ನು ಬೇಕಾದರೆ ಹೇಳುತ್ತೇನೆ. ಆ ಕಡತದ ಕಾಪಿ ಬೇಕಾದರೆ ನಿಮಗೂ ಕಳುಹಿಸಿ ಕೊಡುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಿಮ್ಮ ಹತ್ತಿರ ಯಾವ ಕಡತ ಇಲ್ಲ ಹೇಳಿ.

ಅಧ್ಯಕ್ಷರು: ಅವರು ಹೇಳಲಿ, ನೀವು ಏಕೆ ಯೀಲ್ಡ್ ಆಗುತ್ತೀರಿ.

ಶ್ರೀ ಹೆಚ್.ಡಿ.ರೇವಣ್ಣ: ಬೀಗ ತೆಗೆಸುವುದು ನನಗೆ ಗೊತ್ತಿದೆ.

ಶ್ರೀ ಆರ್.ಅಶೋಕ: ಮಾನ್ಯ ರೇವಣ್ಣನವರ ಹತ್ತಿರ ಒರಿಜಿನಲ್ ಇದೆಯೋ ಅಥವಾ ಜೆರಾಕ್ಸ್ ಇದೆಯೋ ಈಗ ನೋಡಬೇಕು. ಯಾವ್ಯಾವ ಕಡತ ಯಾವ್ಯಾವ ಟೈಮ್‌ನಲ್ಲಿ ಎತ್ತಿಕೊಂಡು ಹೋಗಿದ್ದಾರೆ, ಯಾವುದೋ ಗೆಸ್ಟ್‌ಹೌಸ್‌ನಲ್ಲಿ ಕಡತ ತರಿಸಿಕೊಂಡರು ಎಂದು ನಾವೆಲ್ಲಾ ಪತ್ರಿಕೆಯಲ್ಲಿ

ಓದುತ್ತಿದ್ದೆವು. ನೀವು ಎತ್ತಿಕೊಂಡು ಹೋಗಿರುವುದು ಜೆರಾಕ್ಸೋ ಅಥವಾ ಓರಿಜಿನಲ್ಲೋ?

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ನೀವು ಏನು ಕಡಿಮೆ ಇಲ್ಲ, ನೀವು ಗೆಸ್ಟ್ ಹೌಸಿಗೆ ತರಿಸಿಕೊಳ್ಳುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಶೋಕರವರೆ ನಾವು ಯಾವ ಕಡತವನ್ನು ತರಿಸಿದ್ದೇವೆಂದರೆ, ರಾಜ್ಯದ ಜನರಿಗೆ ಅನ್ಯಾಯವಾಗುವುದು ಇತ್ತಲ್ಲಾ ಅದನ್ನು ತಡೆ ಹಿಡಿಯುವ ಕಡತವನ್ನು ತರಿಸಿದ್ದೇನೆ ಹೊರತು, ದುಡ್ಡು ಹೊಡೆಯುವ ಯಾವ ಕಡತವನ್ನು ತರಿಸಿಲ್ಲ ಸ್ವಾಮಿ. ನಿಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: Please ಎಲ್ಲರೂ ಕುಳಿತುಕೊಳ್ಳಿ. ತಾವು ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ತನಿಖೆ ನಿಲ್ಲಿಸಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳ ಮನೆಯ ಹತ್ತಿರ ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಒಂದು ಲೈನ್ ರೆಸ್‌ಲ್ಯೂಷನ್ ಮಾಡೋಣ, ಅಸೆಂಬ್ಲಿಯಲ್ಲಿ ಚರ್ಚೆಯೇ ಬೇಡ. ನನ್ನ ಕಾಲದಲ್ಲಿ ನಾನು ಇಂಧನ ಮಂತ್ರಿಯಾಗಿ, ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿ, ಹೌಸಿಂಗ್ ಮಿನಿಸ್ಟರ್ ಆಗಿದ್ದಾಗ ಏನು ನಡೆದಿದೆ ಬೇಕಾದರೆ ಹೇಳಲಿ. ಮುಖ್ಯಮಂತ್ರಿಗಳು 18 ತಿಂಗಳು, ಉಪ ಮುಖ್ಯಮಂತ್ರಿಯಾಗಿ, 20 ತಿಂಗಳು, ಮುಖ್ಯಮಂತ್ರಿಯಾಗಿ ಏನು ಮಾಡಿದ್ದಾರೆ ಎನ್ನುವುದರ ಬಗ್ಗೆ ತನಿಖೆ ಮಾಡಿಸುವುದಕ್ಕೆ ಒಂದು ಲೈನ್ ರೆಸ್‌ಲ್ಯೂಷನ್ ಮಾಡಿ ಕಳುಹಿಸಿ ಕೊಡಲಿ ನಾನು ಬೇಕಾದರೆ ರೆಡಿ ಇದ್ದೇನೆ. ಇಲ್ಲವೆಂದರೆ ನಾನೇನು ಮಾಡುವುದಕ್ಕಾಗುವುದಿಲ್ಲ. ನೀವು CBI ಗೆ ಕೊಡಿ, Supreme Court ನ ನ್ಯಾಯಾಧೀಶರ ಕೈಗೆ ಕೊಡಿ· ನಾನು ರೆಡಿ ಇದ್ದೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೆ ನೀವು ಸುಮ್ಮನೆ ಕುಳಿತುಕೊಳ್ಳಿ ನೀವು ಆ ರೀತಿ ಕುಳಿತುಕೊಂಡು ಏಕೆ ಹೇಳುತ್ತೀರಿ. No, ಇದು ಸರಿಯಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಆಡಳಿತ ಪಕ್ಷದ ಕಡೆಯಿಂದ ಉತ್ತರ ಏನು ಇಲ್ಲ. ಉತ್ತರ ಹೇಳಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: Unnecessarily ನೀವು ಕುಳಿತುಕೊಂಡು ಆ ರೀತಿ ಏನು ಹೇಳುವುದು.

ಶ್ರೀ ಆರ್.ಅಶೋಕ: ಮಾನ್ಯ ಅಧ್ಯಕ್ಷರೆ, ಅವರ ಆಡಳಿತ ಇದ್ದಾಗ, ಮುಖ್ಯಮಂತ್ರಿಗಳಾಗಿದ್ದಾಗ ಬಹಳಷ್ಟು ಜನ Opposition ದವರು CBIಗೆ ಕೊಡಿ ಎಂದು ಕೇಳಿದರೂ, ಒಂದು ಸಲವು ಮಾಡಲಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ನೀವು ಈಗ ಅಧಿಕಾರಕ್ಕೆ ಬಂದಿದ್ದೀರಲ್ಲಾ ನೀವು ಮಾಡಿ, ಯಾರು ಬೇಡ ಎನ್ನುತ್ತಾರೆ.

ಶ್ರೀ ಆರ್.ಅಶೋಕ: ಆಗಲೂ opposition ದವರು ಕೇಳಿದರು ಒಂದು ಲೈನ್ ಸಾಕು ಎಂದು. ಆಗ CBI ಅರ್ಧ ಲೈನ್ ಮಾಡಿ ಎಂದರೂ ಮಾಡಲಿಲ್ಲ. ಈಗ ಒಂದು ಲೈನ್ ಎಂದು ಅನ್ನುತ್ತಿದ್ದೀರಲ್ಲಾ?

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ನಿಮಗೆ ಅವಕಾಶ ಸಿಕ್ಕಿದೆ ಮಾಡಿ.

ಅಧ್ಯಕ್ಷರು: ಸ್ವಲ್ಪ ಬೇಗ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಭಾಟಿಯಾ ಇಂಟರ್ ನ್ಯಾಷನಲ್ ಕಂಪನಿ, ಕಲ್ಲಿದ್ದಲು ಬಗ್ಗೆ ನಡೆದಿರುವ ಕೆಲವು ಅವ್ಯವಹಾರವನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. Karnataka Power Corporation Limited ಇವರ tender notification No:A:M/83, Import Rate 31.5.2008 ರಲ್ಲಿ tender notification ಮಾಡಿದರು. ಅದನ್ನು ಯಾವ ರೀತಿ ಮಾಡಿದರೆಂದರೆ, 6 ಲಕ್ಷ ಆಮದು ಕಲ್ಲಿದ್ದಲ್ಲನ್ನು ಖರೀದಿ ಮಾಡುವುದಕ್ಕೆ ಪ್ಲಸ್ ಅಥವಾ ಮೈನಸ್ ಅಂದರೆ 15% extra ಅಥವಾ 15% ಕಡಿಮೆ ಎಂದು tender notification issue ಆಗುತ್ತದೆ. 6 ತಿಂಗಳ ಅವಧಿಗೆ ಈ ಟೆಂಡರ್‌ನ್ನು ಕರೆಯಲಾಗಿತ್ತು.

(ಗೊಂದಲ)

ಶ್ರೀ ಉಮೇಶ್ ಕತ್ತಿ: ಅವರು ನಿಲುವಳಿ ಸೂಚನೆ ಏನು ಕೊಟ್ಟಿದ್ದಾರೆ ಅದರ ಮೇಲೆ ಮಾತನಾಡುವುದಕ್ಕೆ ಹೇಳಿ. ಕಲ್ಲಿದ್ದಲು ಬಗ್ಗೆ ಏನು?

ಶ್ರೀ ಹೆಚ್.ಡಿ. ರೇವಣ್ಣ: ನಾವು ನಿಲುವಳಿ ಸೂಚನೆ ಏನು ಕೊಟ್ಟಿದ್ದೇವೆ ಅದನ್ನು ತೆಗೆದು ನೋಡಿ.

ಶ್ರೀ ಎಸ್. ಸುರೇಶ್‌ಕುಮಾರ್: (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ರೇವಣ್ಣನವರು ಮಾತನಾಡುವುದಕ್ಕೆ ಶುರು ಮಾಡಿದ್ದು 11.41 ಕ್ಕೆ, ಈ ಡಿಬೇಟ್‌ಗೆ ಒಂದು ಟೈಮ್ ಫ್ರೇಮ್ ಇಟ್ಟುಕೊಳ್ಳಬೇಕು. ಮಾನ್ಯ ಬಾಲಕೃಷ್ಣರವರೆ ಒಂದು ನಿಮಿಷ ತಾಳಿ. ಇವತ್ತು 2ನೇ ತಾರೀಖು, ನಾಡಿದ್ದು ಸಂಜೆಯೊಳಗೆ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಆಗಬೇಕು. ಅದಕ್ಕೋಸ್ಕರ ನಾನು ಸಭಾಧ್ಯಕ್ಷರಲ್ಲಿ ವಿನಂತಿಸಿಕೊಳ್ಳುವುದು. ದಯಮಾಡಿ ಒಂದು ಟೈಮ್ ಫ್ರೇಮ್ ಇಟ್ಟುಕೊಂಡು ಯಾರ್‍ಯಾರದ್ದು ಎಷ್ಟೆಷ್ಟು ಭಾಷಣ, ಉತ್ತರ ಎಷ್ಟು ಗಂಟೆಗೆ ಎನ್ನುವುದನ್ನು ದಯವಿಟ್ಟು ಹೇಳಿಬಿಡಿ ಸ್ವಾಮಿ.

ಅಧ್ಯಕ್ಷರು: 4 ಗಂಟೆಗೆ ಇವತ್ತು ಉತ್ತರ ಕೊಡಬೇಕು, ಆದಷ್ಟು ಬೇಗ ನೀವು ಮುಗಿಸಿ.

ಶ್ರೀ ಎಸ್. ಸುರೇಶ್‌ಕುಮಾರ್: ಅಲ್ಲಿಯವರೆಗೆ ರೇವಣ್ಣರವರೆ ಮಾತನಾಡುತ್ತಾರಾ?

ಅಧ್ಯಕ್ಷರು: ಬೇರೆಯವರಿಗೂ ಅವಕಾಶ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡು issue ಗಳನ್ನು ಬೇಗ ಮುಗಿಸಿ, ಯಾರಿಗೂ ತೊಂದರೆ ಕೊಡದಂತೆ ಇರುತ್ತೇನೆ ಬಿಡಿ. ಯಾರೋ ಮಾಡುವ ತಪ್ಪಿಗೆ ಮಾನ್ಯ ಮುಖ್ಯಮಂತ್ರಿಗಳು. ಹೊಣೆಗಾರರಾಗುತ್ತಿದ್ದಾರೆ. ಒಂದು ವಿಷಯವನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ನಾನು ಮಾನ್ಯ ಅಶೋಕರವರನ್ನು ಮಾನ್ಯ ಕಾನೂನು ಸಚಿವರನ್ನು ಮತ್ತು ಮುಖ್ಯಮಂತ್ರಿಗಳನ್ನು safeguard ಮಾಡುತ್ತಿದ್ದೇನೆ. ಸ್ವಾಮಿ ಈ ಟೆಂಡರ್‌ನ್ನು 6 ತಿಂಗಳಿಗೆ ಎಂದು ಕರೆದರು. ಜೂನ್ 10ನೇ ತಾರೀಖಿಗೆ tender ನಲ್ಲಿ last time ಎಂದು ಕೊಟ್ಟಿದ್ದಾರೆ. ಇದಾದ ಮೇಲೆ

ಒಂದು ಮಾತನ್ನು ತಮ್ಮ ಗಮನಕ್ಕೆ ಹೇಳುತ್ತೇನೆ. ಟೆಂಡರ್ ಕವರ್ ಯಾವಾಗ ಒಡೆದರು ಎಷ್ಟು ಗಂಟೆಗೆ ಏನು ಎಂದು ಹೇಳುವುದಕ್ಕೆ ಹೋದರೆ ಇನ್ನು ಒಂದು ಗಂಟೆ ಸಮಯ ಬೇಕಾಗುತ್ತದೆ. ತಮಗೆ ಎರಡು ಉದಾಹರಣೆಯನ್ನು ಕೊಡುತ್ತೇನೆ. ಟೆಂಡರ್ ಯಾವಾಗ ಕರೆದರು, ಯಾವಾಗ postpone ಆಯಿತು, ಯಾವ್ಯಾವ ಮೀಟಿಂಗ್‌ನಲ್ಲಿ ಯಾವ್ಯಾವ ಅಧಿಕಾರಿಗಳು ಏನೇನು ಮಾಡಿದರು ಎನ್ನುವುದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. Bhatia companyಗೆ import coalನ್ನು ತೆಗೆದುಕೊಳ್ಳುವುದಕ್ಕೆ ಕೊಟ್ಟರು. ನಮ್ಮಲ್ಲಿಯೂ Indian coal ಬರುತ್ತಿದೆ. ಸಿಂಗ್ರಾಣಿ ಆಂಧ್ರಪ್ರದೇಶ ಇರಬಹುದು, Western coal ಮಹಾರಾಷ್ಟ್ರದಿಂದ ಇರಬಹುದು, ಅದೇ ರೀತಿ Maharaja coal Orissa ದಿಂದ ಬರುವುದು ಇರಬಹುದು. Import coal ಎಂದರೆ ಹೊರದೇಶದಿಂದ ಬರುವಂಥದ್ದು ಸ್ವಾಮಿ. 6 ಲಕ್ಷಕ್ಕೆ ಒಂದೇ ಸಲಕ್ಕೆ ಟೆಂಡರ್ ಕರೆಯುವ ಅವಶ್ಯಕತೆ ಇತ್ತಾ ಸ್ವಾಮಿ. Indian coal ಖರೀದಿ ಮಾಡಿ ಎಂದು ಹೇಳಿ ಕೇಂದ್ರ ಸರ್ಕಾರದ ಅಧಿಕಾರಿಗಳು ಹಲವಾರು ಸಾರಿ ಪತ್ರವನ್ನು ಬರೆಯುತ್ತಾರೆ. ಆದರೆ ಇದು ಸರ್ಕಾರಿ ಕಂಪನಿಯಿಂದ ಬರುವುದು. Indian coal ಮಹಾರಾಷ್ಟ್ರದ್ದು ಇರಬಹುದು ಅಥವಾ ಆಂಧ್ರಪ್ರದೇಶದ್ದು ಇರಬಹುದು, ಒರಿಸ್ಸಾದ್ದು ಇರಬಹುದು. ಇದು ಕೇಂದ್ರ ಸರ್ಕಾರದಿಂದ ಬರುವಂಥ ಕೋಲ್ ಇದು. ಅದನ್ನು ತೆಗೆದುಕೊಳ್ಳಿ ಎಂದರೆ, ಯಾರೊಬ್ಬರು ಆಸಕ್ತಿಯನ್ನು ತೋರುವುದಿಲ್ಲ. ಇದಕ್ಕೆ 2800 ರೂ.ಗಳ ರೇಟ್ ಇರಬಹುದು, ಎರಡೇ ತಿಂಗಳಲ್ಲಿ high costಗೆ ಹೋಯಿತು. ಆಮದು ಕಲ್ಲಿದ್ದಲಿಗೆ 7800 ರೂ.ಗಳ ರೇಟ್‌ಗೆ ಟೆಂಡರ್ ಕೊಟ್ಟಿರುತ್ತಾರೆ. 6 ಲಕ್ಷ ಟನ್ 2 ತಿಂಗಳಲ್ಲಿ ಅವಶ್ಯಕತೆ ಇತ್ತೇ? 2 ತಿಂಗಳು ಆದ ಮೇಲೆ ಮತ್ತೆ ಇಳಿಯಿತು ರೂ.4800/– ಕ್ಕೆ ಬಂತು. ನಂತರ ಕೋಲ್ 3800 ರೂಪಾಯಿಗಳಿಗೆ ಬಂತು. ಆಗ ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು 15% Plus or Minus ಎಂದು ಇತ್ತಲ್ಲ, ಅಂದರೆ 6 ಲಕ್ಷದಲ್ಲಿ Plus or Minus, 6 ಲಕ್ಷಕ್ಕೆ ಟೆಂಡರ್ ಕರೆದದ್ದೇ ಮೊದಲನೆಯ ತಪ್ಪು. ಅದನ್ನು ರಾಜಕೀಯ ಒತ್ತಡದ ಮೇಲೆ ಕರೆದಿದ್ದಾರೆಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಆಗ ವ್ಯವಸ್ಥಾಪಕ

12.50 ಪಿ.ಎಂ.

ನಿರ್ದೇಶಕರು ದೆಹಲಿಯ ಪ್ರವಾಸದಲ್ಲಿರುತ್ತಾರೆ. ಅವರು ದೆಹಲಿಯ ಪ್ರವಾಸದಲ್ಲಿರುವಾಗ ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ.ಪಿ.ಬಳಿಗಾರ್‌ರವರು, by phone message, ಕಳುಹಿಸಿದ್ದಾರೆ. ಈ ಬಗ್ಗೆ ಬೇಕಾದರೆ ದಾಖಲೆಗಳು ಇವೆ, ಅವರ ಕಡತದಲ್ಲಿ ಬೇಕಾದರೆ ನೋಡಿ, ವ್ಯವಸ್ಥಾಪಕ ನಿರ್ದೇಶಕರು ಕೆಪಿಸಿಎಲ್ ಅವರು ಬರೆದಿರುವಂತಹ ದಾಖಲೆಯನ್ನು ತಮಗೆ ಕೊಡುತ್ತೇನೆ. By phone message. Phone Messageನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದೇಶ ಇದೆ. ನೀವು ಇವರಿಂದ ಖರೀದಿಯನ್ನು ಮಾಡಬೇಕು. ಅವರಿಗೆ 15% ಪೇಮೆಂಟ್ ಕೊಡಬೇಕೆಂದು ಹೇಳಿ ನೇರವಾಗಿ ಅವರೇ ಹೇಳಿದ್ದಾರೆ. ಅವರು ಹೇಳಿದ ನಂತರ ವ್ಯವಸ್ಥಾಪಕ ನಿರ್ದೇಶಕರು ಅಲ್ಲಿಂದ ಅವರು ಫೋನ್ ಮಾಡಿ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತಾರೆ. ಇದು phone message ಇರುವುದರಿಂದ ಅವರಿಗೆ ಕೊಟ್ಟುಬಿಡಿ ಎಂದು ಹೇಳುತ್ತಾರೆ. ಇವರೆಲ್ಲರೂ ಬೇಡವೆಂದು ಹೇಳುತ್ತಾರೆ. ಆಗ ಅಧಿಕಾರಿಗಳು 5,40,000ಕ್ಕೆ ಲಿಮಿಟ್ ಮಾಡುತ್ತಾರೆ. 5,10,000 ಟನ್‌ಗೆ ಸೀಮಿತಗೊಳಿಸಿ ಎಂದು ಕೆಪಿಟಿಸಿಎಲ್ ಎಂ.ಡಿ.ರವರು ಹೇಳುತ್ತಾರೆ. 15% ಅಂದರೆ 5,10,000 ಟನ್ ಆಗುತ್ತದೆ, 7,800.00 ರೂಪಾಯಿಗಳು. ಆದರೆ ಕಲ್ಲಿದ್ದಲು ಮಾರ್ಕೆಟ್‌ನಲ್ಲಿ 3,800 ರೂಪಾಯಿಗಳು ಇರುತ್ತದೆ. ಅದನ್ನು ಮುಖ್ಯಮಂತ್ರಿಗಳು ಅವರ ಗೃಹ ಕಛೇರಿಯಿಂದ ಒಂದು directionನ್ನು ಕೊಡುತ್ತಾರೆ ಆ ಪತ್ರವನ್ನು ನಾನು ಓದಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮೆ: 'ಭಾಟಿಯಾ ಇಂಟರ್‌ನ್ಯಾಷನಲ್ ಲಿಮಿಟೆಡ್ ಅವರೊಂದಿಗೆ ಟೆಂಡರ್ ಮಾಡಲಾದಷ್ಟು ಆಮದು ಕಲ್ಲಿದ್ದಲನ್ನು ಅಂದರೆ 6 ಲಕ್ಷ ಟನ್ ಕಲ್ಲಿದ್ದಲನ್ನು ಪಡೆಯಲು ಕೆಪಿಸಿಎಲ್ ಒಪ್ಪಂದವನ್ನು ಮಾಡಿಕೊಂಡಿದ್ದು ಪ್ರಸ್ತುತ ಪ್ರಸ್ತಾವನೆಯಲ್ಲಿ 6 ಲಕ್ಷ ಟನ್ ಕಲ್ಲಿದ್ದಲಿನ ಬದಲಾಗಿ ಪ್ರತಿಶತ 15 ರಷ್ಟು ಕಡಿಮೆ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ. ಅಂದರೆ, ಕೆಪಿಸಿಎಲ್ ಎಂ.ಡಿ 15% ಕಡಿಮೆ, 90,000 ಟನ್ ನ್ನು ಖರೀದಿ ಮಾಡಬೇಡಿ ಎಂದು ಹೇಳಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು

ಪ್ಯಾರಾ–1ರಲ್ಲಿ ಹೇಳುತ್ತಾರೆ'. ಆದರೆ ಪರ್ಯಾಯ ವ್ಯವಸ್ಥೆಯಿಂದ ಕಲ್ಲಿದ್ದಲ್ಲನ್ನು ಪಡೆಯುವ ಪ್ರಕ್ರಿಯೆಯು ಪೂರ್ಣಗೊಂಡಿರುವುದಿಲ್ಲ ಮತ್ತು ಸಾಧ್ಯತೆ ಇದೆ. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಮುಂಬರುವ ದಿನಗಳಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಕಲ್ಲಿದ್ದಲು ಅವಶ್ಯಕತೆ ಹೆಚ್ಚು ಬೇಕಾಗುತ್ತದೆ.' ಅಂದರೆ ಕೆಪಿಸಿಎಲ್ ಎಂ.ಡಿ.ಯವರು ಬೇಡವೆಂದು ಹೇಳುತ್ತಾರೆ. ನೀವು 7,800.00 ರೂಪಾಯಿಗಳಿಗೆ ಕಲ್ಲಿದ್ದಲನ್ನು ಖರೀದಿ ಮಾಡಬೇಡಿ, ಅದು 3,800.00 ರೂಪಾಯಿಗಳಿಗೆ ಸಿಗುತ್ತದೆ ಎಂದು ಕೆಪಿಸಿಎಲ್ ಅಧಿಕಾರಿಗಳು ಹೇಳುತ್ತಾರೆ. ಆ ಕೆಪಿಸಿಎಲ್ ಅಧಿಕಾರಿಯ ಟಿಪ್ಪಣಿಯನ್ನು ಒಂದು ಕಡೆಗೆ ಎಸೆಯುತ್ತಾರೆ. 'ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಆಗಿರುವಂತಹ ಒಪ್ಪಂದಂತೆ ಇರುವ 6 ಲಕ್ಷ ಟನ್ ಕಲ್ಲಿದ್ದಲನ್ನು ಪ್ರಸ್ತುತ ಶೇಕಡ 18ರಷ್ಟನ್ನು ಕಡಿತಗೊಳಿಸದಂತೆ ಪರಿಶೀಲಿಸುವುದು ಸಮಂಜಸವಾಗಿರುತ್ತದೆ. ಆದ್ದರಿಂದ ಟೆಂಡರ್ ಮಾಡಿರುವಂತೆ ಹಾಗೂ ಮೆ: ಭಾಟಿಯಾ ಇಂಟರ್‌ನ್ಯಾಷನಲ್ ಲಿಮಿಟೆಡ್ ಅವರೊಂದಿಗೆ ಮಾಡಿಕೊಂಡಿರುವಂತಹ ಒಪ್ಪಂದಂತೆ 6 ಲಕ್ಷ ಟನ್ ಆಮದು ಕಲ್ಲಿದ್ದಲ್ಲನ್ನು ಖರೀದಿಸಲು ಸೂಚಿಸಿದೆ' ಎಂದು ಮುಖ್ಯಮಂತ್ರಿಗಳ direction ಇದೆ. ನೀವು 7,800.00 ರೂಪಾಯಿಗಳ ಕಲ್ಲಿದಲ್ಲನ್ನು ಖರೀದಿ ಮಾಡಬೇಕು, ಹೆಚ್ಚಿಗೆ 90,000 ಟನ್‌ನ್ನು ಅಂತ ಹೇಳಿ ಕೆಪಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರು 5,10,000 ಟನ್‌ಗೆ ಲಿಮಿಟ್ ಮಾಡುತ್ತಾರೆ. 90,000 ಟನ್ ಖರೀದಿ ಮಾಡುವುದರಿಂದ ಸರ್ಕಾರಕ್ಕೆ ಎಷ್ಟು ಲುಕ್ಸಾನ್ ಆಗಿದೆ, ಇದರ ಹಿಂದೆ ಯಾರು ಇದ್ದಾರೆ? ಈ ಭಾಟಿಯಾ ಕಂಪನಿಯ ಹಿಂದುಗಡೆ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ direction ಕೊಡುವುದಾದರೆ ಇದರಲ್ಲಿ ಅವ್ಯವಹಾರ ನಡೆದಿಲ್ಲವೆ, ಹೇಳಲಿ. ಉದಾಹರಣೆಗೆ ಹೇಳುವುದಾದರೆ, ಇದು ಯಾರ ಮನೆಯಿಂದ ಹೋಗುವುದು ಸ್ವಾಮಿ? ಅವರ ಮನೆಯಿಂದ ಬೆಳಿಗ್ಗೆ 8 ಗಂಟೆ 11 ನಿಮಿಷಕ್ಕೆ fax message ಹೋಗುತ್ತದೆ.ಬೇಕಾದರೆ ಅದರ ಕಾಪಿಯನ್ನು ಸಹ ನಾನು ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು 5 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು. ಈಗಾಗಲೇ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದೂವರೆ ಗಂಟೆಯಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಕೋಟ್ಯಾಂತರ ರೂಪಾಯಿಗಳ ಹಗರಣಗಳ ಬಗ್ಗೆ ಹೇಳುತ್ತಿದ್ದೇನೆ. ಅದನ್ನು ಬಿಟ್ಟು ನಾನು ಏನು ಹೇಳಲಿ. ಇದಕ್ಕಿಂತ ಇನ್ನೇನು ದಾಖಲಾತಿಯನ್ನು ತಮಗೆ ಕೊಡಬೇಕು? ವ್ಯವಸ್ಥಾಪಕ ನಿರ್ದೇಶಕರು 5,10,000 ಟನ್‌ಕ್ಕೆ ಲಿಮಿಟ್ ಮಾಡಿ, ಅದು ಜಾಸ್ತಿ ಇದೆ, ಕಲ್ಲಿದಲ್ಲನ್ನು ಖರೀದಿ ಮಾಡುವುದು ಬೇಡವೆಂದು ಹೇಳಿದ ಮೇಲೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸೂಚನೆಯನ್ನು ಕೊಡುತ್ತಾರಲ್ಲಾ, ನನಗೆ ಅವೆಲ್ಲವೂ ಸಂಬಂಧವಿಲ್ಲ. 6 ಲಕ್ಷ ಟನ್‌ನ್ನು ಖರೀದಿ ಮಾಡಬೇಕೆಂದು ಹೇಳಿದ್ದೇನೆ, ಭಾಟೀಯಾ ಕಂಪನಿಯವರೊಂದಿಗೆ ತೆಗೆದುಕೊಳ್ಳಬೇಕು, XX ಇದನ್ನು ತಾವು ತೆಗೆದುಕೊಳ್ಳಬೇಕೆಂದು ಸೂಚನೆಯನ್ನು ಕೊಡುತ್ತಾರಲ್ಲಾ....

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಸಭಾಧ್ಯಕ್ಷರೆ, it is very serious.

ಶ್ರೀ ಹೆಚ್.ಡಿ.ರೇವಣ್ಣ: ನಾನು ಇನ್ನು ಏನನ್ನು ಹೇಳಲಿ? ನಾನು ಲಾ ಓದಿಲ್ಲಾ ಸ್ವಾಮಿ.

ಶ್ರೀ ಎಸ್.ಸುರೇಶ್ ಕುಮಾರ್: ಅವರು ಮಾತನಾಡುವುದಕ್ಕೆ ಮುಂಚೆ ಒಂದು ನೋಟೀಸ್‌ನ್ನು ಕೊಡಲಿ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ): ಅವರು ಅದನ್ನು prove ಮಾಡಬೇಕು.

(ಗೊಂದಲ)

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆಸಿಹಾಕೋಣ.

XX

ಶ್ರೀ ಎಂ.ಶ್ರೀನಿವಾಸ್: ದಯವಿಟ್ಟು ಆ ಪದವನ್ನು ಕಡತದಿಂದ ವಾಪಸ್ಸು ತೆಗೆಸಿ.

(XX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಮೇಲಿನ ಪದಗಳನ್ನು ಕಡತದಿಂದ ತೆಗೆಯಲಾಗಿದೆ.)

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದುಹಾಕಿ. ಆ ಪದವನ್ನು ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ : ಅವರು ಹೇಳುವುದೆಲ್ಲವನ್ನು ಕೇಳುವುದಕ್ಕಲ್ಲಾ ನಾವು ಇಲ್ಲಿ ಇರುವುದು.

ಅಧ್ಯಕ್ಷರು: ಹಾಗಾದರೆ ನೀವು ಅನುಮತಿಯನ್ನು ಪಡೆಯದೆ ಏನು ಬೇಕಾದರೂ ಮಾತನಾಡಬಹುದೇ? ನೆಹರು ಓಲೇಕಾರ್‌ರವರೆ, I have to name you. ನೀವು ಕುಳಿತುಕೊಳ್ಳಿ ಎಂದರೂ ಕುಳಿತುಕೊಳ್ಳುವುದಿಲ್ಲ.

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ : ಅವರು ಹೇಳಿದ್ದೆಲ್ಲವನ್ನು ನಾವು ಕೇಳಬೇಕೆ?

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದುಹಾಕಿದೆ. ಮತ್ತೆ ಏಕೆ ನೀವು ಅನುಮತಿ ಇಲ್ಲದೆ ಮಾತನಾಡುತ್ತೀರಿ? Please, ಇಲ್ಲ, I have to name you.

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ : ಆ ತರಹ ಮಾತನಾಡುವುದು ಸರಿಯಲ್ಲ.

ಡಾ: ಹೆಚ್.ಸಿ. ಮಹದೇವಪ್ಪ : ಓಲೇಕಾರ್‌ರವರೆ, ನೀವು ಪದೇ ಪದೇ ಎದ್ದು ನಿಂತುಕೊಂಡು ಮಾತನಾಡುವುದಾದರೆ ಹೇಗೆ?

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು 5 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಸದಸ್ಯರು ಬಹಳ ಗಂಭೀರವಾದಂತಹ ಆಪಾದನೆಯನ್ನು ಮಾಡಿದ್ದಾರೆ. ಈ ಮಾತನ್ನು ಕಡತದಿಂದ ತೆಗೆದುಹಾಕಿದರೆ ಸಾಲದು, ಅವರ ಆಪಾದನೆಯು ಈ ಸದನದಿಂದ ಹೊರಹೊಮ್ಮಿರುವುದರಿಂದ ಜನಗಳ ಮನಸ್ಸಿಗೆ ತಲುಪಿದೆ, ಬಹಳ ಮುಖ್ಯವಾಗಿ ಜನರ ಮನಸ್ಸಿನಿಂದ ತೆಗೆಯಬೇಕು.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ತಂದಂತಹ ನಿಲುವಳಿ ಸೂಚನೆಯನ್ನು ಮಾನ್ಯ ರೇವಣ್ಣನವರು ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ. ಜೆಡಿ(ಎಸ್) ಶಾಸಕಾಂಗ ಪಕ್ಷದ ಸದಸ್ಯರು ತಂದಂತಹ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಿದ್ದಾರೆ. ಈ ನಿಲುವಳಿ ಸೂಚನೆಯನ್ನು ಓದಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ಅದನ್ನು ತಿರಸ್ಕಾರ ಮಾಡಿಲ್ಲ.

ಶ್ರೀ ಉಮೇಶ್ ವಿ. ಕತ್ತಿ: ನಿನ್ನೆಯ ದಿನ ಹೇಳಿದ್ದಾರೆ. ನಿನ್ನೆಯ ದಿನ ಈ ಬಗ್ಗೆ ತಿರಸ್ಕಾರ ಮಾಡಿದ್ದೇನೆಂಬ ಬಗ್ಗೆ ರೂಲಿಂಗ್ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಇವತ್ತಿನ ದಿನ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರು ತಾವು ಕೊಟ್ಟಂತಹ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಿದ್ದಾರೆ. ನಾನು ಅಧ್ಯಕ್ಷರ ಕಡೆ ನೋಡಿಕೊಂಡು ಹೇಳುತ್ತಿದ್ದೇನೆ. ನಿನಗೆ ಏತಕ್ಕೆ ಬೇಕು? ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುತ್ ಅಭಾವದ ಬಗ್ಗೆ ರೈತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅಂದರೆ ವಿದ್ಯಾಭ್ಯಾಸ ಮಾಡುವಂತಹ ಮಕ್ಕಳಿಗೆ ತೊಂದರೆಯಾಗುತ್ತದೆಂಬುದರ ಬಗ್ಗೆ ಚರ್ಚೆ ಮಾಡುತ್ತೇವೆಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ಬಿಟ್ಟು ಇವತ್ತು ನೀವು ಕಲ್ಲಿದ್ದಲಿನ ಬಗ್ಗೆ .....

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಾವು ಕುಳಿತುಕೊಳ್ಳಿ,

ಶ್ರೀ ಉಮೇಶ್ ವಿ. ಕತ್ತಿ : ನಾನು point of order ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ: ಒಂದು ಕಡೆ ಈ ಬಗ್ಗೆ enquiry ನಡೆಯುತ್ತಿದೆ. ರಾಜ್ಯದಲ್ಲಿ ವಿದ್ಯುತ್ ಅಭಾವ ಇದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು: ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. Please, ತಾವು ಕುಳಿತುಕೊಳ್ಳಿ. ನಿಮಗೆ ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅವರು ಮಾತನಾಡುವುದು ಯಾವುದು ದಾಖಲೆಗೆ ಹೋಗಬಾರದು. Nothing will go on record. ಏನು ಬೇಕಾದರೂ ತಾವು ಮಾತನಾಡಿಕೊಳ್ಳಿ. ಅವರು ಹೇಳುವುದು ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ. ಅವರು ಹೇಳುವುದು ಯಾವುದು ದಾಖಲೆಗೆ ಹೋಗಬಾರದು.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, I am on a point of order. ಇಲ್ಲಿ ಅವರು clear ಆಗಿ ಹೇಳಲಿ. ಅವರು ನಿನ್ನೆಯ ದಿನ ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ಅದರ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಅವರು ನಿಲುವಳಿ ಸೂಚನೆಯನ್ನು ಬಿಟ್ಟು ಅವರು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಹೋದರೆ ನನ್ನದೇನು ಅಭ್ಯಂತರವಿಲ್ಲ. ಆದರೆ ಈ ನಿಲುವಳಿ ಸೂಚನೆಯ ಮೇಲೆ ವಿದ್ಯುತ್ ಅಭಾವ, ಕೃಷಿ ತೊಂದರೆಗಳು, ವಿದ್ಯಾರ್ಥಿಗಳಿಗೆ ತೊಂದರೆಗಳು, ಇದರ ಬಗ್ಗೆ ನಿಲುವಳಿ ಸೂಚನೆ ಇದೆ. ಅದನ್ನು ಬಿಟ್ಟು ಕಲ್ಲಿದಲು ಖರೀದಿ, ಇವರ ಕಾಲದಲ್ಲಿ ಏನಾಯಿತು, ಅವರ ಕಾಲದಲ್ಲಿ ಏನಾಯಿತು, ಅದರ ಬಗ್ಗೆ ಮತ್ತೊಂದು ನಿಲುವಳಿ ಸೂಚನೆಯನ್ನು ತಂದಾಗ ಚರ್ಚೆಯನ್ನು ಮಾಡೋಣ. ಆದರೆ ವಿದ್ಯುತ್ ಅಭಾವದ ಬಗ್ಗೆ ಚರ್ಚೆಯಾಗಲಿ, ಅದನ್ನು ಬಿಟ್ಟು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ......

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಕಲ್ಲಿದ್ದಲು ಯಾವ ಇಲಾಖೆಯದು? ಹಾಗಾದರೆ ನಿಮಗೆ ಎಲ್ಲಾ ಇಲಾಖೆಯ ಬಗ್ಗೆ ಗೊತ್ತೆ?

ಶ್ರೀ ಉಮೇಶ್ ವಿ. ಕತ್ತಿ: ನನಗೆ ಎಲ್ಲಾ ಇಲಾಖೆಯ ಬಗ್ಗೆಯೂ ಗೊತ್ತಿದೆ. ಇಲ್ಲಿ ನಾನೇನು ಹೊಸಬನಲ್ಲಾ. ಆದರೆ ರಾಜ್ಯದಲ್ಲಿ ಆಗತಕ್ಕಂತಹ ವಿದ್ಯುತ್ ಅಭಾವದ ಬಗ್ಗೆ, ಕೃಷಿಕರ ಮೇಲೆ ಆಗತಕ್ಕಂತಹ ತೊಂದರೆಯ

ಬಗ್ಗೆ, ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಚರ್ಚೆ ಮಾಡಬೇಕೇ ವಿನ: ಕಲ್ಲಿದ್ದಲಿನ ಮೇಲೆ ಚರ್ಚೆ ಮಾಡುವುದಕ್ಕೆ ಈ ಸದನವನ್ನು ಉಪಯೋಗ ಮಾಡಿಕೊಳ್ಳುವುದಲ್ಲ. ಅವರು ಬೇರೆ ರೂಪದಲ್ಲಿ ನಿಲುವಳಿ ಸೂಚನೆಯನ್ನು ತರಲಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಕತ್ತಿಯವರು point of order ಎತ್ತಿದ್ದಾರೆ. ಅದಕ್ಕೆ ಮಾನ್ಯ ಅಧ್ಯಕ್ಷರು ದಯವಿಟ್ಟು ರೂಲಿಂಗ್‌ನ್ನು ಕೊಡಿ. How can he say such things? It is a part of the department.

ಶ್ರೀ ಕೆ.ಎಂ.ಶಿವಲಿಂಗೇಗೌಡ: ವಿದ್ಯುತ್‌ನ ಅಭಾವವೆಂದು ಹೇಳಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದು ನಿಜ.

ಅಧ್ಯಕ್ಷರು: ಈಗ ನಿಯಮ 69ರ ಅಡಿಯಲ್ಲಿ ಚರ್ಚೆಯಾಗುತ್ತಿದೆ. ಹಾಗಾಗಿ ಅವರು ಈ ಬಗ್ಗೆ ಚರ್ಚೆಯನ್ನು ಬೇಗ ಮುಗಿಸಬೇಕೆ ಹೊರತು ಇದು ನಿಲುವಳಿ ಸೂಚನೆಯ ಚರ್ಚೆಯಲ್ಲಾ. You go ahead. (ಗೊಂದಲ) ತಾವು ಕುಳಿತುಕೊಳ್ಳಿ, please, ಏನು ಎದ್ದು ನಿಂತುಕೊಳ್ಳುತ್ತೀರಿ? I will name you, ಅಷ್ಟೆ.

(ಗೊಂದಲ)

ಅಧ್ಯಕ್ಷರು: ನಾನು ಮಾನ್ಯ ರೇವಣ್ಣರವರಲ್ಲಿ ವಿನಂತಿಸುತ್ತೇನೆ, ನೀವು ಇನ್ನು ಹತ್ತು ನಿಮಿಷದಲ್ಲಿ ಮುಗಿಸಬೇಕು. No, ಇಲ್ಲ ನಿಮಗೆ ಹೆಚ್ಚು ಅವಕಾಶ ಕೊಡುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ನಮ್ಮಲ್ಲಿ ಬೇರೆಯವರಿಗ್ಯಾರಿಗೂ ಅವಕಾಶ ಕೊಡಬೇಡಿ, ನಾನೊಬ್ಬನೇ ಮಾತನಾಡುತ್ತೇನೆ. ಈಗ ಒಂದು ಕೆಲಸ ಮಾಡಿ, ಇದರ ಬಗ್ಗೆ ಬೆಳಕು ಚೆಲ್ಲುವುದು ಬೇಡ, ಒಂದು ನಿಮಿಷ ಕೇಳಿ.

ಅಧ್ಯಕ್ಷರು: ನೀವು ಹತ್ತು ನಿಮಿಷದಲ್ಲಿ ಮುಗಿಸಿ, ಬೆಳಕು ಚೆಲ್ಲುವುದು, ಬಿಡುವುದು ನಿಮಗೆ ಬಿಟ್ಟಿದ್ದು, ಬೇಗ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ: ಸ್ವಾಮಿ, ನನಗೆ half an hour ಕೊಟ್ಟರೆ ನಾನು ಮಾತನಾಡುತ್ತೇನೆ. ಏಕೆಂದರೆ ಇದರ ಮೇಲೆ ನಾನು ಬೆಳಕು

ಚೆಲ್ಲಬೇಕಾಗುತ್ತದೆ. ಇಲ್ಲದಿದ್ದರೆ ನಾನು ಸುಮ್ಮನಿರುತ್ತೇನೆ. ಮಾನ್ಯ ಅಧ್ಯಕ್ಷರೇ ನಾನು ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೂ ಈ ವಿಷಯವನ್ನು ತರಬೇಕಾಗಿದೆ.

ಅಧ್ಯಕ್ಷರು: ನೀವು ಆ ವಿಚಾರ ಬಿಟ್ಟು ಇದರ ಬಗ್ಗೆ ಚರ್ಚೆ ಮಾಡಿ, ನೀವ್ಯಾಕೆ ಉತ್ತರ ಕೊಡಲಿಕ್ಕೆ ಹೋಗುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ: ಈಗ ಅಧ್ಯಕ್ಷರೇ, ನಾನು ಹಿಂದಿನ ಸದನದಲ್ಲಿ ಕಲ್ಲಿದ್ದಲು ಬಗ್ಗೆ ರೂಲ್ 60ರಲ್ಲಿ ನಿಲುವಳಿ ಸೂಚನೆ ಕೊಟ್ಟಿದ್ದೇನೆ. ಆ ಸಂದರ್ಭದಲ್ಲಿ.. ವಿಷಯ ಹೇಳಬೇಕಲ್ಲವೇ? ಅವರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿರಿ, ನಾನು ಮಾತನಾಡಲಿಕ್ಕೆ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು: ನಾನು ಒಂದು ಸಾರಿ ರೂಲಿಂಗ್ ಕೊಟ್ಟ ಮೇಲೆ ಮತ್ತ್ಯಾಕೆ ನೀವು ಆ ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ: ನಿಲುವಳಿ ಸೂಚನೆ ಬಗ್ಗೆ ಚರ್ಚೆಯೇ ಆಗಿಲ್ಲ. enquiry ಮಾಡಲಿಕ್ಕೆ ಹೇಳಿದ್ದೀರಲ್ಲಾ. ಈ enquiry ಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಸೇರಿಸಿರುವಿರಾ ?

ಅಧ್ಯಕ್ಷರು: ನೀವು ಈ ರೀತಿ ಮಾತನಾಡಿದರೆ ಸದನವನ್ನು ನಡೆಸುವುದು ಕಷ್ಟವಾಗುತ್ತದೆ .

ಶ್ರೀ ಹೆಚ್.ಡಿ. ರೇವಣ್ಣ: Enquiry ಮಾಡಲಿಕ್ಕೆ ಇದರಲ್ಲಿ ಕೋಟ್ಯಾಂತರ ಹಣ ಲೂಟಿಯಾಗಿದೆ. ಯಾರನ್ನು ಸೇರಿಸಿದ್ದೀರಿ? Enquiry ಯಲ್ಲಿ ಮುಖ್ಯಮಂತ್ರಿಗಳನ್ನು ಸೇರಿಸಿದರೆ ನಿಷ್ಪಕ್ಷಪಾತವಾಗಿ ಮುಖ್ಯಮಂತ್ರಿಯವರು ರಾಜೀನಾಮೆಯನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು: ಅದನ್ನು ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಈಗ ನಾನು ಯಾರ ಮೇಲೂ ವೈಯಕ್ತಿಕವಾಗಿ ಮಾತನಾಡುತ್ತಿದ್ದೇನೆಂಬ ತಪ್ಪು ಭಾವನೆ ಬರಬಾರದು. ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿರುವ ಕಾಗದವನ್ನು ಓದುತ್ತಿದ್ದೇನೆ. 5ಲಕ್ಷ 10 ಸಾವಿರ ಟನ್ ಕಲ್ಲಿದ್ದಲು ಖರೀದಿ ಮಾಡಲಿಕ್ಕೆ ಅವಕಾಶ ಇದೆ. ಜಾಸ್ತಿ ಕೊಟ್ಟರೆ ಕೆ.ಪಿ.ಸಿ.ಎಲ್. ಸಂಸ್ಥೆಗೆ ನಷ್ಟವಾಗುತ್ತದೆಂದು

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಟಿಪ್ಪಣಿಯನ್ನು ಕೊಟ್ಟಿದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಡೈರೆಕ್ಷನ್ಸ್ ಕೊಡುತ್ತಾರೆ. ಇದರಿಂದ ಭಾಟಿಯಾ ಕಂಪೆನಿಗೆ ಮುಖ್ಯಮಂತ್ರಿಗಳಿಗೂ ಏನಿದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. 5 ಲಕ್ಷ 10 ಸಾವಿರ ಟನ್ ಇದ್ದುದನ್ನು ಆರು ಲಕ್ಷ ಟನ್‌ಗೆ ತೆಗೆದುಕೊಂಡು ಹೋಗಬೇಕಾದರೆ ಕಾರಣವೇನು? ಮುಖ್ಯಮಂತ್ರಿಗಳ ಮನೆಯಿಂದ ಬೆಳಿಗ್ಗೆ 8.11 ನಿಮಿಷಕ್ಕೆ ಫ್ಯಾಕ್ಸ್ ಹೋಗುತ್ತದೆ ಇದಕ್ಕೆ ಕಾರಣವೇನು? ಅದನ್ನು ನಾನು ಇಲ್ಲಿ ಕೇಳುತ್ತಿದ್ದೇನೆ. ಇದರ ಬಗ್ಗೆ ಕಾನೂನು ಸಚಿವರು ಹೇಳಲಿ. ಇದನ್ನು ತನಿಖೆಗೆ ಒಳಪಡಿಸುತ್ತಾರೆಯೇ? 90.00 ಸಾವಿರ ಟನ್ ಅನ್ನು 7,800 ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ, ಮಾರ್ಕೆಟ್ ರೇಟ್ 3,800 ರೂಪಾಯಿ ಇದೆ. ಇದರಿಂದ ಸಂಸ್ಥೆಗೆ ನಷ್ಟವಾಗುತ್ತದೆ. 7,800 ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ, ಇದರಿಂದ ಸಂಸ್ಥೆಗೆ ನಷ್ಟವಾಗುತ್ತದೆ ಎಂದು ಕೆ.ಪಿ.ಟಿ.ಸಿ.ಎಲ್‌ನ ನಿರ್ದೇಶಕರು ಸ್ಪಷ್ಟವಾಗಿ ಟಿಪ್ಪಣಿಯನ್ನು ಕೊಟ್ಟಿದ್ದನ್ನು ನೀವು ಧಿಕ್ಕರಿಸುತ್ತೀರಲ್ಲಾ ಅದರ ಮೇಲೆ enquiry ನಡೆಸಲಿಕ್ಕೆ ಈ ಸರ್ಕಾರಕ್ಕೆ ನೈತಿಕತೆ ಇದೆಯೇ? ಇಲ್ಲದಿದ್ದರೆ ಇದನ್ನು ಲೂಟಿ ಮಾಡುವ ಸರ್ಕಾರವೆಂದು ಕರೆಯ ಬೇಕಾಗುತ್ತದೆ ಈ ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ. ಇದರಲ್ಲಿ ಕದ್ದು ಮುಚ್ಚಿ ಮಾತನಾಡುವುದು ಏನಿಲ್ಲ. ಇದನ್ನು ಸಿ.ಬಿ.ಐ.ಗೆ ಕೊಡಿ, ಇಲ್ಲವೇ ಲೋಕಾಯುಕ್ತಕ್ಕೆ ಕೊಡಿ. ಯಾರು ನಿಮ್ಮ ಜಡ್ಜ್ ?ಯಾರಾದರೂ ನಿವೃತ್ತ ಜಡ್ಜ್ ಇದ್ದರೆ ಬೇಕಾದರೆ ಅವರಿಗೆ ಕೊಡಿ. ಇನ್ನೊಂದು ಕಥೆ ಹೇಳುತ್ತೇನೆ, ಭಾಟಿಯಾ ಕಂಪೆನಿಗೆ ಕೊಡಬೇಡಿ, 5.00 ಲಕ್ಷಕ್ಕೆ ಲಿಮಿಟ್ ಮಾಡಿ ಎಂದು ಮುಖ್ಯಮಂತ್ರಿಗಳಿಗೆ ಕೆ.ಪಿ.ಸಿ.ಎಲ್.ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಂದ ಬರೆದ ಪತ್ರ ಇದೆ, ಅವರು ಪ್ರಾಮಾಣಿಕವಾದಂತಹ ಅಧಿಕಾರಿ ಆದುದರಿಂದ ಈ ರೀತಿ ಹೇಳಿದ್ದಾರೆ. ಇಲ್ಲದಿದ್ದರೆ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ಸಹಿ ಮಾಡಿ ಕೊಡುತ್ತಿದ್ದರು. ಒಬ್ಬ ಅಧಿಕಾರಿ ಕೊಟ್ಟಂತಹ ಕಾಗದವನ್ನು ನೀವು ತಿರಸ್ಕಾರ ಮಾಡುತ್ತೀರಿ, ಇದು ನ್ಯಾಯವೇ ಸ್ವಾಮಿ? ಮುಖ್ಯಮಂತ್ರಿಗಳು ಸೂಚನೆ ಕೊಡುತ್ತೀರಿ, ಬೆಳಿಗ್ಗೆ 8.11 ನಿಮಿಷಕ್ಕೆ ಮನೆಯಿಂದ ಫ್ಯಾಕ್ಸ್ ಕಳುಹಿಸುತ್ತೀರಲ್ಲಾ ಅಂಥ ಉದ್ದೇಶ ಏನಿದೆ?

ಏನು ನೀವು ಇದನ್ನು ಖರೀದಿ ಮಾಡಲೇ ಬೇಕು 6.00 ಲಕ್ಷ ಟನ್ ಮಾಡಲೇಬೇಕು. 7,800 ರೂಪಾಯಿಗಳು ಈ ರಾಜ್ಯದ ಜನತೆಗೆ ನಷ್ಟವಾದರೂ ಪರವಾಗಿಲ್ಲ. ನೀವು ಖರೀದಿ ಮಾಡಿ ಎಂದು ರೈಟಿಂಗ್‌ನಲ್ಲಿ ಮುಖ್ಯಮಂತ್ರಿಗಳು ಬರೆಯುತ್ತಾರಲ್ಲಾ ಇದು ಒಳ್ಳೆಯದೆ? 2500 ಕೋಟಿ ರೂಪಾಯಿಗಳು ಒಂದು ಕಡೆ, 597 ಕೋಟಿ High cost current ಖರೀದಿ, ಇನ್ನೊಂದು ಕಡೆ ಕಲ್ಲಿದ್ದಲು, 90,000 ಟನ್ ಕಲ್ಲಿದ್ದಲ್ಲನ್ನು 3,800 ರೂ.ಗಳಿಗಿರುವುದನ್ನು 7,800 ರೂ.ಗಳಿಗೆ, 6.00 ಲಕ್ಷ ಟನ್ ಖರೀದಿ ಮಾಡುವಂಥದ್ದು necessity ಇದೆಯೇ? ಒಂದು ತಿಂಗಳಿಗೆ ಎಷ್ಟು ಬೇಕಾಗುತ್ತದೆ? ಯಾವ್ಯಾವ ಮೂಲದಿಂದ ಕಲ್ಲಿದ್ದಲು ತರಿಸುತ್ತೀರಿ, ನಿಮ್ಮ ರಾಯಚೂರು ಪ್ಲಾಂಟ್‌ನಿಂದ ಎಲ್ಲಾ ಪ್ಲಾಂಟ್‌ನಿಂದ ಎಷ್ಟು ಕಲ್ಲಿದ್ದಲು ಬೇಕಾಗುತ್ತದೆ. ಏಕೆ ತರಿಸುತ್ತಿದ್ದೀರಿ? ಇದಲ್ಲದೆ ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬಯಸುತ್ತೇನೆ ಮಾನ್ಯ ಅಧ್ಯಕ್ಷರೇ, ಏಕೆಂದರೆ ಒಂದು ಭಾಟಿಯಾ ಸಂಸ್ಥೆಯ ಕಡತ, ಇನ್ನೊಂದು M.M.T.C. ಇದರಲ್ಲಿ 6.00 ಲಕ್ಷ ಟನ್ import ದು ಖರೀದಿ ಮಾಡುತ್ತಾರೆ. ಕಾನೂನು ಸಚಿವರು ದಯಮಾಡಿ ಈ ರೀತಿ ದುಡ್ಡು ಪಡೆದಿರುವುದನ್ನು ಮುಚ್ಚಿಕೊಳ್ಳುವುದಕ್ಕೆ ಏಕೆ ಹೋಗುತ್ತೀರಿ?

ಶ್ರೀ ಸುರೇಶ್‌ಕುಮಾರ್ (ಕಾನೂನು ಸಚಿವರು): ಈ ವಿಷಯವನ್ನು ಬೇರೆ form ನಲ್ಲಿ ತೆಗೆದುಕೊಂಡು ಬನ್ನಿ, ಈಗ ಬರುತ್ತಿರುವುದು, ವಿದ್ಯುತ್ ಕೊರತೆ, ಇಡೀ ರಾಜ್ಯದಲ್ಲಿ ವಿದ್ಯುತ್ ಇಲ್ಲ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಇದನ್ನು ಬೇರೆ ಫಾರಂನಲ್ಲಿ ತೆಗೆದುಕೊಂಡು ಬರಲಿ. What is this? ಸಭಾಧ್ಯಕ್ಷರೇ ದಯವಿಟ್ಟು ತಾವು ಅವರಿಗೆ ಹೇಳಿ. ಒಂದು time frame fix ಮಾಡಿ. ಇದು ಅವ್ಯವಹಾರದ್ದಲ್ಲ.

ಅಧ್ಯಕ್ಷರು: ಈಗ ವಿಷಯಾಂತರ ಆಗುವುದು ಬೇಡ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಇಷ್ಟು ಅವ್ಯವಹಾರ ಮಾಡಿ ಕಲ್ಲಿದ್ದಲು ಖರೀದಿ ಮಾಡಿರುವುದು ಅವ್ಯವಹಾರ ಅಲ್ಲವೇ?

(ಗೊಂದಲ)

ಶ್ರೀ ಸುರೇಶ್‌ಕುಮಾರ್: ನಿಯಮ 69 ನಿಮಗೆ ಬೇಕಾದ ಹಾಗೆ ಮಾತನಾಡುವುದಕ್ಕೆ ಇರುವ ನಿಯಮವಲ್ಲ. ಈ ನಿಯಮದ ವ್ಯಾಪ್ತಿ ದೊಡ್ಡದಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಾವು ವಿದ್ಯುತ್‌ಗೆ ಸಂಬಂಧಪಟ್ಟಂತೆ ಮಾತನಾಡುತ್ತಿರುವುದು. ಇಷ್ಟೊಂದು ದುಡ್ಡು ಕೊಟ್ಟು ಖರೀದಿ ಮಾಡಿದ್ದರೂ High cost current ಖರೀದಿ ಮಾಡಿದ್ದಾರೆ ಆದರೂ ನಿಮಗೆ ವಿದ್ಯುತ್ ಅಭಾವ ನೀಗಿಸಲಿಕ್ಕೆ ಆಗಿಲ್ಲ. ಅದರ ಬಗ್ಗೆ ಚರ್ಚೆ ನಡೆಯುತ್ತಿರುವುದು.

ಅಧ್ಯಕ್ಷರು: ಈಗ ನಿಯಮ 69ರಲ್ಲಿ ವಿದ್ಯುತ್ ಅಭಾವ ಏಕೆ ಆಗುತ್ತಿದೆ ಅಷ್ಟಕ್ಕೆ ಸೀಮಿತವಾಗಿ ಮಾತನಾಡಬೇಕೇ ಹೊರತು ವಿಷಯಾಂತರ ಮಾಡಿ ಚರ್ಚೆ ಮಾಡಿದರೆ ಅದಕ್ಕೆ ಅವಕಾಶ ಕೊಡಲಿಕ್ಕಾಗುವುದಿಲ್ಲ. ಆ ಇತಿಮಿತಿಯೊಳಗೆ ತಾವು ಮಾತನಾಡಬೇಕು. ಪ್ಲೀಸ್, ಅವರು ಮಾತನಾಡಲಿ, ಇಲ್ಲ. ನೋಡಿ, ಅದನ್ನು ಬೇರೆ ಫಾರಂನಲ್ಲಿ ತನ್ನಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ವಿದ್ಯುತ್ ಅಭಾವದ ಬಗ್ಗೆ ಚರ್ಚೆಯಾಗುತ್ತಿರುವುದು ಇಲ್ಲಿ. ಅದರ ಬಗ್ಗೆಯೇ ಅವರು ಮಾತನಾಡುತ್ತಿರುವುದು.

ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) : ಅವರಿಗೆ ರಾಜ್ಯದ ವಿದ್ಯುತ್ ಅಭಾವದ ಬಗ್ಗೆ ಮಾತನಾಡುವುದು ಬೇಕಾಗಿಲ್ಲ. ಇವೆಲ್ಲಾ ಮೊಸಳೆ ಕಣ್ಣೀರಿನ ಕಥೆ. ಅವರಿಗೆ ಬೇಕಾಗಿರುವುದು ತನಿಖೆ , ಅವ್ಯಹಾರ ಇಷ್ಟೇ.

(ಗೊಂದಲ)

ಅಧ್ಯಕ್ಷರು: ಬೆಳಿಗ್ಗೆ 11.45 ಗಂಟೆಗೆ ಪ್ರಾರಂಭಿಸಿದ್ದೀರಿ, ನೀವು ಬೇಗ ಮುಗಿಸಿ.

ಡಾ: ಹೆಚ್.ಸಿ.ಮಹದೇವಪ್ಪ: ರಾಜ್ಯದಲ್ಲಿ ಉಂಟಾಗಿರುವ ವಿದ್ಯುತ್ ಅಭಾವಕ್ಕೆ ಸರ್ಕಾರ ಕೈಗೊಂಡಿರುವ ಕ್ರಮ, ಕೈಗೊಳ್ಳಬೇಕಾಗಿರುವಂಥ ಕ್ರಮಗಳು, ಏನೇನು ನ್ಯೂನತೆಗಳಾಯಿತು ಅವೆಲ್ಲವನ್ನು ಅವರು ಅಂಕಿ ಅಂಶ ಸಮೇತವಾಗಿ ಹೇಳುತ್ತಿದ್ದಾರೆ. ಆ ರೀತಿ ಹೇಳುವಾಗ ಅನೇಕ ತಪ್ಪುಗಳನ್ನು

ಅವರು ಗುರುತಿಸಿದ್ದಾರೆ. ಅವರು ಗುರುತಿಸಿರುವ ತಪ್ಪುಗಳನ್ನು ಸರ್ಕಾರ ಗಮನಿಸಿ ರಾಜ್ಯವನ್ನು ಕತ್ತಲಿನಲ್ಲಿಡುವುದರ ಜೊತೆಗೆ ರಾಜ್ಯದ ಬೊಕ್ಕಸವೂ ಹಾಳಾದಾಗ ಸುಮ್ಮನೆ ಕುಳಿತುಕೊಂಡು ಕೇಳುವುದು ಸರಿಯಲ್ಲ. ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಅದಕ್ಕೆ ನೀತಿ ನಿಯಮ ಎನ್ನುವುದು ಇದೆಯಲ್ಲ, No, no, I don`t take on with you. No, no, ನೀವು ಯಾವುದೇ allegation ಮಾಡಬೇಕಿದ್ದರೂ You must give notice to the concerned. ಇಲ್ಲಿ ವಿದ್ಯುತ್ ಅಭಾವದ ಬಗ್ಗೆ ಚರ್ಚೆ ಮಾಡಬೇಕು. There are so many allegations you are making. How can it be allowed? ಎಲ್ಲಿದೆ ನಿಯಮ? ನಿಯಮ ಬಿಟ್ಟು ಮಾತನಾಡುವುದಾದರೆ ನಿಯಮ ಏಕಿರುವುದು?

ಶ್ರೀ ಆರ್. ಅಶೋಕ್: ಅವ್ಯವಹಾರ ಆಗಿದೆ ಎನ್ನುವ ನಿಲುವಳಿಯನ್ನು ಅವರು ತರಲಿಲ್ಲ. ರಾಜ್ಯದಲ್ಲಿ ಆಗಿರುವಂಥ ವಿದ್ಯುತ್ ಅಭಾವದ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು: ಆ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಮಾತನಾಡಿದರೆ ಹೇಗೆ?

ಶ್ರೀ ಆರ್.ಅಶೋಕ್: ರೇವಣ್ಣನವರು ಹಿರಿಯ ಸದಸ್ಯರಿದ್ದಾರೆ, ಯಾವುದನ್ನು ಈ ಸದನದಲ್ಲಿ ಹೇಳಬೇಕು, ಯಾವುದನ್ನು ಹೇಳಬಾರದು ಎಂದು ಅವರು ತಿಳಿದುಕೊಳ್ಳಬೇಕು. ಸುಮ್ಮನೆ Hit and run case ಮಾಡುವುದು. ಸದನ ಸರಿಯಾಗಿ ನಡೆಯದ ರೀತಿ ಮಾಡುವಂಥದ್ದು ಸರಿಯಲ್ಲ. ಒಂದು ರೀತಿ ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂಬ ಭಾವನೆಯೇ ಅವರ ಮನಸ್ಸಿನಲ್ಲಿ ಇಲ್ಲ. ಅವರ ಮನಸ್ಸಿನಲ್ಲಿರುವುದು ಈ ಸರ್ಕಾರದ ಮೇಲೆ ಆಪಾದನೆ ಮಾಡಬೇಕೆನ್ನುವುದು. ಗೂಬೆ ಕೂರಿಸಬೇಕೆನ್ನುವುದು ಒಂದು ಬಿಟ್ಟರೆ ಅವರ ಮನಸ್ಸಿನಲ್ಲಿ ಬೇರೆ ಏನೂ ಇಲ್ಲ. ಅವರು ಏನು ಹೇಳಲಿಕ್ಕೆ ಹೊರಟಿದ್ದಾರೆಂದರೆ ನಾನು ಇಂಧನ ಖಾತೆ ಸಚಿವನಾಗಿದ್ದೆ, ಅವರ ಅನುಭವಗಳನ್ನು ಧಾರೆ ಎರೆಯಲಿಕ್ಕೆ ಹೋಗಿದ್ದಾರೆ.

ನಾನು ಏನೇನು ಮಾಡಿದ್ದೆ? ಹೇಗೆ ಮಾಡಿದ್ದೆ ಎಂದು ಹೇಳುತ್ತಿದ್ದಾರೆ, ಅದನ್ನು ಬಿಟ್ಟರೆ ಈಗ ಈ ಅಭಾವದ ಬಗ್ಗೆ ಏನು ಮಾಡಬೇಕು ಎಂಬ ಪ್ರಶ್ನೆ ಅವರಲ್ಲಿಲ್ಲ. ಆದ್ದರಿಂದ ಅಧ್ಯಕ್ಷರೇ ತಾವು ಈ ಸದನವನ್ನು ನಡೆಸುವವರು , ಅವರು ತಂದಿರುವ ವಿಷಯದ ಬಗ್ಗೆ ಚರ್ಚೆ ಆಗಬೇಕೆಂದು ತಾವು ಅವರಿಗೆ ಮನವರಿಕೆ ಮಾಡಿಕೊಡಬೇಕು. ಸರ್ಕಾರ ಮುಕ್ತವಾಗಿದೆ, ನಾವು ಅದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು: ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಮೇಲೆ ತಾವು ಅದಕ್ಕೆ ಅಂತಿಮವಾಗಿ ಏನು ತೀರ್ಪು ಕೊಡುತ್ತೀರೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಹಿಂದೆ ನಿಲುವಳಿ ಸೂಚನೆಯನ್ನು ರೂಲ್ 60 ರಲ್ಲಿಯೂ ಕೊಟ್ಟಿದ್ದೇನೆ. ಎರಡು ನಿಮಿಷ, ಅಶೋಕ್‌ರವರು ಅವರು ನಿನ್ನೆ ಏನು ಕೊಟ್ಟಿದ್ದಾರೆ ಅದರಂತೆ ಮಾತನಾಡಲಿ ಎಂದು ಹೇಳಿದ್ದಾರೆ. ನಾನು ಅದನ್ನು ಮೀರಿ ಹೇಳಿಲ್ಲ. ದಯಮಾಡಿ ನಿನ್ನೆ ನಿಯಮ 60 ರಲ್ಲಿ ನಾನು ಕೊಟ್ಟಿರುವ ನೋಟಿಸ್‌ನ ಪ್ರಕಾರ ನಾನು ಮಾತನಾಡುತ್ತಿದ್ದೇನೆ ಅದಕ್ಕೆ ಒಂದು ಸ್ವಲ್ಪವೂ ನಾನು ಬೇರೆ ರೀತಿ deviate ಆಗುವುದಿಲ್ಲ. ಅದನ್ನು ಈಗ ಓದುತ್ತೇನೆ. ನನ್ನ ನಿಯಮ 60ರ ನಿಲುವಳಿ ಸೂಚನೆಯನ್ನು ತಾವು ನಿಯಮ 69ಕ್ಕೆ convert ಮಾಡಿದ್ದೀನಿ ಎಂದಿರಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಪ್ರತಿಪಕ್ಷದ ನಾಯಕರು ಇದ್ದಾರೆ,

ಶ್ರೀ ಹೆಚ್.ಡಿ. ರೇವಣ್ಣ : ಅವೆಲ್ಲಾ ಬೇಡ ಮಾನ್ಯ ಅಧ್ಯಕ್ಷರೆ, ನೀವು ದುಡ್ಡು, ...

ಅಧ್ಯಕ್ಷರು : ಈಗ ನಿಮ್ಮ ನಿಯಮ 60ರ ಅಡಿಯಲ್ಲಿ ತಂದ ಪ್ರಸ್ತಾಪ ತಿರಸ್ಕಾರ ಆಗಿದೆ. ತಿರಸ್ಕಾರ ಆಗಿರುವುದನ್ನು ಮತ್ತೆ ಮತ್ತೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಿಲ್ಲ. ನಿಯಮ 328, ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಯಾರ ಮೇಲೂ ವೈಯಕ್ತಿಕ ಆಪಾದನೆ ಮಾಡುತ್ತಿಲ್ಲ ಸ್ವಾಮಿ, ನಾನು ಸರ್ಕಾರದ ಮುಖ್ಯಸ್ಥರು ಬರೆದ letter ಅನ್ನು ಓದುತ್ತಿದ್ದೇನೆ.

ಅಧ್ಯಕ್ಷರು : ನಾನು ಓದುವುದನ್ನು ಕೇಳಿ, "ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು". ಎಂದು ಸ್ಪಷ್ಟವಾಗಿ ರೂಲ್ ಇದೆ. ನೀವು ಆಪಾದನೆ ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ. ವಿದ್ಯುತ್ ಅಭಾವದ ಬಗ್ಗೆ ನಿಯಮ 69 ರಡಿಯಲ್ಲಿ ಏನು ಚರ್ಚೆಯಾಗಬೇಕಾಗಿದೆ ಅದರ ಬಗ್ಗೆ ಐದು ನಿಮಿಷ ಮಾತನಾಡುವುದಾದರೆ ಮಾತನಾಡಿ, otherwise I will close it.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ರೇವಣ್ಣನವರು ಎಲ್ಲವೂ ಗೊತ್ತಿದ್ದೆ ಮಾತನಾಡುವುದು, ಗೊತ್ತಿಲ್ಲದೇ ಮಾತನಾಡುವುದಕ್ಕೆ ಅವರಿಗೆ ಬರುವುದಿಲ್ಲ. ಎಲ್ಲಾ ಗೊತ್ತಿದೆ. ಸಾರ್ ನಿಮ್ಮ ಅನುಭವ ಹೇಳಿ.

ಶ್ರೀ ಜಿ. ಶಿವಣ್ಣ : ತಾವು ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರ ಹತ್ತಿರ ಮಾತನಾಡುವುದನ್ನು ಕಲಿತುಕೊಳ್ಳಿ, ಕಲಿತುಕೊಂಡ ಮೇಲೆ ಹೇಳಿ.

ಅಧ್ಯಕ್ಷರು : ಮಾನ್ಯ ಶಿವಣ್ಣನವರೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಶಿವಣ್ಣನವರೆ, ನಾನು ಮಾತನಾಡುವುದನ್ನು ನಿಮ್ಮಿಂದ ಕಲಿತುಕೊಳ್ಳಬೇಕಾಗಿಲ್ಲ. ನಾನು ಮೂರು ಬಾರಿ ಶಾಸಕನಾಗಿ ಬಂದಿದ್ದೇನೆ.

ಅಧ್ಯಕ್ಷರು : ಆಯಿತು,

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು...

ಅಧ್ಯಕ್ಷರು : ನೀವು ವಿದ್ಯುತ್ ಅಭಾವ, ಅದರ ಬಗ್ಗೆ ಮಾತನಾಡುವುದು ಬಿಟ್ಟು,

ಶ್ರೀ ಹೆಚ್.ಡಿ. ರೇವಣ್ಣ : ಅಭಾವ ಎಂದರೆ, ಲೂಟಿ ಮಾಡುವುದೇ ಇವತ್ತು ಅಭಾವವಾಗಿರುವುದು.

ಅಧ್ಯಕ್ಷರು : ನೀವು ಬೇರೆ ವಿಚಾರ ಮಾತನಾಡಿದರೆ, ಅದು ದಾಖಲೆಗೆ ಹೋಗಬಾರದು ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಹತ್ತಿರ ದಾಖಲೆ ಇದ್ದರೆ ಹೇಳಿ ಎಂದು ಹೇಳಿದ್ದರಲ್ಲಾ ಅದಕ್ಕೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಅದನ್ನು ಬೇರೆ ರೂಪದಲ್ಲಿ ತನ್ನಿ.

ಒಬ್ಬ ಮಾನ್ಯ ಸದಸ್ಯರು : ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ.

ಶ್ರೀ ಹೆಚ್.ಡಿ. ರೇವಣ್ಣ : ತಪ್ಪು ದಾರಿಗೆ ಏಕೆ ಎಳೆಯುವುದಕ್ಕೆ ಹೋಗೋಣ ಸಾರ್. ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ರೂಲ್ 60 ಅಡಿಯಲ್ಲಿ ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು : ಮತ್ತೆ ತಾವು ಅದಕ್ಕೇ ಹೋದರೆ ಇದು ದಾಖಲೆಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ನಾನು ಇನ್ನೊಂದು point ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಆಗಬೇಕಾದರೆ, ಮುಖ್ಯಮಂತ್ರಿಗಳಾಗಲಿ, ಅಥವಾ ಇಲಾಖಾಧಿಕಾರಿಗಳಾಗಲಿ, ಇಂಧನ ಇಲಾಖೆಯ ಯಾರೇ ಅಗಲಿ ಆವರು ಸಪಪ್ಪಿಸಿರುವಂಥ ಕೆಲವು ದಾರಿಗಳಿಂದ ಇವತ್ತು, ನೀವು ಮಾತನಾಡುವುದು ಬೇಡವೆಂದರೆ ಎಂಟೇ ದಿನ

ಇದೆ, ಬಾಟಿಯಾ ಕಂಪನಿ ಇರಬಹುದು, MMTC ದು ಇರಬಹುದು, ಎಲ್ಲಾ ಸೇರಿ ಲೋಕಾಯುಕ್ತಾ ತನಿಖೆ, ಸಿ.ಬಿ.ಐ. ತನಿಖೆ ಮಾಡಲಿಕ್ಕೆ ರೆಡಿ ಮಾಡಿದ್ದೇನೆ. ಇದರಲ್ಲಿ ಸಾವಿರಾರು ಕೋಟಿ ರೂ.ಗಳು...

ಅಧ್ಯಕ್ಷರು : ಒಂದು ಸಲ ರೂಲಿಂಗ್ ಕೊಟ್ಟ ಮೇಲೆ ಮತ್ತೆ ಪುನಃ ಅದನ್ನೇ ಎತ್ತಿದರೆ, very sorry.

ಶ್ರೀ ಹೆಚ್.ಡಿ. ರೇವಣ್ಣ : ನಾನು ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ. ನಾನು ಹೇಳುತ್ತಿರುವುದು ಮುಖ್ಯಮಂತ್ರಿಯವರ letter ಆಧಾರದ ಮೇಲೆ ಒಬ್ಬ ಅಧಿಕಾರಿ ಬರೆದಿರುವ letter ಅನ್ನು ಓದುತ್ತಿದ್ದೇನೆ. ಈ ತರಹ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ನಷ್ಟ ಆಗಿರುವ ಬಗ್ಗೆ ಹೇಳುತ್ತಿದ್ದೇನೆ. ಅದನ್ನೂ ತರಬೇಡಿ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ ಹೊಡೆಯುವುದಕ್ಕೆ ಬಿಟ್ಟುಬಿಡಿ ಎಂದು ಹೇಳಿದರೆ ನಾನು ಸುಮ್ಮನೆ ಕುಳಿತುಕೊಂಡುಬಿಡುತ್ತೇನೆ. ಇವತ್ತು ಮಂತ್ರಿಗಳಿಗೆ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು : ಒಂದು ಸಲ ರೂಲಿಂಗ್ ಕೊಟ್ಟರೆ ಮತ್ತೆ ಮತ್ತೆ ಅದೇ ವಿಚಾರವನ್ನು ಎತ್ತುವುದಾದರೆ

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೆ, ನಿಯಮ 69 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ತಾವು ಸಮಯ ನಿಗದಿ ಮಾಡಬೇಕಾಗಿತ್ತು. ಅರ್ಧ ಗಂಟೆಗಿಂತ ಮುಂಚೆ ಈಗಾಗಲೇ ಅವರು ಎರಡು ಗಂಟೆಯಷ್ಟು ಮಾತನಾಡಿದ್ದಾರೆ. ನಿಯಮ 69ರಲ್ಲಿ ಎಷ್ಟಿದೆ? ಅಲ್ಪಾವಧಿ ಚರ್ಚೆ ಎಂದು ಇದೆ. ಎಷ್ಟೊತ್ತು ಮಾತನಾಡುವುದು? ಎರಡು ಗಂಟೆ ಮಾತನಾಡುತ್ತಾರೆ. ಅದು ಕೂಡ ಅವರ ವಿದ್ಯುತ್ ಅಭಾವದ ಬಗ್ಗೆ ಮಾತನಾಡಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ಚರ್ಚೆ ಮಾಡುವುದಕ್ಕೆ ಅದರಲ್ಲಿ ಅವಕಾಶವಿಲ್ಲ. ನಿಯಮ 69ರಲ್ಲಿ ಅವರು ಚರ್ಚೆ ಮಾಡಲಿ. ಅದನ್ನು ಬಿಟ್ಟು ಯಾವ್ಯಾವುದೋ ಚರ್ಚೆಗೆ ಹೋದರೆ ಅದರಲ್ಲಿ ಅರ್ಥವಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನಕ್ಕೆ ತರುವುದು ಇಷ್ಟೆ, 2007–08ರಲ್ಲಿ 40 ಲಕ್ಷದ 195 ಮಿಲಿಯನ್ ಯೂನಿಟ್ ಕರೆಂಟ್ ಆಗಿದ್ದರೆ, ಇದೇ 2008–09ರಲ್ಲಿ 40 ಲಕ್ಷದ 129 ದಶ ಲಕ್ಷ ಯೂನಿಟ್, 2008–09ಕ್ಕೆ ಹೋಲಿಸಿದರೆ ಏನಾದರೂ ಹೆಚ್ಚಿಗೆ ಕರೆಂಟ್ ಕೊಟ್ಟಿದ್ದಾರಾ? 2008–09ರಲ್ಲಿ 40 ಲಕ್ಷದ 129, 2007–08ರಲ್ಲಿ 40 ಲಕ್ಷದ 195 ದಶಲಕ್ಷ ಮಿಲಿಯನ್ ಯೂನಿಟ್ ಕರೆಂಟ್ ಕೊಟ್ಟಿದ್ದಾರೆ. 2597 ಕೋಟಿ high cost current ಖರೀದಿ ಮಾಡಿದ್ದಾರೆ. ಇದರಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಾನು ಮಾತನಾಡಬಾರದೇ ? ಈಗ ಕರೆಂಟ್ ಇಲ್ಲ ಎಂದು ಹೇಳುತ್ತಿದ್ದೀರಲ್ಲಾ, ನೀವು ಇವತ್ತು ದುಡ್ಡು ತೆಗೆದುಕೊಂಡು high cost current ಖರೀದಿ ಮಾಡಿ, ಇವತ್ತು ಕರೆಂಟ್ ಎಲ್ಲಿ ಹೋಗಿದೆ ?

ಶ್ರೀ ವೆಂಕಟರಮಣಪ್ಪ : ಮಾನ್ಯ ರೇವಣ್ಣನವರೆ,

ಶ್ರೀ ಹೆಚ್.ಡಿ. ರೇವಣ್ಣ : ನಿಮಗೆ ಇನ್ನೂ ಗೊತ್ತಿಲ್ಲ. ನೀವು ಅರ್ಧಂಬರ್ಧ ತಿಳಿದುಕೊಂಡಿದ್ದೀರಿ ಕುಳಿತುಕೊಳ್ಳಿ, ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ? ನೀವು ಮಂತ್ರಿ ಕೆಲಸ ಉಳಿಸಿಕೊಳ್ಳುವುದನ್ನು ಕಲಿತುಕೊಳ್ಳಿ. ಸುಮ್ಮನೆ ಏಕೆ ಇವೆಲ್ಲಾ ಮಾತನಾಡುವುದಕ್ಕೆ ಹೋಗುತ್ತೀರಿ ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. 18 ತಿಂಗಳ ಇವರ ಆಡಳಿತದಲ್ಲಿ ಇಂಧನ ಇಲಾಖೆಯದ್ದು, ನನ್ನದ್ದು ಎರಡೂ ಲೋಕಾಯುಕ್ತ ತನಿಖೆಗೆ ಹಾಕಲಿ.

ಅಧ್ಯಕ್ಷರು : ನೀವು ವಿಷಯಾಂತರ ಏಕೆ ಮಾಡುತ್ತೀರಿ ?

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

ಒಬ್ಬ ಮಾನ್ಯ ಸದಸ್ಯರು : ನಿಯಮ ಪಾಲಿಸಬೇಕೆಂದು ತಾವೇ ಹೇಳಿದಿರಿ.

ಶ್ರೀ ಹೆಚ್.ಡಿ. ರೇವಣ್ಣ : ನಿಯಮ ಪಾಲಿಸುವುದನ್ನು ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಈಗ ಉದಾಸಿಗೆ ಭಾಟಿಯಾದಲ್ಲಿ 6 ಲಕ್ಷ ಟನ್ .... ಆ ಕಡತ ಇದೆ. ಆ ಕಡತ ತಂದು ಕೊಡುತ್ತೇನೆ ಅದನ್ನು ಓದಿ.

(ಗೊಂದಲ)

ಅಧ್ಯಕ್ಷರು : ಮತ್ತೆ ಮತ್ತೆ ಅದೇ ವಿಷಯವನ್ನು ಪ್ರಸ್ತಾಪಿಸಿದರೆ ಅದು....

ಶ್ರೀ ಹೆಚ್.ಡಿ. ರೇವಣ್ಣ : ಮುಖ್ಯಮಂತ್ರಿಗಳ letter ಆಧಾರದ ಮೇಲೆ 6 ಲಕ್ಷ ಟನ್ ಖರೀದಿ ಮಾಡಿದ್ದೇವೆ ಎಂದು ನಾನು ಹೇಳುತ್ತಿಲ್ಲ. ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ಅಥವಾ retire judge ರವರಿಂದ ತನಿಖೆ ಮಾಡಲು ತಯಾರಿದ್ದಾರಾ ?

ಅಧ್ಯಕ್ಷರು : ಮತ್ತೆ ಮತ್ತೆ ಸ್ಪಷ್ಟೀಕರಣ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ನೀವು ಬೇರೆ ರೀತಿಯಲ್ಲಿ ತನ್ನಿ.

ಶ್ರೀ ಹೆಚ್.ಡಿ. ರೇವಣ್ಣ : ಯಾವ ರೀತಿಯಲ್ಲಿ ತರಬೇಕು ಎನ್ನುವುದು ಹೇಳಿ.

ಅಧ್ಯಕ್ಷರು : ಯಾವ ರೀತಿಯಲ್ಲಿ ತರಬೇಕೆನ್ನುವುದನ್ನು ನಿಯಮಾವಳಿಯಲ್ಲಿ ಓದಿ, ನಾನು ಏಕೆ ಹೇಳಬೇಕು ? It is your right. ನೀವು ಬೇರೆ ರೀತಿಯಲ್ಲಿ ತನ್ನಿ ನಾನು ಅವಕಾಶವನ್ನು ಕೊಡುತ್ತೇನೆ. ಅದನ್ನು ಬಿಟ್ಟು 69ರಲ್ಲಿ ಎಲ್ಲವನ್ನೂ ಹೇಳುತ್ತಾ ಹೋದರೆ ಅವಕಾಶ ಕೊಡುವುದಿಲ್ಲ. I will close, ನೀವು ಮುಗಿಸಿ. ನೀವು ಮುಗಿಸದೇ ಇದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದಿರಿ, ಇವತ್ತು ರಾಜ್ಯದಲ್ಲಿ..

ಅಧ್ಯಕ್ಷರು : ನೀವು ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ಆಯಿತು, ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ತಮ್ಮ ಗಮನಕ್ಕೆ ತರುವುದು ಈ ರಾಜ್ಯದಲ್ಲಿ ಏನು ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬರುವಂಥ ಸಂದರ್ಭದಲ್ಲಿ ರಾಜ್ಯದ ಜನತೆಗೆ ಒಂದು ಕಡೆ ಅಧಿಕಾರಕ್ಕೋಸ್ಕರ ಸುಳ್ಳು ಹೇಳಿ ನಾನು ರಾಜ್ಯದಲ್ಲಿ 18 ತಿಂಗಳು ಮಾಡಬಾರದನ್ನೆಲ್ಲಾ ಮಾಡಿದ್ದೇನೆ ಎಂದು ಅವರೇ ಹೇಳಿದ್ದಾರೆ. ಇನ್ನೊಂದು ಕಡೆ ಕರೆಂಟ್‌ನದ್ದು, ನಮ್ಮ ಜನಕ್ಕೆ ನೀವು IP set ಪುಕ್ಕಟ್ಟೆ ಕರೆಂಟ್ ಕೊಡುತ್ತೇವೆಂದು ಚುನಾವಣಾ ಸಂದರ್ಭದಲ್ಲಿ ಹೇಳಿದಿರಿ ಅದೂ ಇಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ ಕರೆಂಟ್ ಇಲ್ಲ. ಇಷ್ಟೆಲ್ಲಾ ಅನ್ಯಾಯ ನಡೆದಿದೆ. ಇವತ್ತು ಮುಖ್ಯಮಂತ್ರಿಗಳೇ ಇಂಧನ ಇಲಾಖೆಯನ್ನು ನೋಡುತ್ತಿದ್ದಾರೆ. ಪಾಪ ಅವರನ್ನು retire ಮಾಡಿ ಕಳುಹಿಸಿದ್ದಾರೆ. ಏಕೆಂದರೆ ಅವರು ಸರಿಯಾಗಿದ್ದರೆ ಕೆಲವು ಕಡತಗಳಿಗೆ sign ಹಾಕುವುದಿಲ್ಲವೆಂದು ಕಳುಹಿಸಿದ್ದಾರೆ. ಆದ್ದರಿಂದ ಇಂಧನ ಇಲಾಖೆಯದ್ದು 18 ತಿಂಗಳಿನದ್ದು ಸಮಗ್ರವಾಗಿ ಸಿ.ಬಿ.ಐ. ತನಿಖೆ ಮಾಡಬೇಕು. ಇವತ್ತು ಇಂಧನ ಇಲಾಖೆ ಒಂದರಲ್ಲೇ ಕೋಟ್ಯಾಂತರ ರೂಪಾಯಿ ಅಂದರೆ, ಸುಮಾರು 500–600 ಕೋಟಿ ರೂಪಾಯಿ ಲೂಟಿ ನಡೆದಿದೆ ಅದಕ್ಕೆ ಸಮಗ್ರವಾದ ತನಿಖೆ ನಡೆಸಿ, ಅದರಲ್ಲಿ ಮುಖ್ಯಮಂತ್ರಿಗಳೇ ನೇರವಾಗಿ ಭಾಗಿಯಾಗಿದ್ದಾರೆ. ಅವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಸಭಾಧ್ಯಕ್ಷರೆ, ರಾಜ್ಯದಲ್ಲಿ ತಲೆದೋರಿರತಕ್ಕಂಥ ವಿದ್ಯುಚ್ಛಕ್ತಿಯ ಕೊರತೆಯ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯನ್ನು ತಂದಂಥ ಸಂದರ್ಭದಲ್ಲಿ ಅದನ್ನು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಬಹುಶಃ ಈಗ ಮಾತನಾಡಿದಂಥ ಬಹಳಷ್ಟು ಜನ ಸದಸ್ಯರು ಅನೇಕ ರೀತಿಯಾದಂಥ ಟೀಕೆಗಳನ್ನು, ಸರ್ಕಾರವನ್ನು ಚುರುಕು ಮಾಡುವಂಥ ರೀತಿಯಲ್ಲಿ ಮಾತನಾಡಿದ್ದಾರೆ. ಬಹುಶಃ ಒಂದು ವಿಚಾರವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಗಳಾಗಿ ಸರ್ಕಾರವನ್ನು ರಚನೆ ಮಾಡಿರತಕ್ಕಂಥವರು ಮಾನ್ಯ ಯಡಿಯೂರಪ್ಪನವರು, ಇವತ್ತು ತಲೆದೋರಿರತಕ್ಕಂಥ ವಿದ್ಯುಚ್ಛಕ್ತಿ

ಅಭಾವವನ್ನು ನೀಗಿಸತಕ್ಕಂಥ ಒಂದು ಗುರುತರವಾದಂಥ ಜವಾಬ್ದಾರಿಕೆ ಸರ್ಕಾರದ ಮೇಲೆ ಇದೆ. ಇದನ್ನು ಯಾವ ರೀತಿಯಾಗಿ ನಿರ್ವಹಣೆ ಮಾಡುತ್ತಿದ್ದಾರೆ, ಯಾವ ರೀತಿಯಾಗಿ ಬಗೆಹರಿಸಬಲ್ಲರು, ಪ್ರಸ್ತುತ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಕೊರತೆ ಯಾವ ಪ್ರಮಾಣದಲ್ಲಿದೆ ಎನ್ನುವುದನ್ನು ಕೂಡ ನಾವು ವಾಸ್ತವಿಕವಾಗಿ ಚರ್ಚೆ ಮಾಡಬೇಕಾಗುತ್ತದೆ. ನಾನು ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ ಹೋಗದೆ, ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಜ್ಞಾಪಿಸುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯಮಂತ್ರಿಗಳು, ಅವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ತಮ್ಮ ಪ್ರಣಾಳಿಕೆಯಲ್ಲಿ ತಮ್ಮದೇ ಆದಂಥ ಆಶ್ವಾಸನೆಗಳನ್ನು ಕೂಡ ಕೊಟ್ಟಿದ್ದರು. ನಮ್ಮ ಈ ವ್ಯವಸ್ಥೆಯಲ್ಲಿ ಚುನಾವಣೆ ಪೂರ್ವದಲ್ಲಿ ಹೇಳಿದಂಥ ಮಾತುಗಳಿಗನುಗುಣವಾಗಿಯೇ ಸರ್ಕಾರಗಳು ಕೂಡ ನಡೆಯಬೇಕಾಗುತ್ತದೆ ಮತ್ತು ಯೋಜನೆಗಳೂ ರೂಪಿತವಾಗಬೇಕು. ಇವತ್ತು ಬಹಳ ಪ್ರಾಮುಖ್ಯವಾಗಿ ವಸ್ತುಸ್ಥಿತಿ ವಾಸ್ತವಿಕವಾಗಿರುವಂಥ ಅಂಶಗಳು ಏನಿವೆ ಎನ್ನುವುದನ್ನು ಎಲ್ಲೋ ಒಂದು ರೀತಿಯಲ್ಲಿ ಅರಿಯುವ ವಿಚಾರದಲ್ಲಿ ನೀವು ಎಡವಿದ್ದೀರಾ ಎನ್ನತಕ್ಕಂಥ ಭಾವನೆ. ರಾಜ್ಯದಲ್ಲಿರುವ ಎಲ್ಲಾ 10 ಹೆಚ್‌ಪಿ ವಿದ್ಯುತ್ ಪಂಪುಸೆಟ್ಟುಗಳಿಗೂ ಪುಕ್ಕಟೆಯಾಗಿ ವಿದ್ಯುತ್ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದೀರಿ. ಇವತ್ತು ರಾಜ್ಯದಲ್ಲಿ ಸುಮಾರು 14 ಲಕ್ಷ ಪಂಪುಸೆಟ್ಟುಗಳಿವೆ. ಇದರ ಬಗ್ಗೆ ನೀವು ಘೋಷಿಸಿದಾಗ ಜನರು ನಿಮಗೆ ಮನ್ನಣೆ ಕೊಟ್ಟರು, ಮತ ಕೊಟ್ಟರು, ತನ್ಮೂಲಕ ನಿಮ್ಮನ್ನು ಅಧಿಕಾರದ ಗದ್ದುಗೆಗೆ ಏರಿಸಿದರು. ಆದರೆ, ತದನಂತರ ನೀವೇ ಈ ಘೋಷಣೆ ಮಾಡಿದಾಗ ಎಷ್ಟರಮಟ್ಟಿಗೆ ಜನರು ಸ್ವೀಕರಿಸಿದರು ಎಂಬುದು ತಮಗೆ ಗೊತ್ತಿರುವ ವಿಚಾರವೇ ಆಗಿದೆ.

ಇದಲ್ಲದೆ, ಬಹಳ ಮುಖ್ಯವಾಗಿರುವ ಇನ್ನೊಂದು ವಿಚಾರವನ್ನು ಪ್ರಸ್ತಾಪಿಸುತ್ತೇನೆ. ಒಂದು, ಜನರೇಶನ್ ಬಗ್ಗೆ. ಮುಂದಿನ 5 ವರ್ಷಗಳಲ್ಲಿ ಸುಮಾರು 10,000 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದಿಸಿ ನಮ್ಮ ಅಧಿಕಾರಾವಧಿಯಲ್ಲಿ ಗ್ರಿಡ್‌ಗೆ ತರುತ್ತೇವೆಂದು ಆ ಸಂದರ್ಭದಲ್ಲಿ ಹೇಳಿದ್ದಿರಿ. ಅದನ್ನು ಮಾಡಬೇಕಾದಾಗ ಈಗ ಸರ್ಕಾರದ ಸಂಸ್ಥೆಗಳಾಗಿರುವ ಪವರ್

ಕಾರ್ಪೊರೇಷನ್ ಇರಬಹುದು ಅಥವಾ ಕೆಪಿಟಿಸಿಎಲ್ ಇರಬಹುದು. ಇದಲ್ಲದೆ, ಇವತ್ತು ಖಾಸಗಿ ವಲಯಕ್ಕೆ ಉತ್ತೇಜನ ನೀಡುವ ಮುಖಾಂತರ ವಿದ್ಯುತ್ ಉತ್ಪಾದನೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದಿರಿ. ಆ ಮಾತಿಗೆ ನೀವು ಬದ್ಧರಾಗಿದ್ದೀರೆನ್ನುವ ಹಿನ್ನೆಲೆಯಲ್ಲಿ ನಾನು ಮಾತನಾಡಲು ಇಷ್ಟಪಡುತ್ತೇನೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಹಿಂದಿನ ಸದನದಲ್ಲಿ ಮಾತನಾಡಿದಾಗ ರೈತರಿಂದ ಬರಬೇಕಾಗಿರುವ ಬಾಕಿಗಳೇನಿದ್ದವು, 4–6 ವರ್ಷಗಳಿಂದ ವಸೂಲಾಗದಿರುವ ಬಾಕಿ ಏನಿತ್ತು, ಅದೆಲ್ಲವನ್ನೂ ಮನ್ನಾ ಮಾಡುತ್ತೇವೆಂಬ ಮಾತನ್ನು ಪದೇ ಪದೇ ಈಶ್ವರಪ್ಪನವರು ಹೇಳಿದ್ದಾರೆ, ಇವತ್ತು ಸದನದಲ್ಲಿ ಈ ವಿಚಾರ ಪ್ರಸ್ತಾಪವಾದಾಗ ಅದೂ ಕೂಡ ಸರ್ಕಾರದ ಒಂದು ಅಂಶವೆಂದು ನಾನು ಭಾವಿಸುತ್ತೇನೆ. ಈ ಹಿನ್ನೆಲೆಯಲ್ಲಿ ತಾವು ಅಧಿಕಾರಕ್ಕೆ ಬಂದ ಎರಡು ವರ್ಷಗಳಲ್ಲಿ ಬಹುಶಃ, ವಿದ್ಯುಚ್ಛಕ್ತಿಯನ್ನು ನಮಗೆ ಸಂಪೂರ್ಣವಾಗಿ ಕೊಟ್ಟರು, ನಾವು ಬಳಕೆ ಮಾಡಿಕೊಂಡೆವು, ನಮಗೆ ಪ್ರಯೋಜನವಾಯಿತೆಂದು ಯಾವುದೇ ಒಂದು ದಿವಸವೂ ಹೇಳುವ ಮಾತಿಲ್ಲ. ಎರಡು ವರ್ಷಗಳಿಂದಲೂ ಇದೇ ತರಹ ಅಂದರೆ, ಪ್ರಾರಂಭದ ದಿನಗಳಿಂದಲೂ ಇವತ್ತಿನವರೆಗೂ ಒಂದೇ ತರಹದ ಕೊರತೆಯನ್ನು ಜನರು ಅನುಭವಿಸುತ್ತಾ ಬಂದಿದ್ದಾರೆ. ನಿಮ್ಮ ಪುಣ್ಯಕ್ಕೆ ಏನೋ ಒಳ್ಳೆಯ ಮಳೆಯಾಯಿತು. ಎರಡು ವರ್ಷಗಳಲ್ಲಿ ನಮ್ಮ ನದಿಗಳೆಲ್ಲವೂ ಉಕ್ಕಿ ಹರಿಯಿತು. ಆದರೆ, ವಿದ್ಯುತ್‌ಗೆ ಯಾವುದೇ ತರಹದ ತೊಂದರೆಯಾಗುವ ರೀತಿಯಲ್ಲಿರಲಿಲ್ಲ.

ಈ ವರ್ಷ ಶರಾವತಿ ಇರಬಹುದು, ಬೇರೆ ಜಲಾಶಯಗಳಾದ ಲಿಂಗನಮಕ್ಕಿ ಇರಬಹುದು, ಇವೆಲ್ಲವೂ ಉಕ್ಕಿ ಹರಿದವು. ಈ ಜಲಾಶಯಗಳು ನೂರಕ್ಕೆ ನೂರರಷ್ಟು, ಎಂಬತ್ತರಷ್ಟು ತುಂಬಿ ನೀರಿನ ಮೂಲದಿಂದ ಬರುವ ವಿದ್ಯುತ್ ಅನ್ನು ಸಾಕಷ್ಟು ರೀತಿಯಲ್ಲಿ ಕೊಡುವ ಸಾಮರ್ಥ್ಯವನ್ನು ದೇವರು ನಿಮಗೆ ಕೊಟ್ಟನು. ಆದರೂ ಕೊರತೆ ಆಗುತ್ತಿದೆಯಲ್ಲ ಏಕೆ ? ಎಲ್ಲಿಂದ ಕೊರತೆಯಾಗುತ್ತಿದೆ ? ನಾನು ಒಪ್ಪುತ್ತೇನೆ. ಅಧ್ಯಕ್ಷರೆ, ಪ್ರತಿ ವರ್ಷವೂ ಕೈಗಾರಿಕಾ ರಂಗದಲ್ಲಿ ಅಭಿವೃದ್ಧಿಯಾಗುತ್ತದೆ, ವ್ಯವಸಾಯ ಕ್ಷೇತ್ರದಲ್ಲಿ

ಅಭಿವೃದ್ಧಿ ಸಾಧಿಸಲು ಹೋಗುತ್ತಾರೆ, ರೈತರು ನಿರಂತರವಾಗಿ ಪಂಪುಸೆಟ್ಟುಗಳನ್ನು ಹಾಕುತ್ತಿರುತ್ತಾರೆ. ಈ ರೀತಿ ವರ್ಷಕ್ಕೆ ನಮಗೆ ಕನಿಷ್ಠ ಶೇಕಡ 10 ರಿಂದ 15ರಷ್ಟು ಬೇಡಿಕೆ ಸಹಜವಾಗಿ ಹೆಚ್ಚಾಗುವ ವಾತಾವರಣವಿದೆ. ಅಂದಾಗ ಒಂದು ಕಡೆ ಇರುವ ವಿದ್ಯುಚ್ಛಕ್ತಿಯನ್ನು ಯಾವ ರೀತಿ ನಿರ್ವಹಿಸಬೇಕೆಂಬುದು ಬಹಳ ಮುಖ್ಯವಾದ ವಿಚಾರ. ವಿದ್ಯುತ್ ನಿರ್ವಹಣೆ ಜೊತೆಗೆ, ಉತ್ಪಾದನೆ ಕೂಡ ಅಷ್ಟೇ ಪ್ರಮುಖವಾದುದಾಗಿದೆ. ಉತ್ಪಾದನೆ ಇಲ್ಲದೆ, ನಿರ್ವಹಣೆ ಇಲ್ಲದೆ ಎಲ್ಲವನ್ನೂ ಸಮಾಧಾನ ಪಡಿಸುವುದಕ್ಕಾಗುವುದಿಲ್ಲ. ಪ್ರಸ್ತುತ ಸಂದರ್ಭದಲ್ಲಿ ತೊಂದರೆ ಏನಿದೆ, ನಾವು ಈಗ ಮಾರ್ಚಿ ತಿಂಗಳಿನಲ್ಲಿದ್ದೇವೆ. ಇನ್ನು ಮುಂಬರುವ ಜೂನ್, ಜುಲೈ ತಿಂಗಳವರೆಗೆ ಯಾವ ರೀತಿ ನಿರ್ವಹಿಸಬಹುದು ? ಮುಂಬರುವ ಸಂದರ್ಭ ಎಂತಹುದು ? ಒಂದು ಕಡೆ ಪರೀಕ್ಷೆಗಳು ಪ್ರಾರಂಭವಾಗಿವೆ. ಕೊನೇ ಪಕ್ಷ ಮಕ್ಕಳಿಗೆ ನಿರಂತರವಾಗಿ ಎಂದರೆ, ಬೆಳಿಗ್ಗೆ 6.00 ಗಂಟೆಯಿಂದ ರಾತ್ರಿ 12.00 ಗಂಟೆವರೆಗೆ ವಿದ್ಯುಚ್ಛಕ್ತಿ ಕೊಡಬೇಕಾಗಿರುವ ಜವಾಬ್ದಾರಿ ಇದೆ, ಕೊಡಲೇಬೇಕಾಗುತ್ತದೆ. ನಮ್ಮ ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಹಳ್ಳಿಗಾಡಿನ ಪ್ರದೇಶಕ್ಕೆ ವಿದ್ಯುತ್ ಕೊಡಬೇಕಾಗುತ್ತದೆ.

ಇದೊಂದು ಕಡೆಯಾದರೆ, ಇನ್ನೊಂದು ಕಡೆ ರೈತರ ಸಮಸ್ಯೆ, ಬಹಶಃ ಒಳ್ಳೆಯ ಮಳೆಯಾಯಿತು, ಆದರೆ, ಬೆಳೆ ಬರಲಿಲ್ಲ, ಕಾರಣ, ತಾಪಮಾನ ಜಾಸ್ತಿಯಾಗಿದೆ. ಹಳ್ಳಿಗಳಿಗೆ ಹೋದರೆ ತಾಪಮಾನ ಎಷ್ಟಿದೆಯೆಂದರೆ, ಬಹಶಃ ನನ್ನ ಅನುಭವದಲ್ಲಿ ಹೇಳಬೇಕಾದರೆ, ಎಲ್ಲೆಡೆಯೂ 3^0 ರಿಂದ 4^0 ಗಳಷ್ಟು ತಾಪಮಾನ ಹೆಚ್ಚಾಗಿದೆ. ನನ್ನ ಮತಕ್ಷೇತ್ರದಲ್ಲಿಯೇ 36^0, 37^0 ಮೇಲ್ಪಟ್ಟು ದಾಟುತ್ತಿರಲಿಲ್ಲ. ಇವತ್ತು 43^0 ವರೆಗೂ ತಾಪಮಾನ ಹೆಚ್ಚಿರುವುದನ್ನು ನೋಡಿದ್ದೇವೆ. ಇವತ್ತು ರೈತರು ಆಸೆ ಪಟ್ಟು ಬೆಳೆ ಆಗಲಿಲ್ಲವೆಂಬ ಕಾರಣಕ್ಕೋಸ್ಕರ ಸಾಕಷ್ಟು ರೀತಿಯಲ್ಲಿ ವ್ಯವಸಾಯವನ್ನೇ ನಂಬಿ ಬಿತ್ತನೆ ಕೆಲಸ ಮಾಡಿದ್ದಾರೆ. ನಮಗೆ ವಿದ್ಯುಚ್ಛಕ್ತಿ ಸೌಲಭ್ಯ ಬರುತ್ತದೆಂಬ ವಿಶ್ವಾಸ ಇಟ್ಟುಕೊಂಡು ಅನೇಕ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇವತ್ತು ಅಂಕಿ–ಅಂಶಗಳ ಮೂಲಕ ಹೇಳುವುದಾದರೆ, ನಮ್ಮಲ್ಲಿ 17 ಲಕ್ಷಕ್ಕೂ

ಹೆಚ್ಚು ಪಂಪುಸೆಟ್ಟುಗಳಿವೆ. ಅನಧಿಕೃತವಾಗಿ 2 ಲಕ್ಷಕ್ಕೂ ಹೆಚ್ಚಿವೆ. ಇವುಗಳ ಸಂಖ್ಯೆ ಪ್ರತಿನಿತ್ಯವೂ ನಿರಂತರವಾಗಿ ಬೆಳೆಯುತ್ತಿದೆ. ಪ್ರತಿನಿತ್ಯವೂ ಹೀಗೆ ಬೆಳೆಯುತ್ತಿರುವುದನ್ನು ಗಮನಿಸಿದರೆ ರಾಜ್ಯದಲ್ಲಿ 20 ಲಕ್ಷಕ್ಕೂ ಹೆಚ್ಚು ಐ.ಪಿ. ಸೆಟ್ಟುಗಳಿವೆ. ಒಂದೊಂದು ಐ.ಪಿ. ಸೆಟ್‌ಗೂ ಕನಿಷ್ಠ ಒಂದು, ಎರಡು ಎಕರೆಗಳಷ್ಟು ಸಾಗುವಳಿ ಮಾಡಿದ್ದಾರೆಂದರೆ, ಸುಮಾರು ಲಕ್ಷಾಂತರ ಎಕರೆಗಳಿಗಾಗುವಷ್ಟು ಸಾಗುವಳಿಗೆ ನೀರನ್ನು ಉಪಯೋಗಿಸಿ ವಿದ್ಯುತ್ ನಂಬಿ ರೈತರು ಬೆಳೆ ಬಿತ್ತಿದ್ದಾರೆಂಬುದನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದಾಗ ಕೂಡ ಅದೇ ಪರಿಸ್ಥಿತಿ. ಇವತ್ತು ಬರಗಾಲಕ್ಕೆ ತುತ್ತಾಗಿರುವ ನಮ್ಮ ಪ್ರದೇಶದಲ್ಲೂ ಅದೇ ಪರಿಸ್ಥಿತಿ ಇದೆ. ಎಲ್ಲೆಲ್ಲೂ ನೀರಿಗೋಸ್ಕರ ಹಾಹಾಕಾರ, ನೀರು ಇದ್ದರೂ ವಿದ್ಯುತ್ ಇಲ್ಲ ಎನ್ನುವ ವಾತಾವರಣ ಇದ್ದಾಗ ನಾವು ಇದನ್ನು ಹೇಗೆ ನಿರ್ವಹಿಸಬಹುದು? ಈ ಕೊರತೆಯನ್ನು ಹೇಗೆ ಎದುರಿಸುವುದು ? ಟೀಕೆ ಮಾಡುವುದು ಬೇರೆ, ಅದರ ಜೊತೆಗೆ, ಎಲ್ಲಿ ತಪ್ಪಿದ್ದೀರಿ ? ಸರ್ಕಾರ ಎಲ್ಲಿ ಹಳಿ ತಪ್ಪಿದೆಯೆಂದು ಎಚ್ಚರಿಸಬೇಕಾದ ಜವಾಬ್ದಾರಿ ನಮಗಿದೆ. ವಾಸ್ತವಿಕವಾಗಿ ಇರುವುದೇನೆಂದರೆ, ಎಲ್ಲಿಯೋ ಒಂದು ಕಡೆ ವಿದ್ಯುತ್ ಇಲಾಖೆಯವರು ನೇರವಾಗಿ ರೈತರಿಗೆ ನೀವು ಮಾಹಿತಿ ಕೊಡುವ ಸಂದರ್ಭದಲ್ಲಿ ಕಮ್ಯುನಿಕೇಷನ್ ಮಾಡುವಾಗ ನಿಮ್ಮ ಬೊಕ್ಕಸದಲ್ಲಿ ನಿಮ್ಮ ಜೊತೆಯಲ್ಲಿ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಇದೆ, ಎಷ್ಟು ಪ್ರಮಾಣದಲ್ಲಿ ನಾವು ವಿದ್ಯುತ್ ಕೊಡಬಹುದು ಎಂಬ ಮಾಹಿತಿಯನ್ನು ಕೊಡಬೇಕಾಗುತ್ತದೆ. ನೀವು ಅಂಕಿ-ಅಂಶ ಹೇಳಿದ್ದೀರಿ. ಅದರಲ್ಲೂ ವಿಶೇಷವಾಗಿ ಈಶ್ವರಪ್ಪನವರು ಆಡಿದ ಮಾತುಗಳನ್ನು ಬೆಳಗ್ಗೆ ಎದ್ದು ನೋಡಿದಾಗ, ಇನ್ನೇನೂ ಪರವಾಗಿಲ್ಲ, ಪರಿಸ್ಥಿತಿ ನಾಳೆ ಸುಧಾರಿಸುತ್ತದೆನ್ನುವ ರೀತಿಯಲ್ಲಿ ವಾತಾವರಣ ಸೃಷ್ಟಿಸಿದರು. ಒಂದು ರೀತಿಯಲ್ಲಿ ಜನರೆಲ್ಲರೂ ಭ್ರಮಾ ಲೋಕದಲ್ಲಿದ್ದರು, ನಮಗೇನೂ ತೊಂದರೆಯಿಲ್ಲ, ಹೊಸ ಸರ್ಕಾರ ಬಂದಿದೆ, ವಿದ್ಯುತ್ ಕೊಡುತ್ತದೆಂಬ ವಿಶ್ವಾಸ ಮೂಡಿಸುವ ಕೆಲಸ ಮಾಡುವುದರಲ್ಲಿ ನೀವು ಯಶಸ್ವಿಯಾಗಿರಿ. ಆದರೆ, ವಾಸ್ತವ ಸಂಗತಿ ಹೇಳುತ್ತೇನೆ. ಬಹಶಃ, ನಾನು ಯಾವತ್ತೂ ಊರಿನಲ್ಲಿರುವುದು ಕಷ್ಟ, ಶಿವರಾತ್ರಿ ದಿವಸ ಜಾಗರಣೆ ಮಾಡಲೇಬೇಕೆಂದು ಮನೆಯಲ್ಲಿ ಉಳಿದುಕೊಂಡೆನು.

1.20 ಪಿ.ಎಂ.

ಮನೆಯಲ್ಲಿಯೇ ಇರಬೇಕು, ಎಲ್ಲಿಗೂ ಹೋಗಬಾರದೆಂದು ತೀರ್ಮಾನಿಸಿದ್ದೆ, ಬಚ್ಚೇಗೌಡರೆ, ಇನ್ನೇನು ಜಾಗರಣೆ ಮಾಡಬೇಕು, ಟಿ.ವಿ.ಯಲ್ಲಿ ಸಾಕಷ್ಟು ಕಾರ್ಯಕ್ರಮಗಳು ಬರುತ್ತದೆ, ನೋಡಬಹುದು, ಆನಂದಿಸಬಹುದು, ಶಿವನ ಹೆಸರಿನಲ್ಲಿ, ಈಶ್ವರನ ಹೆಸರಿನಲ್ಲಿ ಧ್ಯಾನ ಮಾಡಬಹುದು, ಕಾಲ ಕಳೆಯಬಹುದೆಂದು ನಾವು ತಿಳಿದು ಕೊಂಡಿದ್ದೇವು. ಏನಾಯಿತೆಂದರೆ, ಊಟ ಮಾಡುವುದಕ್ಕಾಗಲಿಲ್ಲ, ವಿದ್ಯುತ್ ಬರಲಿಲ್ಲ, ಕರೆಂಟ್ ಬರುತ್ತದೆಂದು ರಾತ್ರಿಯೆಲ್ಲಾ ಕಾದೆವು. ಕರೆಂಟ್ ಬರುವುದು, ಹೋಗುವುದು, ನಮ್ಮ ಮನೆಯಲ್ಲಿ ಹೇಳುತ್ತಿದ್ದರು. ನೀವು ಇವತ್ತು ಮನೆಯಲ್ಲಿದ್ದೀರಿ, ಇವತ್ತು ಒಂದು ದಿವಸ ಮಾತ್ರ ನೋಡುತ್ತಿದ್ದೀರಿ, ಆದರೆ, ಪ್ರತಿನಿತ್ಯವೂ ನಮ್ಮದು ಇದೇ ಕತೆ ಎಂದರು. ಬೆಳಗ್ಗೆ ಎದ್ದ ತಕ್ಷಣ, ಪರವಾಗಿಲ್ಲ, ಜಾಗರಣೆ ಚೆನ್ನಾಗಿ ಮಾಡಿದಿರಿ, ಆದರೆ, ನೀವು ಊಟ ಮಾಡಲೇ ಇಲ್ಲವಲ್ಲ ಎಂದರು. ಆಗ ನಾನು ಅಂದುಕೊಂಡೆ, ನಾನು ಜಾಗರಣೆ ಮಾಡಿದೆ, ಇವತ್ತು ಪೂಜಿಸಬೇಕಾಗಿದ್ದು, ನಾನು ಮನಸ್ಸಿನಲ್ಲಿ ಈಶ್ವರನನ್ನು ಸ್ಮರಿಸಬೇಕಾಗಿತ್ತು, ಆದರೆ, ನಿಜವಾಗಿಯೂ ಸ್ಮರಣೆ ಮಾಡಿದ್ದು ಶಿವಮೊಗ್ಗದ ಈಶ್ವರಪ್ಪನನ್ನು! ಇದು ಬಂದಿರುವ ವ್ಯತ್ಯಾಸ. ಕರೆಂಟ್ ಈಗ ಬರುತ್ತದೆ, ನಾಳೆ ಬರುತ್ತದೆಂದು ಎಲ್ಲಾ ಕಡೆ ಫೋನ್ ಮಾಡಿಕೊಂಡೇ ಕುಳಿತುಕೊಂಡಿದ್ದೆವು. ಎಲ್ಲಿ ಬರಬಹುದು, ಏನಾದರೂ ಕಾರ್ಯಕ್ರಮ ನೋಡಬಹುದೇ ಎಂದು ಕಾದು ಕುಳಿತಿದ್ದೆವು. ಹಾಗಾಗಿದೆ, ಈ ಪರಿಸ್ಥಿತಿ, ಇಂತಹ ಜಾಗರಣೆ ನಮಗೆ ಒಂದು ದಿವಸವಾದರೆ ರಾಜ್ಯದ ಹಳ್ಳಿಗಳಲ್ಲಿ ವಿದ್ಯುತ್ ನಂಬಿರುವ ನೂರಕ್ಕೆ 95ರಷ್ಟು ಜನರಿದ್ದಾರೆ. ನೂರಕ್ಕೆ ನೂರರಷ್ಟು ನಾವು ಇನ್ನೂ ಸಾಧಿಸುವುದಕ್ಕಾಗಿಲ್ಲ. ಶೇಕಡ 95ರಷ್ಟು ಜನರು ಜಾಗರಣೆಯಲ್ಲಿದ್ದಾರೆಂದರೆ, ಅದನ್ನು ಯಾವ ರೀತಿ ವ್ಯಾಖ್ಯಾನಿಸಬಹುದು ? ಇವತ್ತು ಅವರೆಲ್ಲರೂ ಕಗ್ಗತ್ತಲಿನಲ್ಲಿದ್ದಾರೆ. ಕಗ್ಗತ್ತಲಿನಲ್ಲಿಡುವಂತಹ ಪ್ರಯತ್ನ ಮಾಡಿದ್ದೀರಿ. ಅವರೆಲ್ಲರನ್ನೂ ಕಗ್ಗತ್ತಲಿನಲ್ಲಿಂದ ಹೊರ ತರುವ ರೀತಿಯಲ್ಲಿ ಏನಾದರೂ ನೀವು ಚಿಂತನೆ ಮಾಡಿದ್ದೀರಾ ? ಈ ಮಾತನ್ನು ಹೇಳುವಾಗ ಎಲ್ಲಿಯೋ ಒಂದು ಕಡೆ ವಿಫಲತೆ ಕಾಣುತ್ತಿದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಡಿಮ್ಯಾಂಡ್ ಜಾಸ್ತಿಯಾಯಿತು.

ಶ್ರೀ ಬಿ.ಎನ್. ಬಚ್ಚೇಗೌಡ : ನಿನ್ನೆ ಸಾಯಂಕಾಲದಿಂದ 1,48,000 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಕೊಡುತ್ತಿದ್ದಾರೆ. ವಿದ್ಯುತ್ ಸಮಸ್ಯೆ ನಿನ್ನೆ ಸಂಜೆಯಿಂದ ಸುಧಾರಿಸಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ತಮ್ಮ ಅಂಕಿಅಂಶಗಳ ಮೇಲೆಯೇ ವಿಧಾನಸಭೆಯಲ್ಲಿ ನಾವು ಚರ್ಚೆ ಮಾಡಿ ಕಾಲಹರಣ ಮಾಡಬೇಕು ಎನ್ನುವುದಾದರೆ ನನ್ನ ಅಭ್ಯಂತರವಿಲ್ಲ. ಅಂಕಿಅಂಶಗಳನ್ನು ಸಾಕಷ್ಟು ಕೊಟ್ಟಿದ್ದಾರೆ. ಅದನ್ನು ಬಿಡಿ. ನಾನು ತಮ್ಮ ಇಚ್ಛಾಶಕ್ತಿಯನ್ನು ಪ್ರಶ್ನೆ ಮಾಡುತ್ತಿದ್ದೇನೆ. ನೀವು ಇವತ್ತು ಅಧಿಕಾರದಲ್ಲಿದ್ದೀರಿ. ಎರಡು ವರ್ಷವಾಯಿತು, ಇನ್ನು ಮೂರು ವರ್ಷ ಇರಬಹುದು. ನಂತರ ಪ್ರಶ್ನೆ ಬೇರೆ ಇರುತ್ತದೆ. ಆದರೆ, ಅದಲ್ಲ, ರಾಜ್ಯದ ಅಭಿವೃದ್ಧಿಯ ಬಗ್ಗೆ ಯಾವ ರೀತಿಯಾದಂಥ ದೊಡ್ಡ ಹೊಡೆತ ಬೀಳುತ್ತದೆ ಎಂಬ ಬಗ್ಗೆ ನಾವು ಏನಾದರೂ ಚಿಂತನೆ ಮಾಡುತ್ತಿದ್ದೇವೆಯೇ? ಒಂದು simple ವಿಚಾರವನ್ನು ಹೇಳುತ್ತೇನೆ. ಇವತ್ತು ಪುಕ್ಕಟ್ಟೆಯಾಗಿ ವಿದ್ಯುತ್‌ನ್ನು ಕೊಡುವ ಪರಿಸ್ಥಿತಿಯಲ್ಲಿ ಇಲ್ಲ. ಇದು ನಿಮಗೂ ಗೊತ್ತಿದೆ. ನಿಮ್ಮ ಎಲ್ಲಾ ಎಸ್ಕಾಂಗಳು ಇವತ್ತು ನಷ್ಟದಲ್ಲಿವೆ. ನಿಮಗೆ ನಿಜವಾದ ಕಳಕಳಿ ಇದ್ದಿದ್ದರೆ ಎಲ್ಲಾ ಎಸ್ಕಾಂಗಳನ್ನು ಸೇರಿಸಿ ಸುಮಾರು ಆರೂವರೆ ಸಾವಿರ ಕೋಟಿ ರೂ. ನಷ್ಟವಾಗಿರುವಾಗ, ಅದನ್ನು ಭರಿಸಬೇಕಾಗಿರುವ ಸಂದರ್ಭದಲ್ಲಿ ನೀವು ಸಬ್ಸಿಡಿಯನ್ನು ಎಷ್ಟರ ಮಟ್ಟಿಗೆ ಬಿಡುಗಡೆ ಮಾಡಿದ್ದೀರಿ? carried over losses ಬೇರೆ ಇತ್ತು. ಹೋದ ವರ್ಷ ಬಿಡುಗಡೆ ಮಾಡಬೇಕಾಗಿದ್ದು, ಈ ವರ್ಷ ಬಿಡುಗಡೆ ಮಾಡಬೇಕಾಗಿದ್ದು, ಇವೆಲ್ಲವನ್ನು ಲೆಕ್ಕಾ ಹಾಕಿ ಈ ಸಬ್ಸಿಡಿಯನ್ನು ನೀವು ಪ್ರಾಮಾಣಿಕವಾಗಿ ಕೊಟ್ಟುಬಿಟ್ಟಿದ್ದರೆ ನಾನು ಎಲ್ಲೋ ಒಂದು ಕಡೆ ನಿಮ್ಮ ಬೊಕ್ಕಸ ತುಂಬಿ ಹರಿಯುತ್ತಿದೆ ಎಂದು ಒಪ್ಪಿಕೊಳ್ಳುತ್ತಿದೆ. ಅದರಲ್ಲೂ ರೈತರ ಸಮಸ್ಯೆಯನ್ನು, ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಯಡಿಯೂರಪ್ಪನವರು ಇವತ್ತು ರೈತರಿಗೆ ಸಹಾಯ ಆಗತಕ್ಕ ನಿಟ್ಟಿನಲ್ಲಿ ಎಸ್ಕಾಂಗಳಿಗೆ ಸಹಾಯ ಮಾಡುತ್ತಾರೆಂದು ನಾನು ಮೆಚ್ಚುತ್ತಿದ್ದೆ. ಆದರೆ, ಅದು ಆಗಿದೆಯೇ ? ಎಸ್ಕಾಂಗಳಿಗೆ ಮೂಲ ಬಂಡವಾಳವೆಂದು ಏನಿತ್ತು ಅವೆಲ್ಲವೂ

ಇವತ್ತು ಸಂಪೂರ್ಣವಾಗಿ ನಾಶವಾಗಿ ನಷ್ಟದಲ್ಲಿವೆ ಎಂದರೆ ಅದಕ್ಕೆ ಕಾರಣ ಸರ್ಕಾರ. ನೀವು ಎಸ್ಕಾಂಗಳ ಬಗ್ಗೆ ಬೊಟ್ಟು ಮಾಡಬೇಡಿ. ನೀವು ಕೊಡಬೇಕಾಗಿರುವ ಸಬ್ಸಿಡಿಯನ್ನು ಕೊಟ್ಟುಬಿಟ್ಟಿದ್ದರೆ ಈ ರೀತಿ ಆಗುತ್ತಿರಲಿಲ್ಲ. ತಾವು ಏಕೆ ಸಬ್ಸಿಡಿಯನ್ನು ಘೋಷಣೆ ಮಾಡುತ್ತೀರಿ? ಹತ್ತು ಹೆಚ್.ಪಿ. ಮೇಲೆ ಇವತ್ತಿನಿಂದ ಏನೂ ತೊಂದರೆ ಇಲ್ಲವೆಂದು ಹೇಳಿಬಿಡುತ್ತೇವೆ. ಆದರೆ, ಅದನ್ನು ಸಬ್ಸಿಡಿ ರೂಪದಲ್ಲಿ ಎಸ್ಕಾಂಗಳಿಗೆ ಕೊಡಬೇಕಲ್ಲವೇ? ಆ ರೀತಿ ಅವರಿಗೆ ದುಡ್ಡನ್ನು ಕೊಡದೆಯೇ ನಷ್ಟದಲ್ಲಿದೆಯೆಂದು ಹೇಳಿದರೆ ಸರಿಯಾಗುತ್ತದೆಯೇ? ಆದ್ದರಿಂದ ನೀವು ಇಲ್ಲಿ ತಪ್ಪನ್ನು ಮಾಡಿದ್ದೀರಿ. ಸಬ್ಸಿಡಿಯನ್ನು ಬಿಡುಗಡೆ ಮಾಡುವುದರಲ್ಲಿ ತಪ್ಪನ್ನು ಮಾಡಿದ್ದೀರಿ. ಇನ್ನೊಂದು ಮುಖ್ಯವಾದ ವಿಚಾರವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಬಹುಶ: ಇವತ್ತು ಶಾಸಕರಾಗಿರುವ ಎಲ್ಲರಿಗೂ ಅನುಭವವಿರತಕ್ಕದ್ದು. ನಾಳೆ ಯಾವುದಾದರು ಚುನಾವಣೆಯನ್ನು ಎದುರಿಸಲು ಹೋದಂಥ ಸಂದರ್ಭದಲ್ಲಿ ಆ ಪಕ್ಷ, ಈ ಪಕ್ಷ ಎನ್ನುವ ಪ್ರಶ್ನೆಯಲ್ಲ, ನಾವು ಜನರನ್ನು ಎದುರಿಸುವ ಸಾಮರ್ಥ್ಯ ನಮ್ಮಲ್ಲಿ ಇವತ್ತು ಇಲ್ಲ. ಇವತ್ತು ರೈತರು ನಮ್ಮನ್ನು ಹಿಡಿದು ಕೇಳುವ ಪರಿಸ್ಥಿತಿಯಾಗಿದೆ. ಮುಂದಿನ ದಿನಗಳು ಬಹಳ ಕಷ್ಟವಾಗುತ್ತದೆ. ಬೆಳಿಗ್ಗೆ ಎದ್ದು ಟಿ.ವಿ.ಯಲ್ಲಿ ಅದನ್ನು ನೋಡುತ್ತಿದ್ದೀರಿ. ರೈತಪರ ಸಂಘಟನೆಗಳು ಏನು ಹೋರಾಟ ಮಾಡುತ್ತಿವೆ, ಇವತ್ತು ಅಧಿಕಾರಿಗಳನ್ನು ಹೊರಕ್ಕೆ ಬಿಡುತ್ತಿಲ್ಲ, ಕೂಡಿ ಬೀಗ ಹಾಕುತ್ತಿದ್ದಾರೆ, ಬೀದಿಗೆ ಇಳಿದು ಹೋರಾಟ ಮಾಡುತ್ತಿದ್ದಾರೆ ಯಾವ ರೈತ ಇವತ್ತು ವ್ಯವಸಾಯವನ್ನು ಮಾಡಬೇಕಾಗಿತ್ತು ಆ ನೀರಿಗೋಸ್ಕರ, ವಿದ್ಯುಚ್ಛಕ್ತಿಗೋಸ್ಕರ ಬೀದಿಗೆ ಇಳಿದಿದ್ದಾರೆಂದರೆ ಅವರನ್ನು ಎಷ್ಟರಮಟ್ಟಿಗೆ ಸಮಾಧಾನ ಮಾಡಲು ಸಾಧ್ಯವಾಗುತ್ತದೆ ಎಂಬುದು ಬಹಳ ಮುಖ್ಯವಾಗಿರುವ ವಿಚಾರ. ಇವತ್ತು ಅನಧಿಕೃತ ಪಂಪುಸೆಟ್ಟುಗಳು ನಿಂತಿದೆಯೇ? ಇಲ್ಲಾ. ಅದು ನಡೆಯುತ್ತಲೇ ಇದೆ. ಅದನ್ನು ಕಂಟ್ರೋಲ್ ಮಾಡುವ ನಿಟ್ಟಿನಲ್ಲಿ ಏನಾದರು ಮಾಡಿದೆಯೇ? ಇಲ್ಲಾ. ಏಕೆ ನೀವು ಮಾಡಲಿಲ್ಲ? ಈಶ್ವರಪ್ಪನವರು ಭಾರಿ ಭಾರಿ ಮಾತನಾಡುತ್ತಿದ್ದರಲ್ಲಾ? 2 ಲಕ್ಷಕ್ಕಿಂತ ಹೆಚ್ಚು ಅನಧಿಕೃತ ಐ.ಪಿ. ಸೆಟ್ಟುಗಳಿರುವ

ಸಂದರ್ಭದಲ್ಲಿ ಇವತ್ತು ಯಾವುದಾದರು ಒಂದು ರೂಲ್ಸ್ ಪ್ರಕಾರ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಆಗಿಲ್ಲ. ಸರ್ಕಾರದಲ್ಲಿ ಮುಖ್ಯವಾಗಿರುವ ನಿಮ್ಮ ಲೋಪದೋಷವೇನೆಂದರೆ, ತಾವು ಕೂಡ ಕ್ಯಾಬಿನೇಟ್ ಸಚಿವರಾಗಿ ಕುಳಿತುಕೊಂಡು ಯೋಚನೆ ಮಾಡಬೇಕು. ಇವತ್ತು ನೀವು ಎಲ್ಲಾ ಕಡೆ ಗ್ರೇ, ಬ್ಲಾಕ್, ವೈಟ್ ಏರಿಯಾ ಎಂದು ಮಾಡಿದ್ದೀರಿ. ಇದನ್ನು ಯಾವಾಗ ಮಾಡಿದ್ದು? ಇದನ್ನು ಮಾಡಿ almost 10–15 ವರ್ಷವಾಗಿದೆ. ಇಷ್ಟು ವರ್ಷವಾದ ಮೇಲೂ ನೀವೇನು ಬ್ಲಾಕ್, ಗ್ರೇ, ಏರಿಯಾ ಎಂದು ಹೇಳುತ್ತೀರಿ ಅಲ್ಲಿ ಅಂತರ್ಜಲ ವೃದ್ಧಿಯಾಗಿಯೂ ಕೂಡ ಬ್ಲಾಕ್, ಗ್ರೇ, ಏರಿಯಾ ಎಂದೇ ಹೇಳುತ್ತೀರಿ. ಅಲ್ಲಿ ಐ.ಪಿ. ಸೆಟ್‌ಗಳಿಗೆ ಸಂಪರ್ಕ ಕೊಡುವುದಿಲ್ಲ. ವೈಟ್ ಏರಿಯಾದಲ್ಲಿ ಮಾತ್ರ ಅವಕಾಶ ಕೊಡುತ್ತೀರಿ. ಇವತ್ತು ನಿಮ್ಮ ಅನಧಿಕೃತ ಐ.ಪಿ. ಸೆಟ್‌ಗಳು ಜಾಸ್ತಿಯಾಗಿರುವುದು ಈ ಬ್ಲಾಕ್ ಮತ್ತು ಗ್ರೇ ಏರಿಯಾದಲ್ಲಿ. ನೀವು ಅವರಿಗೆ ಅಧಿಕೃತವಾಗಿ ಸಂಪರ್ಕವನ್ನು ಕೊಡುವುದಿಲ್ಲ, ವಿದ್ಯುತ್‌ನ್ನು ಕೊಡುವುದಿಲ್ಲ. ಇವತ್ತು ನಿಮ್ಮ ಟ್ರಾನ್ಸ್‌ಫಾರ್ಮರ್‌ಗಳು ಉಳಿಯುತ್ತಿಲ್ಲ. Overload ಆಗುತ್ತಿರುವುದರಿಂದ ಎಲ್ಲಾ burst ಆಗುತ್ತಿದೆ. ಇದರಿಂದಾಗಿ ನೀವು ಕೊಟ್ಟ ವಿದ್ಯುಚ್ಛಕ್ತಿ ಸಂಪೂರ್ಣವಾಗಿ ಬಳಕೆಯಾಗುತ್ತಿಲ್ಲ. ಓಲ್ಟೇಜ್ ಬರುತ್ತಿಲ್ಲ ಎಂದರೆ ಕಾರಣ ಇದು. ಅದನ್ನು ಸರಿ ಮಾಡದ ಹೊರತು ನೀವು ಆ ಲೋಡನ್ನು ಸಮರ್ಪಕವಾಗಿ 220 ಓಲ್ಟ್ಸ್ ವರೆಗೆ ಕೊಡುವುದಿಲ್ಲ. ಇವತ್ತು ಯಾವ ಹಳ್ಳಿಗೆ ಹೋಗಿ ನೋಡಿದರು ಸಹ 120–130 ಓಲ್ಟೇಜ್ ಮೇಲೆ ಇರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ಇರಬೇಕಾದರೆ ಇದನ್ನು ಯಾವ ರೀತಿಯಾಗಿ, ವಿಧಾನ ಸಭೆಯ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಾವ ರೀತಿಯಾಗಿ ಪರಿಹರಿಸಬಹುದು ಎಂಬ ನಿಟ್ಟಿನಲ್ಲಿ ಯೋಚನೆ ಮಾಡಬೇಕು? ಯಾವುದೇ ಕಾರಣಕ್ಕೂ ರೈತರನ್ನು, ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಇಲ್ಲಿ ಸುಧಾರಣೆಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಬಹುಶ: ನೀವು ಇದರಲ್ಲಿ ರೆಗ್ಯುಲರೈಸ್ ಮಾಡುವ ಕೆಲಸವನ್ನು ಮಾಡಿದ್ದರೆ ಸರ್ಕಾರಕ್ಕೆ ಸ್ವಲ್ಪ ಹಣವಾದರು ಬರುತ್ತಿತ್ತು. ಒಂದು ಐ.ಪಿ. ಸೆಟ್‌ಗೆ ಕೊನೆಯ ಪಕ್ಷ 20–30

ಸಾವಿರದಂತೆ ಬಂದಿದ್ದರೆ 2 ಲಕ್ಷ ಅನಧಿಕೃತ ಪಂಪ್‌ಸೆಟ್‌ಗಳಿಗೆ ಲೆಕ್ಕಾ ಹಾಕಿದ್ದರೆ ಎಷ್ಟೊಂದು ಹಣ ಬರುತ್ತಿತ್ತು? ಎಸ್ಕಾಂಗಳಿಗೆ ಈ ಪರಿಸ್ಥಿತಿ ಬರುತ್ತಿತ್ತೇ? ಎಸ್ಕಾಂಗಳ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲು ಸಾಧ್ಯವಾಗುತ್ತಿತ್ತು. ಆ ಕೆಲಸವನ್ನು ನೀವು ಮಾಡಲಿಲ್ಲ. ಅದನ್ನು ಏಕೆ ಮಾಡಲಿಲ್ಲ? ಆ ಮೂಲಕ ಅನಧಿಕೃತ ಐ.ಪಿ. ಸೆಟ್‌ಗಳನ್ನು ತಡೆಗಟ್ಟಲು ಸಾಧ್ಯವಾಗುತಿತ್ತು. ರೈತರ ವಿಚಾರದಲ್ಲಿ ನಾವು ಮಾತನಾಡಬೇಕಾದರೆ ನಮ್ಮ ತಕ್ಕಡಿ ಎಲ್ಲೋ ಒಂದು ಕಡೆ ರೈತರ ಕಡೆಗೆಯೇ ಇರುತ್ತದೆ. ಆಹಾರದ ಉತ್ಪಾದನೆ ಇವತ್ತು ಬಹಳ ಮುಖ್ಯ. Food security ಇವತ್ತು ಬಹಳ ಮುಖ್ಯ. ಇವತ್ತು ಆಹಾರದ ಭದ್ರತೆಗೋಸ್ಕರ, ರೈತನಿಗೆ ಇವತ್ತು ಯಥೇಚ್ಛವಾಗಿ ಉಚಿತ ವಿದ್ಯುತ್ ಕೊಡದಿದ್ದರೆ ನಿಜವಾಗಿಯೂ ಅವನು ನಾವು ನಿರೀಕ್ಷೆ ಮಾಡಿದ್ದ ಮಟ್ಟದಲ್ಲಿ ಆಹಾರವನ್ನು ಉತ್ಪಾದನೆ ಮಾಡಲು ಸಾಧ್ಯವಿರಲಿಲ್ಲ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ನೀವು ಅಂಕಿಅಂಶ ಕೊಟ್ಟು ಹೇಳಿದ್ದೀರಿ. ನಿಮ್ಮ ನಿರೀಕ್ಷೆ ಏನಿತ್ತು? ನಿಮ್ಮ ಆಹಾರದ ಉತ್ಪಾದನೆಯ ಸಾಮರ್ಥ್ಯ ಎಷ್ಟಿತ್ತು? ಆದರೆ ಎಷ್ಟು ಆಹಾರ ಉತ್ಪಾದನೆಯಾಗುತ್ತಿದೆಯೆಂದರೆ, ಇವತ್ತು ಕೊರತೆಯನ್ನು ಎದುರಿಸುತ್ತಿದ್ದೀರಿ. ಬಹುಶ: ನೀವು ಸಮರ್ಪಕವಾಗಿ, ಕೊನೆಯ ಪಕ್ಷ ನಿರಂತರವಾಗಿ 5–6 ಗಂಟೆ ವಿದ್ಯುತ್‌ನ್ನು ಕೊಟ್ಟಿದ್ದರೆ ನಿಮ್ಮ ಬೆಳೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿತ್ತು, ನಿಮ್ಮ ಆಹಾರದ ಕೊರತೆಯನ್ನು ನೀಗಿಸಲು ಸಾಧ್ಯವಾಗುತ್ತಿತ್ತು. ಇವತ್ತು ನಿಮ್ಮ ಮೇನೇಜ್‌ಮೆಂಟ್‌ನಲ್ಲಿ ತಪ್ಪಾಗಿರುವುದರಿಂದ ರೈತರಿಗೆ ವಿದ್ಯುತ್‌ನ್ನು ಕೊಡದಿರುವುದರಿಂದ ಸರ್ಕಾರಕ್ಕೆ ಹೊರೆಯಲ್ಲವೇ? ಸರ್ಕಾರಕ್ಕೆ ನಡುಕ ಅಲ್ಲವೇ? ಇದರ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ? ವಿದ್ಯುಚ್ಛಕ್ತಿ ವಿಚಾರ ಬಂದಾಗ ಅದು ಯಾವುದೇ ಸರ್ಕಾರವಿರಲಿ, ಮುಖ್ಯಮಂತ್ರಿಗಳು ಯಾರೇ ಇದ್ದರೂ ಸಮಸ್ಯೆ ಮಾತ್ರ ಹಾಗೆಯೇ ಇದೆ, ಸಮಸ್ಯೆ ಉಲ್ಬಣವಾಗುತ್ತಿದೆ. ನಾವು ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಮೇನೇಜ್‌ಮೆಂಟ್ ಮಾಡಿ ಯಶಸ್ವಿಯಾಗಿರಬಹುದು. ಆದರೆ, ನೀವು ಕೊನೆಯ ಪಕ್ಷ ಇದನ್ನು ಮಾಡುವುದರಲ್ಲೂ ಯಶಸ್ವಿಯಾಗಲಿಲ್ಲ. ಇವತ್ತಿಗೂ

ಕೂಡ ಇದರ ಬಗ್ಗೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿ. ಮುಖ್ಯಮಂತ್ರಿಗಳೋ ಅಥವಾ ಇನ್ನೊಬ್ಬರು ಯಾರಿಗಾದರು ಜವಾಬ್ದಾರಿ ಕೊಟ್ಟು ಅಧ್ಯಕ್ಷರಾಗಿ ಕುಳಿತು ನಿರ್ವಹಣೆ ಮಾಡಲಿ. ಅಂಥದ್ದೇ ಒಂದು ಕೆಲಸ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಆಗಿತ್ತು. ನಾನು ಕೃಷಿ ಸಚಿವನಾಗಿ ಆ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿದ್ದೆ. ಬಹುಶ: ಎಲ್ಲಾ ಸಭೆಯಲ್ಲೂ ನಾನು ಅಧ್ಯಕ್ಷತೆಯನ್ನು ವಹಿಸುತ್ತಿದ್ದೆ. ಆದ್ದರಿಂದ ಅದರ ಬಗ್ಗೆ ಎಲ್ಲಾ ಮಾಹಿತಿ ಇದೆ. ಎಲ್ಲೋ ಒಂದು ಕಡೆ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮಲ್ಲಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟಿದೆ ಎನ್ನುವ ಬಗ್ಗೆ ಮಾಹಿತಿ ಕೊಡಬೇಕಾಗುತ್ತದೆ. ಎಷ್ಟು ಗಂಟೆ ವಿದ್ಯುತ್ ಕೊಡುವುದಕ್ಕಾಗುತ್ತದೆ ಎನ್ನುವ ಮಾಹಿತಿಯನ್ನು ನೀವು ಕೊಡದೇ ಇದ್ದರೆ ಖಂಡಿತವಾಗಿಯೂ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ, ಇದನ್ನು ಅರ್ಥ ಮಾಡಿಕೊಳ್ಳಬೇಕು. ಇನ್ನೊಂದು ನಷ್ಟವೇನಾಗಿದೆ ಎಂದರೆ, transformer failures. KEB ಯಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ. ಇವತ್ತು BESCOM ನಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ. ಎಲ್ಲ ESCOM ಗಳಲ್ಲಿಯೂ ಭ್ರಷ್ಟಾಚಾರ ಜಾಸ್ತಿಯಾಗಿದೆ. ಏಕಾಗಿದೆ ಎಂದರೆ, ಇವತ್ತು ನಿರಂತರವಾಗಿ overload ಆಗಿರುವಂಥ transformers ಸುಟ್ಟುಹೋಗುತ್ತಿರುವ ಹಿನ್ನೆಲೆಯಲ್ಲಿ, ಆ ರೀತಿ ಸುಟ್ಟುಹೋಗುತ್ತಿರುವಂಥ transformers ಗೆ ನಿಮ್ಮ ಯಾವ ಆದ್ಯತೆ ಇದೆ? ಯಾವ ನಿಯಮವಿದೆ? ಹೇಳಬೇಕೆಂದರೆ, ಭ್ರಷ್ಟಾಚಾರ control ಮಾಡಲಿಕ್ಕಾಗಲಿಲ್ಲ. 10 ಸಾವಿರ ರೂ. ಕೊಟ್ಟರೇ ಇವತ್ತು transformer ಬರುವುದು ಬರುವುದಿಲ್ಲವೆನ್ನುವ ಮಟ್ಟಕ್ಕೆ ಆಗಿ ಹೋಗಿದೆ ಎಂದರೆ ಇದಕ್ಕೆ ಕಾರಣರಾರು ಎಂದು ಹೇಳಿದರೆ ಎಲ್ಲೋ ಒಂದು ಕಡೆ ಸರ್ಕಾರ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಕಷ್ಟವಾಗುತ್ತದೆ. ರೈತರು ಎಲ್ಲಿಗೆ ಬಂದಿದ್ದಾರೆ, ನಾವು ದುಡ್ಡು ಬೇಕಾದರೆ ಕೊಡುತ್ತೇವೆ, ನಾವೇನೂ ಪುಕ್ಕಟೆ ಕೊಡಿ ಎಂದು ಕೇಳಿರಲಿಲ್ಲ, ನಾವು ಕೇಳುತ್ತಿರುವುದು ವಿದ್ಯುಚ್ಛಕ್ತಿ, ನಿರಂತರವಾಗಿ voltage ಇರುವಂಥ ವಿದ್ಯುಚ್ಛಕ್ತಿ ಕೊಡಿ ಎನ್ನುವ ಕೂಗು ಎಲ್ಲಾ ಮೂಲೆಗಳಿಂದಲೂ ರೈತರ ಹೃದಯದಿಂದ ಬರುತ್ತಿದೆ. ಅದನ್ನು

encash ಮಾಡುವುದಕ್ಕೆ ಸರ್ಕಾರದಿಂದ ಆಗಲಿಲ್ಲವೆಂದರೆ ನಾನೇನು ಹೇಳಬೇಕು? ದಯಮಾಡಿ, ನೀವು ಈಗಲೂ ಕೂಡ ಆ ರೀತಿಯಾಗಿ ನಿರ್ವಹಣೆ ಮಾಡುವ ಕೆಲಸ ಮಾಡಬೇಕು. ಇವತ್ತು ಎಲ್ಲಾ ಕಡೆ generation ಬಗ್ಗೆ ಮಾತನಾಡುವುದಲ್ಲ. in the short term contingency plan, ನಮಗೆ ಜುಲೈ, ಆಗಸ್ಟ್‌ವರೆಗೂ ಕೂಡ ಯಾವ ರೀತಿಯಾಗಿ ವಿದ್ಯುಚ್ಛಕ್ತಿಯನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯ, ಅದನ್ನು ಯಾವ ರೀತಿಯಾಗಿ control ಮಾಡುವುದಕ್ಕೆ ಸಾಧ್ಯ? ಯಾವ ರೀತಿಯಾಗಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎನ್ನುವುದನ್ನು ತಾವು ಯೋಚನೆ ಮಾಡಬಾರದಾಗಿತ್ತೇ? Contingency Plan ಗಳನ್ನು ಇಲಾಖೆಯವರು ಹಾಕಿರುತ್ತಾರೆ. ಅದರಂತೆ ನಡೆಯುವ ಕೆಲಸವನ್ನು ನೀವು ಮಾಡುತ್ತಿದ್ದೀರಿ ಎಂದು ಹೇಳಿದರೆ ಎಲ್ಲೋ ಒಂದು ಕಡೆಗೆ management ನಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಅಧಿಕಾರಿಗಳು ಕೊಟ್ಟಂತಹ ಸಲಹೆಗಳನ್ನು ಪರಿಗಣಿಸತಕ್ಕಂಥ ರೀತಿಯಲ್ಲಿ ಇವತ್ತು ಸರ್ಕಾರದವರು ಇಲ್ಲ. ಎಲ್ಲೋ ಒಂದು ಕಡೆಗೆ ಸಚಿವ ಸಂಪುಟದ ಉಪ ಸಮಿತಿಯನ್ನು ಮಾಡಿ, ನಿರ್ವಹಣೆ ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಮಾತ್ರ ನಿಮಗೆ help ಆಗುತ್ತದೆ ಎನ್ನತಕ್ಕಂಥ ಮಾತನ್ನ ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿ ಇರತಕ್ಕಂಥ ಕಾರ್ಯಕ್ರಮ 'ನಿರಂತರ ಜ್ಯೋತಿ', DPAP areaದಲ್ಲಿ ಇರತಕ್ಕಂಥ ಎಲ್ಲಾ ತಾಲ್ಲೂಕುಗಳನ್ನೂ ಕೂಡ, ಮಾಲೂರಿನಿಂದ ಪ್ರಾರಂಭವಾಗಿ 120 ತಾಲ್ಲೂಕುಗಳಲ್ಲಿ ಇವತ್ತು 'ನಿರಂತರ ಜ್ಯೋತಿ' ಕಾರ್ಯಕ್ರಮ ಮಾಡುತ್ತಿದ್ದೀರಿ. ನಾನು ಒಂದು ಮಾತನ್ನು ಹೇಳುತ್ತೇನೆ, 'ನಿರಂತರ ಜ್ಯೋತಿ' ಎಂದರೆ ಜನರೇನು ದಡ್ಡರಲ್ಲ, 'ನಿರಂತರ ಜ್ಯೋತಿ' ಎಂದು ನೀವು ಹೆಸರಿಟ್ಟುಕೊಂಡಿರಬಹುದು, ಅದಕ್ಕೆ englishನಲ್ಲಿ 'System Improvement' ಎಂದು ಹೇಳುತ್ತಾರೆ. System improvement ಎಂದರೆ ಹೊಸ lines ಹಾಕುತ್ತೀರಿ, transformers ಕೊಡುತ್ತೀರಿ, ಅದನ್ನು ಬಿಟ್ಟರೆ ಬೇರೇನೂ ಇಲ್ಲ. ಇವತ್ತು ನೀವು DPAPಯ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಕೇಂದ್ರೀಕೃತ ಮಾಡಿದ್ದೀರಿ. ಡಾ: ನಂಜುಂಡಪ್ಪ

ವರದಿ ಪ್ರಕಾರ ಹಿಂದುಳಿದಿರತಕ್ಕಂಥ ತಾಲ್ಲೂಕುಗಳಲ್ಲಿ, ಎಲ್ಲಿ ಮಳೆಬೆಳೆ ಕಡಿಮೆ ಆಗುತ್ತದೋ, ಅಂತಹ ತಾಲ್ಲೂಕುಗಳಲ್ಲಿ ಇದನ್ನು ಜಾರಿಗೆ ತರುತ್ತಿದ್ದೀರಿ. ಇವತ್ತು ನಿಮ್ಮ existing system ಎಲ್ಲಾ over-loading ಆಗಿರುವಾಗ ನೀವು 'ನಿರಂತರ ಜ್ಯೋತಿ' ಜಾರಿಗೆ ತಂದರೆ ಏನೋ ಬದಲಾವಣೆ ಆಗುತ್ತದೆ ಎಂದುಕೊಂಡರೆ, ಆ ಬದಲಾವಣೆಯನ್ನು ನೀವು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಗುಜರಾಜ್‌ನಲ್ಲಿ ಆಗಿರಬಹುದು. ಗುಜರಾತ್‌ನವರು ನಮ್ಮ ನಿಮ್ಮಂತೆ ದಡ್ಡರಲ್ಲ. ಪ್ರತಿವರ್ಷವೂ ಸಹ ಏನೇನು improvement ಮಾಡಬೇಕೋ, ಅದನ್ನು ಬಹಳ systematic ಆಗಿ ಮಾಡಿಕೊಂಡು ಬಂದು ಆಮೇಲೆ, Rural Feeder and Urban Feeder ಎಂದು bifurcate ಮಾಡಿ 24 hours power ಕೊಡತಕ್ಕ ಸಾಧ್ಯತೆಗಳಿವೆ. ನೀವು ಇವತ್ತು ಯಾವ transformer ತೆಗೆದುಕೊಳ್ಳಿ, ಯಾವ lines ತೆಗೆದುಕೊಳ್ಳಲಿ, ಎಲ್ಲವೂ over-loading ಆಗಿರಬೇಕಾದರೆ ನಿಮ್ಮ 'ನಿರಂತರ ಜ್ಯೋತಿ' ಎಲ್ಲಿ ಕೆಲಸ ಮಾಡುತ್ತಿದೆ ? ಆದರೆ ಆ ಯೋಜನೆ ತಪ್ಪು ಎಂದು ನಾನು ಹೇಳುವುದಿಲ್ಲ. ಅದರಿಂದ ಏನೂ effect ಆಗುವುದಿಲ್ಲ. ಆ 'ನಿರಂತರ ಜ್ಯೋತಿ' ಕಾರ್ಯಕ್ರಮದ ಅಡಿಯಲ್ಲಿ ನೀವು ಇವತ್ತು ಸುಮಾರು 2100–2200 ಕೋಟಿ ರೂ.ಗಳಷ್ಟು ಖರ್ಚು ಮಾಡುತ್ತಿದ್ದೀರಿ. ಅದನ್ನು ಮಾಡಿ, ಎಲ್ಲಾ ಕಡೆಯೂ ನೀವು ಟೆಂಡರ್ ಕರೆಯತಕ್ಕ ಕೆಲಸ ಮಾಡಿದ್ದೀರಿ. ನೀವು ಎಷ್ಟರ ಮಟ್ಟಿಗೆ ಆ ಕೆಲಸವನ್ನು ಪರಿಪೂರ್ಣವಾಗಿ ಮುಗಿಸುತ್ತೀರೋ ಗೊತ್ತಿಲ್ಲ. ಆದರೂ ಕೂಡ ಅದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಆ ಕೆಲಸ ಆದರೆ, at least system improvement ಆಗುತ್ತದೆ, ಸ್ವಲ್ಪ voltage stabilise ಆಗುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ವಿಚಾರವನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿ ವಿದ್ಯುಚ್ಛಕ್ತಿ ವಿಚಾರದಲ್ಲಿ, ಇದು ಪ್ರಚಾರವೋ, ಅಪಪ್ರಚಾರವೋ ಪ್ರಶ್ನೆಯಲ್ಲ. ಆರ್ಥಿಕ ಕುಸಿತ ಆಗಿರುವಂತಹ ಈ ಸಂದರ್ಭದಲ್ಲಿ ರಾಜ್ಯವನ್ನು ನಡೆಸತಕ್ಕ ಜನರಾದ ನೀವು ಯಾವ ರೀತಿಯಾಗಿ, ಯಾವ ದಿಕ್ಕಿನಲ್ಲಿ, ಯಾವ ವಿಶ್ವಾಸವನ್ನಿಟ್ಟುಕೊಂಡು ಇವತ್ತು ಮುಂದಕ್ಕೆ ತೆಗೆದುಕೊಂಡು ಹೋಗಬೇಕು

ಎನ್ನುವುದನ್ನು ವಿಚಾರ ಮಾಡಬೇಕಾಗಿತ್ತು. ಆರ್ಥಿಕ ಕುಸಿತ ಆದಂತಹ ಸಂದರ್ಭದಲ್ಲಿ ಬೆಂಗಳೂರಿನಂತಹ, ಕರ್ನಾಟಕದಂತಹ, ಮಾಹಿತಿ ತಂತ್ರಜ್ಞಾನಕ್ಕೆ, ಜೈವಿಕ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ಇರುವಂತಹ ಸಂದರ್ಭದಲ್ಲಿ, ಇವತ್ತು ವಿಶ್ವದಲ್ಲಿ ಇರತಕ್ಕಂಥ ಕೈಗಾರಿಕೆಗಳನ್ನು ಆಕರ್ಷಣೆ ಮಾಡಬೇಕೆಂದರೆ, ನಿಮಗೆ ಮೂಲಭೂತವಾಗಿ ಬೇಕಾಗಿರತಕ್ಕಂಥದ್ದು ವಿದ್ಯುಚ್ಛಕ್ತಿ, information technology industriesಗೆ, ಅದು hardware ಇರಲಿ ಅಥವಾ software ಇರಲಿ, ಅದಕ್ಕೆ ವಿದ್ಯುಚ್ಛಕ್ತಿ ಬೇಕಾಗಿಲ್ಲ. ಅದು ಹೆಚ್ಚಿಗೆ ಇಲ್ಲದಿದ್ದರೂ ಅವು ನಡೆಯುತ್ತವೆ. ಆದರೆ ಬೇರೆ sectorನವರಿಗೆ ನೀವು ವಿದ್ಯುಚ್ಛಕ್ತಿಯನ್ನು ಕೊಡದಿದ್ದರೆ ಯಾರು ಬರುತ್ತಾರೆ ? ವಿದ್ಯುಚ್ಛಕ್ತಿಯನ್ನು ನೀವು ಅವರಿಗೆ ಈಗ ಕೊಡಲಿಕ್ಕಾಗುತ್ತಿಲ್ಲ. ಇವತ್ತು ಬಹಶಃ FKCCIನವರು ಅಥವಾ industries ಗೆ ಸಂಬಂಧಪಟ್ಟವರನ್ನು ಕೇಳಿ, ಇವತ್ತು ಕರ್ನಾಟಕಕ್ಕೆ ಬರಬೇಕಾದಂತಹ ಜನರೆಲ್ಲಾ ವಾಪಸ್ ಹೋಗುತ್ತಿದ್ದಾರೆ. ಇವತ್ತು 2 ಲಕ್ಷ ಕೋಟಿ ರೂ.ಗಳ ಬಂಡವಾಳ ಹೂಡುವುದಕ್ಕೆ ಸುಮಾರು 500 ಜನ ಖಾಸಗಿಯವರು ಮುಂದೆ ಬಂದಿದ್ದಾರೆ ಎಂದು ಪಟ್ಟಿ ಮಾಡಿದ್ದೀರಿ, ನಿಜ, ಕರ್ನಾಟಕಕ್ಕೆ ಬರಬೇಕು, ಕೈಗಾರಿಕೆಯನ್ನು ಮಾಡಬೇಕು ಎಂಬ ಇಚ್ಛೆ ಅವರಿಗಿದೆ. ಆದರೆ ನೀವು ಮೂಲಭೂತವಾದಂತಹ ಸೌಕರ್ಯ ಕೊಡದಿದ್ದರೆ, ಯಾವ ರೀತಿಯಾಗಿ ಪ್ರಯೋಜನ ಆಗುತ್ತದೆ ? ಆರ್ಥಿಕ ಕುಸಿತ ಆಗಿರಬೇಕಾದಾಗ ಇಡೀ ದೇಶ, ಇಡೀ ಪ್ರಪಂಚದ ಅನೇಕ ಭಾಗಗಳು ಇವತ್ತು ಬೆಂಗಳೂರಿನ ಕಡೆಗೆ ನೋಡುವಂತಹ ಸಂದರ್ಭದಲ್ಲಿ ನೀವು ಮೂಲಭೂತವಾಗಿ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ guarantee ಯನ್ನು ಕೊಡದಿದ್ದರೆ, ಕೊನೆಯ ಪಕ್ಷ ನಿಮಗೆ 7 ಗಂಟೆಯಾಗಲಿ, 10 ಗಂಟೆಯಾಗಲಿ ವಿದ್ಯಚ್ಛಕ್ತಿ ಕೊಡುತ್ತೇವೆ ಎನ್ನುವ ವಿಶ್ವಾಸವನ್ನು ಅವರಲ್ಲಿ ಮೂಡಿಸದಿದ್ದರೆ, ಕೈಗಾರಿಕೆ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವೇ ? ಕೈಗಾರಿಕೆಗಳ ಬಗ್ಗೆ ಇವತ್ತು ಸಾಕಷ್ಟು ವ್ಯಾಖ್ಯಾನವಾಗುತ್ತಿದೆ. ಇವತ್ತು ಸಿಕ್ಕಾಪಟ್ಟೆ acquisitions ಮಾಡುತ್ತಿದ್ದೀರಿ. ನಾನು acquisition ಮಾಡುವುದು ಅಥವಾ ಬಿಡುವುದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೈಗಾರಿಕೆಗಳು

ಇವತ್ತು ಬರಬೇಕಾದಾಗ ಮೂಲಭೂತವಾಗಿ ಭೂಮಿ ಎಷ್ಟು ಪ್ರಾಮುಖ್ಯವೋ, ಅಷ್ಟೇ ವಿದ್ಯುಚ್ಛಕ್ತಿ ಕೂಡ ಪ್ರಾಮುಖ್ಯವಾದುದು. ಆ ವಿಶ್ವಾಸವನ್ನು ಮೂಡಿಸತಕ್ಕಂಥ ಕೆಲಸವನ್ನು ಮಾಡಿದಾಗ ಮಾತ್ರ, ಕೈಗಾರಿಕೆಗಳಲ್ಲಿ ಏನಾದರೂ ಕೂಡ ಇವತ್ತು ಬದಲಾವಣೆಯನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳುತ್ತೇನೆ. ನೀವು ಎಷ್ಟೇ ಮಾತನಾಡಿದರೂ ಕೂಡ, ನಿಮ್ಮ ಇವತ್ತಿನ peak load ಅನ್ನು ನಾನು ಒಪ್ಪುತ್ತೇನೆ. ಮಾನ್ಯ ಬಚ್ಚೇಗೌಡರು ಇದನ್ನು ಪ್ರಸ್ತಾಪ ಮಾಡಿದರು. ನಮ್ಮಲ್ಲಿ ಒಟ್ಟಾರೆ ಇರತಕ್ಕಂಥ ಸಾಮರ್ಥ್ಯ ಏನು ? ನಮಗೆ ಸುಮಾರು 9 ಸಾವಿರ ಮೆಗಾವ್ಯಾಟ್ ವಿದ್ಯುತ್ತಿನ ಅವಶ್ಯಕತೆ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಇರತಕ್ಕಂಥ ಉತ್ಪಾದನಾ ಸಾಮರ್ಥ್ಯ ಮೂಲಭೂತವಾಗಿ 5700–5800 ರಷ್ಟು ಇದೆ. ಆದರೆ ಪ್ರಶ್ನೆ ಬಂದಿರತಕ್ಕಂಥದ್ದು ಏನೆಂದರೆ, ..

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ...

ಶ್ರೀ ಟಿ.ಬಿ. ಜಯಚಂದ್ರ : ದಯವಿಟ್ಟು ನಾನು ಹೇಳುವುದನ್ನು ಕೇಳಿ, ನಾನು ನಿಮಗೆ convince ಮಾಡುವುದಕ್ಕೋಸ್ಕರವೇ ಇದನ್ನು ಹೇಳಿಬಿಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಮ್ಮಲ್ಲಿ ಸುಮಾರು 7375 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಇದೆ. ಆದರೆ ಒಂದಕ್ಕೆರಡರಷ್ಟು ಬೇಡಿಕೆ ಇರತಕ್ಕದ್ದು ತಮಗೆ ಗೊತ್ತಿದೆ. ಪೂರ್ತಿಯಾಗಿ 24 hours current ಕೊಡಲಿಕ್ಕೆ ನಮ್ಮಿಂದ ಆಗುತ್ತಿಲ್ಲ. ಅದನ್ನು ಕೊಡಬೇಕಾದರೆ ಇನ್ನೂ ಎಷ್ಟೋ ವಿದ್ಯುತ್ ಬೇಕಾಗುತ್ತದೆ. ಅದನ್ನು ಲೆಕ್ಕ ಹಾಕಬೇಕಾಗಿದೆ. ತಾವೇ ಹೇಳಿಕೊಂಡು ಬಂದಿರತಕ್ಕಂಥ ಪ್ರಕಾರವೇ ಇದನ್ನು ಹೇಳುತ್ತಿದ್ದೇನೆ. ಅದು ನಿಮಗೂ ಗೊತ್ತು, ಎಲ್ಲರಿಗೂ ಗೊತ್ತು, ತಾವು 5 ಸಾವಿರ ಮೆಗಾವ್ಯಾಟ್ ಎಂದಿರಿ...

ಶ್ರೀ ಟಿ.ಬಿ. ಜಯಚಂದ್ರ : ಈಗ ಪ್ರಶ್ನೆ ಬಂದಿರತಕ್ಕಂಥದ್ದು ....

ಶ್ರೀ ಬಿ.ಎನ್. ಬಚ್ಚೇಗೌಡ : KPTCL 5511 ನಮ್ಮದು, IPP ಇತ್ಯಾದಿಗಳೆಲ್ಲಾ ಸೇರಿ ಒಟ್ಟು 7135 ಮಿಲಿಯನ್ ಯೂನಿಟ್ಸ್.

ಶ್ರೀ ಟಿ.ಬಿ. ಜಯಚಂದ್ರ : ನೀವು ಕುಳಿತುಕೊಂಡರೆ ನಾನು ಎಲ್ಲವನ್ನೂ ಹೇಳುತ್ತೇನೆ. ನಿಮಗೆ ತೊಂದರೆಯಾಗುತ್ತಿದೆ. ಅದಕ್ಕಾಗಿಯೇ ನಾನು ನಿಮಗೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿ ಎಂದು ಹೇಳಿದೆ. ಇವತ್ತು ನಿಮಗೆ 5700 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಿಕ್ಕೆ ಸಾಮರ್ಥ್ಯವಿದೆ. ಆದರೆ ಅಷ್ಟು ಉತ್ಪತ್ತಿಯಾಗುತ್ತಿದೆಯೇ ? ಇವತ್ತು ಅದನ್ನು distribution ಮಾಡುತ್ತಿದ್ದೀರಾ? ಮಾರ್ಚ್‌ನಿಂದ ಆಗಸ್ಟ್‌ವರೆಗೂ ಐದು ತಿಂಗಳು ನೀವು ಯಾವ ರೀತಿಯಾಗಿ peak loadನಲ್ಲಿ ಕರೆಂಟ್ ಕೊಡುತ್ತೀರಿ? Maximum power utilize ಆಗುವುದು ಈಗಲೇ, ನಿಮಗೆ ಕನಿಷ್ಟವೆಂದರೂ 5300 ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಕೊನೆಯ ಪಕ್ಷ ನೀವು ಹೇಳಿರುವ ಪ್ರಕಾರ ಬೆಂಗಳೂರಿಗೆ 22 ಗಂಟೆ, ಬೇರೆ ಬೇರೆ ಪ್ರದೇಶಗಳಲ್ಲಿ 20 ಗಂಟೆ, ಹಳ್ಳಿಗಳಲ್ಲಿ 6 ಗಂಟೆ ವಿದ್ಯುತ್ ಕೊಡಬೇಕೆಂದರೆ ನಿಮಗೆ ಇವತ್ತು 5300 ಮೆಗಾವ್ಯಾಟ್ ಬೇಕಾಗುತ್ತದೆ. ನೀರಿನಿಂದ ಉತ್ಪಾದನೆಯಾಗತಕ್ಕಂಥ Hydel Electricityಯಿಂದ ಇವತ್ತು ನಿಮ್ಮ ಪರಿಸ್ಥಿತಿ ಉತ್ತಮವಾಗಿದೆ. ಆದರೆ ನೀವು ಎಲ್ಲೋ ಒಂದು ಕಡೆಗೆ generation ಕಡೆಗೂ ಸಹ ಗಮನವನ್ನು ಕೊಡಬೇಕು. Generation ಪ್ರಶ್ನೆ ಬಂದಾಗ, ನಿನ್ನೆ ಎಲ್ಲಾ ಸಾಕಷ್ಟು ಮಾತನಾಡಿದ್ದೇವೆ, ಟೀಕೆಗಳನ್ನೂ ಮಾಡಿದ್ದೇವೆ. ಇವತ್ತು ನೀವು ಮಾಡಲಿಲ್ಲ, ಅವರು ಮಾಡಲಿಲ್ಲ, ನೀವು ಮಾಡಿದ್ದರೆ ಸರಿ ಹೋಗುತ್ತಿತ್ತು ಎಂಬ ಮಾತುಗಳು ಕೇಳಿಬಂದವು. ದಯವಿಟ್ಟು ಒಂದು ಮಾತನ್ನು ಅರ್ಥ ಮಾಡಿಕೊಳ್ಳಬೇಕು. ಯಾರೇ ವಿದ್ಯುಚ್ಛಕ್ತಿ ವಿಚಾರದಲ್ಲಿ ಯೋಜನೆಗಳನ್ನು ಮಾಡಿದರೂ ಕೂಡ, ಅದರ ಅನುಷ್ಠಾನ ಆಗಬೇಕಾದಾಗ ಅನೇಕ ವರ್ಷಗಳಾಗುತ್ತದೆ. ಮಾಯಾಮಂತ್ರ ಮಾಡುವುದಕ್ಕೆ ಯಾರ ಕೈಯ್ಯಲ್ಲೂ ಸಾಧ್ಯವಿಲ್ಲ. ಬಹುಶಃ ನಾವು ಹಿಂದೆ ಕೊಜೆಂಟ್ರಿಕ್ಸ್, ಎನ್ರಾನ್ ಕಂಪನಿಗಳನ್ನು ಹೊರಗಡೆ ಓಡಿಸದಿದ್ದರೆ, ಇವತ್ತು ಪರಿಸ್ಥಿತಿ ಸುಧಾರಿಸುತ್ತಿತ್ತು ಎಂದು ಕಾಣುತ್ತದೆ. ನೀವು ಇವತ್ತು ಛತ್ತೀಸ್‌ಗಡ್ ಬಗ್ಗೆ ಬಹಳ ವಿಶ್ವಾಸ ಇಟ್ಟುಕೊಂಡಿದ್ದೀರಿ. ಅಲ್ಲಿ ನೀವು ಅಂದುಕೊಂಡಂತೆ ಆಗುತ್ತದೆಯೇ ? ನೀವು ಅಂದುಕೊಂಡಂತೆ ಅದು ಆಗುವುದಕ್ಕೆ ಸಾಧ್ಯವೇ ಇಲ್ಲ. ಹಣಕಾಸನ್ನು

ಅದರಲ್ಲಿ ತೊಡಗಿಸಬೇಕು. ಆದರೆ ನೀವು ಎಲ್ಲಿ ತೊಡಗಿಸುತ್ತಿದ್ದೀರಿ ? ಇವತ್ತು ಹಣಕಾಸನ್ನು ತೊಡಗಿಸಬೇಕಾದಂತಹ ಸಂದರ್ಭದಲ್ಲಿ, ಆ ಹಣಕಾಸನ್ನು ಎಲ್ಲಿಂದ ತರುತ್ತೀರಿ ಎಂಬುದು ಮುಖ್ಯ ನಿಮ್ಮ generation improve ಆಗದ ಹೊರತು ನೀವೇನು management ಮಾಡುವುದಕ್ಕಾಗುವುದಿಲ್ಲ. Generation ವಿಚಾರದಲ್ಲಿ ಏನಾಗಿದೆ ಎಂಬ ಬಗ್ಗೆ ಸೂಕ್ಷ್ಮವಾಗಿರತಕ್ಕ ವಿಚಾರವೊಂದನ್ನು ಹೇಳುತ್ತೇನೆ. ನಿಮ್ಮ ಅಂಕಿ ಅಂಶದ ಪ್ರಕಾರ ಇವತ್ತು ನಿಮಗೆ sources ಯಾವುದು ಎಂದರೆ, wind power, hydro power, co-generation, bio-mass and waves energy. ಈ ವರ್ಷ ನಿಮ್ಮ ಯೋಜನೆ ಪ್ರಕಾರವೇ 2009-10ಕ್ಕೆ 719 ಮೆಗಾವ್ಯಾಟ್ ಉತ್ಪತ್ತಿ ಆಗಬೇಕಾಗಿತ್ತು. ಅದು ಆಗುತ್ತಿದೆಯೇ ? ಇದೆಲ್ಲಾ system ಇರತಕ್ಕದ್ದು ಈ ರಾಜ್ಯದಲ್ಲೇ, ಇವೆಲ್ಲಾ ನಿಮ್ಮ ಕಾರ್ಯವ್ಯಾಪ್ತಿಯಲ್ಲಿ ಬರತಕ್ಕದ್ದೇ. ಈ ವರ್ಷಕ್ಕೆ 700 ಮೆಗಾವ್ಯಾಟ್‌ಗೂ ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕೆನ್ನುವ ನಿಮ್ಮ ನಿರೀಕ್ಷೆ ಏಕೆ ಈಡೇರಿಲ್ಲ ? ಎಂಬ ಬಗ್ಗೆ ಏನಾದರೂ ನೀವು ಚಿಂತೆ ಮಾಡಿದ್ದೀರಾ ? ಇದೆಲ್ಲದಕ್ಕೂ ಕೂಡ ನೀವು ನಿಮ್ಮ power purchase agreement ಪ್ರಕಾರ 2.85 ರೂ. ಕೊಡುತ್ತಿದ್ದೀರಿ. ನೀವು ಹೊರಗಡೆಯಿಂದ ಟಾಟಾದಿಂದಲೋ, ಜಿಂದಾಲ್‌ನಿಂದಲೋ ಬೇಕಾದರೆ 4.50 ರೂ.ಗಳ ರೇಟ್ ಕೊಟ್ಟು ಕೊಂಡುಕೊಳ್ಳುತ್ತೀರಿ, ಏಕೆ ? ಇವರಿಗೆ ಕೊಡಲಿಕ್ಕಾಗುವುದಿಲ್ಲವೇ ? ಇವರಿಗೆ ಉತ್ತೇಜನ ಕೊಡುವುದಕ್ಕಾಗುವುದಿಲ್ಲವೇ? Power purchase agreement ಇತ್ತು ಎನ್ನುವುದಾದರೆ, ಬೇರೆ ರೀತಿಯಲ್ಲಿ ಅವರಿಗೆ ಪ್ರೋತ್ಸಾಹ ನೀಡಿ, maximum utilisation ಮಾಡಿ production ಮಾಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೇ ? ನೀವು ನಿಮ್ಮ ಕೈಯಲ್ಲಿ ಇರುವುದನ್ನೇ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ, ಎಷ್ಟರಮಟ್ಟಿಗೆ ಇವತ್ತು ನೀವು generation ಅನ್ನು improvement ಮಾಡಲಿಕ್ಕೆ ಸಾಧ್ಯ ? ಖಾಸಗಿ ಬಂಡವಾಳಕ್ಕೆ ಹೆಚ್ಚು ಒತ್ತು ಕೊಡುತ್ತೇವೆ ಎನ್ನುವಂತಹ ಮಾತನ್ನು ಬಿ.ಜೆ.ಪಿ.ಯ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ನೀವು ಏನು ಮಾಡುತ್ತಿದ್ದೀರಿ ? ನಿಮ್ಮ ಕೈಕೆಳಗೆ ಇರತಕ್ಕದ್ದರಲ್ಲಿ ನಿಮಗೆ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ ಹೇಗೆ ? ಮುಂದಿನ ಐದು

1.50 ಪಿ.ಎಂ.

ವರ್ಷಗಳಲ್ಲಿ 3500 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಈ ಸಂಪನ್ಮೂಲದಿಂದಲೇ ತರುತ್ತೇವೆ ಎನ್ನುವ ನಿರೀಕ್ಷೆಯನ್ನು ನೀವು ಇಟ್ಟುಕೊಂಡಿರುವಾಗ, ಇದನ್ನು ಮಾಡಲಿಕ್ಕೆ ಸಾಧ್ಯವಿದೆ. ಏಕೆ ಮಾಡುವುದಕ್ಕಾಗುವುದಿಲ್ಲ ಎನ್ನುವುದಕ್ಕೆ ನೀವು ಯೋಚನೆ ಮಾಡಿ. ನಾನು ಒಂದೊಂದಕ್ಕೂ ಕೂಡ ಅಂಕಿ ಅಂಶಗಳನ್ನು ಕೊಟ್ಟು ಹೇಳಬಲ್ಲೇ. ಕಾಲಾವಕಾಶ ಇಲ್ಲದಿರುವುದರಿಂದ ಖಂಡಿತವಾಗಿಯೂ ಅದನ್ನು ಮಾಡಲಿಕ್ಕಾಗುವುದಿಲ್ಲ. ಅದೆಲ್ಲಕ್ಕಿಂತ ಹೆಚ್ಚಾಗಿ ಬಹಳ ಮುಖ್ಯವಾದುದು ಏನೆಂದರೆ, ನಿಮ್ಮ power projects ಯಾವ್ಯಾವ ಹಂತದಲ್ಲಿವೆ ? ಏಕೆಂದರೆ, ನಾವು ಪವರ್ ಪ್ರಾಜೆಕ್ಟ್ಸ್ ಬಗ್ಗೆ ಮಾತನಾಡುತ್ತೇವೆ, ನೀವು ನಿಮ್ಮ ಎಲ್ಲಾ ಯೋಜನೆಗಳಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದೀರೆನ್ನುವುದನ್ನು ನೋಡಬೇಕು. ನಿಮ್ಮ RTPS unit – 8 ರ generation ಈ ವರ್ಷದ ಇನ್ನೊಂದು ತಿಂಗಳಿಗೆ ಬರಬೇಕು, ಅಲ್ಲ, November 2009ಗೆ ನಿಮ್ಮ ಗುರಿ ಇದ್ದದ್ದು, 250 ಮೆ.ವ್ಯಾ. ಬರಬೇಕಾಗಿತ್ತು. ಇಷ್ಟಾದರು ಹೇಳುತ್ತೇನೆ ತಿಳಿದುಕೊಳ್ಳಿ, what problem you are facing? ಎಂದು. ನಿಮ್ಮ ash handling ಇದೆಯಲ್ಲಾ ಅದನ್ನು ನೀವು ಇನ್ನು ತೀರ್ಮಾನ ಮಾಡುವುದಕ್ಕಾಗಲಿಲ್ಲ. ಅದನ್ನು ಮಾಡದ ಹೊರತು ಪ್ರೊಡಕ್ಷನ್ ಮಾಡುವುದು ಕಷ್ಟವಿದೆ. ಇದು ನಿಮ್ಮ RTPS unit – 8ರ ಗತಿ. RTPS unit – 2ರಲ್ಲಿ 500 ಮೆ.ವ್ಯಾ. ನಿರೀಕ್ಷೆಯನ್ನಿಟ್ಟುಕೊಂಡಿದ್ದೀರಿ, 2010ಕ್ಕೆ ಮುಗಿಸುತ್ತೇವೆನ್ನುವ ವಿಶ್ವಾಸವನ್ನಿಟ್ಟುಕೊಂಡಿದ್ದೀರಿ. ಇನ್ನು ash handling ಬಗ್ಗೆ coal ತರಿಸುವ ಬಗ್ಗೆ ಇನ್ನು critical ಆಗಿ ಇದೆ, ನೀವು ಅದನ್ನು ತೀರ್ಮಾನ ಮಾಡುವುದಕ್ಕಾಗಲಿಲ್ಲ. ಅದರ ಜೊತೆಗೆ RTPS unit –3 ಯಲ್ಲಿ ನಿಮ್ಮ ನಿರೀಕ್ಷೆ 500 ಮೆ.ವ್ಯಾ. ಅದಕ್ಕೆ ಮುಖ್ಯಮಂತ್ರಿಗಳು ಹೋದ ವರ್ಷ ಫೌಂಡೇಷನ್ ಕೂಡ ಹಾಕಿದರು. ಆದರೆ ಫೌಂಡೇಷನ್ ಹಾಕಿದ ತಕ್ಷಣ ಜನರಿಗೇನು ವಿಶ್ವಾಸ ಬರುತ್ತದೆ, ಆಯಿತು, ಮುಖ್ಯಮಂತ್ರಿಗಳು ಬಂದು ಫೌಂಡೇಷನ್ ಹಾಕಿದರು, ಇನ್ನೇನು ನಮಗೆ ಬಂದು ಬಿಡುತ್ತದೆನ್ನುವ ವಿಶ್ವಾಸ

ಬರುತ್ತದೆ, ಆದರೆ ಅದರ ಕ್ಲಿಯರೆನ್ಸ್ ಏನಾದರು ಆಗಿದೆಯಾ? Ministry of Energy ಯಿಂದ ಏನಾದರು ಕ್ಲಿಯರೆನ್ಸ್ ಆಗಿದೆಯಾ? ಇನ್ನು ಕ್ಲಿಯರೆನ್ಸ್ ಆಗಿಲ್ಲ, ಮತ್ತೆ ನಾವು ಇನ್ನು ಯಾವ ರೀತಿಯಾಗಿ ನಿರೀಕ್ಷೆ ಮಾಡಬಹುದು. For Yeramarus Super Critical Thermal Power Station foundation was again laid by the Chief Minister. Clearance from the Ministry of Energy is expected. This is one thing. For Yedlapur Super Critical Thermal Power Station clearance is awaited. ಚತ್ತೀಸ್‌ಘಡ್ ಅದು ದೊಡ್ಡ ಕತೆ ಬಿಡಿ, ಅಲ್ಲಿ 10,000 ಕೋಟಿ ರೂ.ಗಳನ್ನು ತೊಡಗಿಸಿ ಮಾಡಬೇಕೆಂದು ಮಾಡಿದ್ದೀರಿ, ನಾನು ಆ ಉದ್ದೇಶ ತಪ್ಪೆಂದು ಹೇಳುವುದಿಲ್ಲ, ನಿಮ್ಮ ಗುರಿ ತಪ್ಪೆಂದು ಹೇಳುವುದಿಲ್ಲ, ಕಾರಣವೇನೆಂದರೆ, ನಾವು Enron ಅನ್ನು, Cogentrix ಅನ್ನು ತರುವಂಥ ಸಂದರ್ಭದಲ್ಲಿ ನಾನು ಕೂಡ ವಿರೋಧ ಪಕ್ಷದ ನಾಯಕನಾಗಿ ಕುಳಿತಿದ್ದಂಥ ಸಂದರ್ಭದಲ್ಲಿ Enron ಮತ್ತು Cogentrix ಅನ್ನು ರಾಜ್ಯದಿಂದ ಕಾಲ್ತೆಗೆಯುವುದು ಬೇಡವೆನ್ನುವ ಆಸೆಯನ್ನು ಇಟ್ಟುಕೊಂಡಿದ್ದವರು ನಾವು. ಬಹುಶ: ಅವರು ಆ ರಾಜ್ಯದಿಂದ ಕಾಲ್ತೆಗೆಯದೇ ಇದ್ದಿದ್ದರೆ ಬಹುಶ: ಪರಿಸ್ಥಿತಿ ಬೇರೆ ಇರುತ್ತಿತ್ತು. ಆದರೆ ಅದು ಅದ್ಯಾವ ಕಾರಣಕ್ಕೆ ಹೋಯಿತೋ ಏನೊ ರಾಜಕೀಯವಾಯಿತೆನ್ನುವ ಪ್ರಶ್ನೆ ಬೇಡ. ಆದರೆ ಇವತ್ತು ಸಫರ್ ಆಗುತ್ತಿರುವುದು ರಾಜ್ಯವೆನ್ನುವುದನ್ನು ನಾವು ಒಪ್ಪಲೇ ಬೇಕು. ಇವತ್ತು ಚತ್ತೀಸ್‌ಘಡದಲ್ಲಿ ನಿಮಗೇನಾಗಿರುವುದು? ಇನ್ನು preliminary stage, DPR ಮಾಡುತ್ತಿದ್ದೀರಿ, Memorandum of Understanding ಆಗಿದೆ, ಈ Memorandum of Understanding reality ಆಗಿ ಬಂಡವಾಳವನ್ನು ಹಾಕಬೇಕಾದಾಗ, how many years it takes? God only knows. ಇವತ್ತು ನಮ್ಮ Energy Department ನಲ್ಲಿ ಆ steps ಅನ್ನು ತೆಗೆದುಕೊಳ್ಳುತ್ತಾರೆ, I appreciate their stand. ಆ ಕುರ್ಚಿನಲ್ಲಿ ನೀವು ಕುಳಿತಿರಲಿ ಅಥವಾ ನಾವು ಕುಳಿತಿರಲಿ ಅವರು ಅವರ ಕೆಲಸವನ್ನು ಮಾಡುತ್ತಿರುತ್ತಾರೆ, ಆದರೆ ನೀವು ಚಾಲನೆಯನ್ನು ಕೊಡಬೇಕೇ? ನಿಮ್ಮಲ್ಲಿ

ಇವತ್ತು ಚಾಲನೆ ಕೊಡತಕ್ಕಂಥ ಸಾಮರ್ಥ್ಯ ಇಲ್ಲವಲ್ಲಾ. ಚತ್ತೀಸ್‌ಘಡಕ್ಕೆ ಸಂಬಂಧಿಸಿದಂತೆ ಇನ್ನು ಎಲ್ಲಾ clearances ಬರಬೇಕಾದರೆ, I do not know how many years it requires to start that project. Shivanasamudram seasonal power scheme ಅದು ಕೂಡ ಕಮಿಷನ್ ಆಗಿ 3 ವರ್ಷಕ್ಕೊ 4 ವರ್ಷಕ್ಕೊ, 2012-13ಕ್ಕೆ ಬರುತ್ತದೆಂದು ಹೇಳಲಾಗುತ್ತಿದೆ, ಇದುವರೆಗೆ Memorandum of Understanding ಅಷ್ಟೆ, ಇನ್ನು Ministry of Energyಯಿಂದ clearance ಬರಬೇಕಾಗಿದೆ. ಗುಂಡ್ಯಾ ಯೋಜನೆ, ಬಹಳ ಮಹತ್ವವಾದ ಯೋಜನೆ. ಇವತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಬೆಳಿಗ್ಗೆ ಆದರೆ ಗಲಾಟೆ ನಡೆಯುತ್ತಲೇ ಇದೆ. ಯಡಿಯೂರಪ್ಪನವರದು ಒಂದು statement, ಈಶ್ವರಪ್ಪನವರದು ಒಂದು statement, ಬೆಳಿಗ್ಗೆ ಕೇಂದ್ರ ಸಚಿವರದು ಒಂದು statement, ಇದು ಏನು ಸ್ವಾಮಿ? ಏನಾಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ? ಇವತ್ತು ಗುಂಡ್ಯಾ ಯೋಜನೆ, ಪರಿಸರಕ್ಕೆ ತೊಂದರೆಯಾಗುತ್ತದೆ, ಧಕ್ಕೆಯಾಗುತ್ತದೆ, ನಾವು ಕೊಡುವುದಿಲ್ಲವೆನ್ನುವ ಮಾತನ್ನು Environment Minister ಹೇಳುತ್ತಾರೆ, ಅದಕ್ಕೆ ನೀವು ಆತುರದಲ್ಲಿ ಹೋಗಿ ಮುಖ್ಯಮಂತ್ರಿಗಳ ಕೈಯಲ್ಲಿ ಪೌಂಡೇಷನ್ ಹಾಕಿಸುತ್ತೀರಿ. ಮುಖ್ಯಮಂತ್ರಿಗಳು ಹೋಗಿ ಪೌಂಡೇಷನ್ ಹಾಕಿದರೆಂದರೆ, ಒಂದು ವಿಶ್ವಾಸ, ಆಯಿತು ಇವತ್ತು ಹಾಕಿದರೆ, ನಾಳೆ ಕೆಲಸ ಪ್ರಾರಂಭವಾಗುತ್ತದೆನ್ನುವ ಮಟ್ಟಕ್ಕೆ ಇರಬೇಕು. ನಿಮಗೆ ಇನ್ನು ಕ್ಲಿಯರೆನ್ಸ್ ಬಂದಿಲ್ಲ, environment clearance ಬಂದಿಲ್ಲ. ಇವತ್ತು ಗುಂಡ್ಯಾ ಯೋಜನೆಯಿಂದ ನಮಗೆ ಇಷ್ಟು ವಿದ್ಯುತ್ ಬರುತ್ತದೆ ಎಂದು anticipate ಮಾಡಿ, ಅದು ನಮ್ಮ ಯೋಜನೆ, ನಮ್ಮ ಗುರಿ ಎಂದು ಹೇಳುತ್ತೀರಿ ಎಲ್ಲಿ ಸಾಧ್ಯವಾಗುತ್ತದೆ? ನಾನು ಒಂದು ಮಾತನ್ನು ಹೇಳುತ್ತೇನೆ, ಗುಂಡ್ಯಾ ವಿಚಾರದಲ್ಲಿ ಮಾತ್ರ, ಸುರೇಶ್‌ಕುಮಾರ್‌ರವರೆ, ನೀವು ತುಮಕೂರಿನ ಜಿಲ್ಲಾ ಮಂತ್ರಿಗಳು, ಇವತ್ತು ನಮ್ಮ ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ, ನೀರು ಹೆಚ್ಚು ಬೇಕಾಗುತ್ತದೆ. ದಯಮಾಡಿ ನಾನು ಒಂದೇ ಸಲಹೆಯನ್ನು ಕೊಡುತ್ತೇನೆ, ನೀವು ಎಲ್ಲವನ್ನೂ ಬಿಡಿ, ನೀವು ವಿದ್ಯುತ್

ವಿಚಾರವನ್ನೂ ಕೈಬಿಡಿ, ಎಲ್ಲವನ್ನೂ ಬಿಡಿ, ಆದರೆ ಎಲ್ಲೋ ಪಶ್ಚಿಮ ಘಟ್ಟದಿಂದ ಹುಟ್ಟುವಂಥ ನೀರು, ಅದು ಡೈವರ್ಟ್ ಆಗಿ ವಾಪಸ್ ನದಿಗೆ ಹೋಗುವುದನ್ನು, ನೀವು ಸಣ್ಣ aqueduct ಮಾಡುವ ರೀತಿಯಲ್ಲಿ ಮಾಡಿ, ಅದನ್ನು ಡೈವರ್ಟ್ ಮಾಡಿದರೆ, ಹೇಮಾವತಿಗೆ 7-8 ಟಿಎಂಸಿ ನೀರು ಬರುತ್ತದೆ. ಚಿಕ್ಕನಾಯಕನಹಳ್ಳಿಗೆ ನೀರು ಕೊಡುತ್ತೇವೆ, ಕುಣಿಗಲ್‌ನ ಎಲ್ಲಾ ಭಾಗಗಳಿಗೆ ನೀರು ಕೊಡುತ್ತೇವೆ ಎನ್ನುವ ನಿಮ್ಮ ಆಸೆ ಇದೆಯಲ್ಲ, ನಾವೇನು ಬೇಡವೆನ್ನುವುದಿಲ್ಲ, ಆದರೆ ಎಲ್ಲಾ ಕಡೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ, ಅದರ ಬಗ್ಗೆ ಏತಕ್ಕೆ ಯೋಚನೆ ಮಾಡಬಾರದು? ಬರೀ ಪವರ್ ಬಗ್ಗೆಯೇ ಯೋಚನೆ ಮಾಡುತ್ತೀರಿ? ಮತ್ತೆ environmentಗೆ ಏನೂ effect ಆಗುವುದಿಲ್ಲ, with small aqueduct 1/2 ಕಿಲೋಮೀಟರ್ aqueduct ಯಿಂದ you can divert 3-4 TMC of water ಎಂದರೆ, ಏಕೆ ತೊಂದರೆಯಾಗುತ್ತದೆ? ತುಮಕೂರು ಜಿಲ್ಲೆಯಲ್ಲಿ ಇವತ್ತು ನೀರಿಗೆ ಕೊರತೆ ಇದೆ, ಆ ಕೊರತೆಯನ್ನು ನೀಗಿಸುವಂಥ ಕೆಲಸವನ್ನು ಮಾಡುವುದಕ್ಕೆ ಇವತ್ತು ಗುಂಡ್ಯಾ ಯೋಜನೆಯನ್ನು ಮಾಡುವುದಕ್ಕೆ ಸಾಧ್ಯವಿದೆ, ಅದರ ಬಗ್ಗೆ ಏತಕ್ಕೆ ಚಿಂತನೆ ಮಾಡುತ್ತಿಲ್ಲ? ನಿಮಗೊಂದು ಪ್ರಶ್ನೆ, ಓ ಫೌಂಡೇಷನ್ ಹಾಕುಬಿಟ್ಟಿದ್ದೇವೆ ಎನ್ನುವುದು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ ಮತ್ತು ವಾರ್ತೆ ಸಚಿವರು): ಈಗ ತುಮಕೂರು, ಈ ಕಡೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರಕ್ಕೂ ಕೂಡ ನೀರು ಬೇಕಾಗಿದೆ, ಅವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಪಶ್ಚಿಮ ಘಟ್ಟ ಭಾಗಕ್ಕೆ ಹೋಗುವ ನೀರನ್ನು ಬಿಟ್ಟು ಈ ಕಡೆ ಪೂರ್ವ ಭಾಗದಲ್ಲಿ ಹರಿಯುವಂಥ ನೀರನ್ನು ಅಲ್ಲಿಂದ ತರಬೇಕೆನ್ನುವ ಸಲಹೆಯನ್ನು ಅವರು ಕೊಟ್ಟಿದ್ದಾರೆ. ಅದರ ಬಗ್ಗೆ ಸದನದಲ್ಲಿ ಎಲ್ಲರೂ ಕೂಡ ಸರ್ವಾನುಮತದಿಂದ ಒಂದು ತೀರ್ಮಾನ ಮಾಡುವುದಾದರೆ, ಈ ಸದನ ಒಪ್ಪಿಗೆ ಕೊಡುವುದಾದರೆ, ಖಂಡಿತವಾಗಲೂ ಕೂಡ ಸುಮಾರು 80 ಟಿಎಂಸಿ ನೀರನ್ನು ಅಲ್ಲಿಂದ ತರುವುದಕ್ಕೆ ಸಾಧ್ಯವಿದೆ ಎಂದು ಪರಮಶಿವಯ್ಯನವರು ಹೇಳಿದ್ದಾರೆ. ಒಂದು

ಟಿಎಂಸಿಯೋ ಎರಡು ಟಿಎಂಸಿಯೋ, ಅಲ್ಲಿಂದ ನೀರನ್ನು ತರುವುದಕ್ಕೆ ಸರ್ವಾನುಮತದ ಒಂದು ತೀರ್ಮಾನ ಮಾಡಿ, ನೀವೆಲ್ಲಾ ನಿಮ್ಮ ಶಾಸಕರನ್ನೆಲ್ಲಾ ಒಪ್ಪಿಸಿ, ನಾವು ರೆಡಿ ಇದ್ದೇವೆ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಸಚಿವರು ಹೇಳಿದಂಥ ಸಲಹೆಯನ್ನು ನಾವು ಖಂಡಿತವಾಗಿಯು ಸ್ವಾಗತಿಸುತ್ತೇವೆ, ಬೇಕಾದರೆ ಸಮುದ್ರಕ್ಕೆ ಹೋಗುವ ನೀರನ್ನು ವಾಪಸ್ ತರೋಣ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಮ್ಮ ಸರ್ಕಾರ ಸಿದ್ಧವಿದೆ.

ಶ್ರೀ ಎನ್. ಜೀವರಾಜ್: ಸರ್, ಜಯಚಂದ್ರರವರು ಬಹಳ ಒಳ್ಳೆಯ ವಿಷಯವನ್ನು ಹೇಳಿದರು, ಈ ಚಿತ್ರದುರ್ಗ, ಕೋಲಾರಕ್ಕೆ ನೀರು ತರಬೇಕೆಂದು, ಏನು ಭದ್ರಾ ಮೇಲ್ದಂಡೆ ಮಾಡಿ ನೀರು ತರುವುದಕ್ಕೆ ಹೊರಟಿದೆ, ನಮ್ಮ ಕ್ಷೇತ್ರದಲ್ಲಿ 70 ಎಕರೆ ಜಾಗ ಅಕ್ವೈರ್ ಆಗಿ ನೀರು ಬರುತ್ತಿದೆ. ಬರುತ್ತಿರುವ ಸಂದರ್ಭದಲ್ಲಿ, ತಮಗೆ ನನ್ನ ರಿಕ್ವೆಸ್ಟ್ ಇಷ್ಟೆ, ಕುಡಿಯುವ ನೀರು ಎನ್ನುವ ಕಾರಣಕ್ಕೆ ನಾವು ಕ್ಷೇತ್ರದ ಜನರೆ ಸುಮ್ಮನಿದ್ದೇವೆ, ಆದರೆ ಅಲ್ಲಿ ರಾಜಕಾರಣ ನಡೆಯುತ್ತಿರುವುದರ ಬಗ್ಗೆ ನನಗೆ ನೋವಿದೆ, ತಮ್ಮ ಪಕ್ಷದ ನಾಯಕರಿದ್ದಾರೆ, ರೇವಣ್ಣನವರು ಇಲ್ಲಿ ಇಲ್ಲ, ನಿಮ್ಮ ಪಕ್ಷ ಮತ್ತು ರೇವಣ್ಣ ಪಕ್ಷದ ನಾಯಕರಿಗೆ, ಇಲ್ಲಿ ಶಾಸಕರು ಕಣ್ಣು ಮುಚ್ಚಿಕೊಂಡು ಸುಮ್ಮನೆ ಕುಳಿತಿದ್ದಾರೆ ಎಂದು ಅಲ್ಲಿ ಹೇಳಿಕೆ ಕೊಡುತ್ತಿರುವಂಥ ಅಲ್ಲಿ ಕೆಳಗಿರುವವರಿಗೂ ಒಂದು ಸಲಹೆ ಕೊಡಿ, ಕುಡಿಯುವ ನೀರಿಗಾಗಿ ಮಾಡುತಿದ್ದಾರೆ, ಇದಕ್ಕಾಗಿ ಶಾಸಕರು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಸ್ವಲ್ಪ ಹೇಳಿಸಿ, ಇಲ್ಲದಿದ್ದರೆ ಅಲ್ಲಿ ನಾವು ಬಹಳ ದೊಡ್ಡ ಆರೋಪಕ್ಕೆ ಗುರಿಯಾಗುತ್ತಿದ್ದೇವೆ, ಇಲ್ಲಿ ನೀವು ನೀರು ಬೇಕೆನ್ನುತ್ತೀರಿ, ನಾವು ಅಲ್ಲಿ ಸುಮ್ಮನೆ ಕುಳಿತರೆ ಆರೋಪವಾಗುತ್ತದೆ, ಅದು ಬಹಳ ಇಕ್ಕಟ್ಟಿನ ಸನ್ನಿವೇಶ.

ಶ್ರೀ ಟಿ.ಬಿ. ಜಯಚಂದ್ರ: ಅಲ್ಲಿ ವಾಸ್ತವಿಕವಾಗಿರುವ ಅಂಶವನ್ನು ತಮಗೆ ಹೇಳಿಬಿಡುತ್ತೇನೆ, ನೀವು ನೀರು ಕೊಡುತ್ತಿರುವ ಪ್ರದೇಶದಿಂದ ಬರುತ್ತಿರುವವರು, ನೀವು ನೀರು ಕೊಡುವುದಕ್ಕೆ ಒಪ್ಪಿಕೊಂಡಿದ್ದೀರಿ ನೀರು ಕೊಡುವುದಕ್ಕೆ ತೊಂದರೆ ಮಾಡುತ್ತಿಲ್ಲ, ತೊಂದರೆ ಮಾಡುತ್ತಿರುವವರು,

ಯಾರು ನೀರು ಬಳಕೆ ಮಾಡುತ್ತಾರೋ ಅವರು ತೊಂದರೆ ಮಾಡುತ್ತಿದ್ದಾರೆ, ತರೀಕೆರೆ ಭಾಗದಲ್ಲಾಗುತ್ತಿದೆ, ಕಾರಣವೇನೆಂದರೆ, ಸಂಘಟನೆಗಳೆಲ್ಲಾ ಹುಟ್ಟಿಕೊಂಡಿವೆ, ಕಾರಣವೇನೆಂದರೆ, ಒಂದು ಪ್ರಚಾರ ಮಾಡಿಬಿಟ್ಟರು..

ಅಧ್ಯಕ್ಷರು: ವಿಷಯಾಂತರ ಬೇಡ.

ಶ್ರೀ ಟಿ.ಬಿ. ಜಯಚಂದ್ರ ಮಾನ್ಯ ಅಧ್ಯಕ್ಷರೆ, ನಾನು ಯಾರಿಗೂ ಯೀಲ್ಡ್ ಆಗುತ್ತಿಲ್ಲ. ನೀವು ಗುಂಡ್ಯಾ ಯೋಜನೆ ವಿಚಾರದಲ್ಲಿ ಇನ್ನೊಂದು ಸಾರಿ National Development Water Agency, Government of India ಅವರು ಒಂದು ಯೋಜನೆ ಮಾಡಿದ್ದಾರೆ. ಅವರು ಈಗಾಗಲೇ ಇಂಟರ್ ಬೇಸಿನ್ ಹಾಗೂ ಇಂಟ್ರಾ ಬೇಸಿನ್ transverse ಗೆ they have given a clearance. ವರಾಯಿ ಬಿಟ್ಟರೆ ನೇತ್ರಾವತಿ ಭಾಗದಲ್ಲಿ ಒಂದು ಭಾಗ, ನೇತ್ರಾವತಿ ಎಂದರೆ 2000 ಟಿಎಮ್‌ಸಿ ವರೆಗೆ ಬರುವುದು ನಮಗೇನು ಬೇಕಾಗುವುದಿಲ್ಲ. ಆದರೆ ಎಲ್ಲೋ ಒಂದು ಕಡೆ ಇಲ್ಲಿ ಈ ಭಾಗದಲ್ಲಿ ಘಟ್ಟದ ಈ ಕಡೆ ಪ್ರದೇಶದಲ್ಲಿ ಹುಟ್ಟಿದಂತಹ ನೀರು ಡೈವರ್ಟ್ ಆಗಿ ಹೋಗುವುದು ನೀವು ತಡೆಗಟ್ಟಿದರೆ environment ಗೆ ಏನೂ effect ಆಗದೆ ನೀವು 3 TMC, 4 TMC, 5 TMC ಬಳಸಿಕೊಂಡು ಮಾಡುವುದಾದರೆ, ಖಂಡಿತವಾಗಿ ಸಹಾಯವಾಗುತ್ತದೆ. ಆ ದೃಷ್ಟಿಯಿಂದ ನೀವು ಯೋಚನೆ ಮಾಡಿ ಎನ್ನತಕ್ಕಂತಹ ಮಾತನ್ನು ಹೇಳಿ, ನೀವು ಅದೆಲ್ಲಕ್ಕಿಂತ ಹೆಚ್ಚಾಗಿ ಜನರೇಷನ್‌ಗೆ ನೀವು ಏಕೆ ಇಷ್ಟೊಂದು controversy ಮಾಡಿಕೊಳ್ಳುತ್ತೀರಿ ? ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಂದು foundation ಹಾಕುವಂತಹ ಹರಿಬಿರಿ ಏನಿತ್ತು? ಯಾವುದೇ clearance ಇಲ್ಲದೆ ಮಾಡಿದರೆ ಜನ ಇವತ್ತು ನಿಮ್ಮನ್ನು ನಂಬುತ್ತಾರಾ? ವಿಶ್ವಾಸ ಇಡುತ್ತಾರಾ? ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ. ಇನ್ನೊಂದು ಬಹಳ ಮುಖ್ಯವಾಗಿ, Sharavathi pumped storage scheme 125 M.V. ವಿದ್ಯುಚ್ಛಕ್ತಿ ಉದ್ದೇಶ ಇಟ್ಟುಕೊಂಡಿದ್ದೀರಿ. ಇನ್ನೂ DPR ಆಗಿಲ್ಲ. Clearance is also awaited. ಇದುವರೆಗೆ ಅದು ಆಗಿಲ್ಲ. Kali pumped storage scheme ನಲ್ಲಿ 150 ಮೆ.ವ್ಯಾ. ಗುರಿ ನಿಮ್ಮದು, investigation ಈಗ ಪ್ರಾರಂಭ ಆಗಿದೆ. ಇದುವರೆಗೆ clearance ಬಂದಿಲ್ಲ.

Bidadi Combined Cycle Power Plant 7.00 ಮೆ.ವ್ಯಾ. ಮೂರು ಹಂತದಲ್ಲಿ 2000 ಮೆ.ವ್ಯಾ. ಉದ್ದೇಶ ಇಟ್ಟುಕೊಂಡಿದ್ದೀರಿ ಬಿಡದಿಯಲ್ಲಿ ಗ್ಯಾಸ್ ಲೈನ್ ಇನ್ನೂ ನಮ್ಮ ರಾಜ್ಯದಲ್ಲಿ ಬಂದಿಲ್ಲ. ಇದಲ್ಲಾ ನಿಮ್ಮ ವಿಷನ್ ಡಾಕ್ಯುಮೆಂಟ್. Yelahanka Combined Cycle Power Plant ಇನ್ನೂ ಗ್ಯಾಸ್ availability ಬಗ್ಗೆ ನಿಮಗೆ ಸ್ಪಷ್ಟತೆ ಇಲ್ಲ. ಡೀಸಲ್ generation ಬಿಟ್ಟರೆ ಇನ್ನೂ ಗ್ಯಾಸ್ ಬಗ್ಗೆ ಹೋಗಿಲ್ಲ. ಈ ತರಹ issues are pending with the various departments like the Revenue Department or the Irrigation Department. ಅದಕ್ಕೆ ನಾನು ಹೇಳುತ್ತಿರುವುದು ನೀವು ಒಂದು Cabinet Sub-Committee ಮಾಡಿ. Try to resolve this issue ಎನ್ನತಕ್ಕಂತಹ ಮಾತನ್ನು ಹೇಳುತ್ತಾ, ಇನ್ನೊಂದು ಬಹಳ ಮುಖ್ಯವಾಗಿ ಇವತ್ತು ಒಂದು ಡಾಕ್ಯುಮೆಂಟನ್ನು ಕೊಟ್ಟಿದ್ದೀರಿ, ದೂರದೃಷ್ಟಿ 2020, ಇದು ಪ್ರಿಂಟ್ ಮಾಡುವುದು ನೋಡುವುದಕ್ಕೆ ಬಹಳ ಚೆನ್ನಾಗಿ ಕಾಣುತ್ತದೆ. ಇದನ್ನು ಇಲಾಖೆಯವರು ಮಾಡುತ್ತಾರೆ ನಾನು ಒಪ್ಪುತ್ತೇನೆ. ನಾನು ಆಗಲೇ ಹೇಳಿದ್ದೇನೆ, ಯಾರಿದ್ದರೂ ಕೂಡ ಇದನ್ನು ಮಾಡಿಯೇ ಮಾಡುತ್ತಾರೆ. ಇದಕ್ಕೆ ನಾನು ಚಾಲನೆ ಕೊಡುತ್ತೇವಾ ? ಏನು ಚಾಲನೆ ಕೊಟ್ಟಿದ್ದೇವೆ ನಾವು ? ಇವತ್ತು ನಿಮ್ಮ ಗುರಿ ಇರುವುದು 20 ಅಂದರೆ ಇನ್ನು 10 ವರ್ಷಕ್ಕೆ. 10 ವರ್ಷಕ್ಕೆ ರಾಜ್ಯದ ಪರಿಸ್ಥಿತಿ ಏನಿರಬೇಕು ಎನ್ನತಕ್ಕಂಥದ್ದು. ಇದನ್ನು ಅವರು ಯೋಚನೆ ಮಾಡುತ್ತಾರೆ. ಆದರೆ ನಿಮ್ಮ ಇಚ್ಛಾಶಕ್ತಿ ಏನು ? ದುಡ್ಡನ್ನು ತರಬೇಕು. ದುಡ್ಡನ್ನು ಎಷ್ಟು ತರಬೇಕೆಂಬುದರ ಬಗ್ಗೆ ಅಂಕಿ ಅಂಶಗಳನ್ನು ಓದಿ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಪದಗಳ ಜೋಡಣೆ ಇದೆಯಲ್ಲ, ಅದು ನೋಡಿದರೆ ಬಹಳ ಖುಷಿಯೂ ಆಗುತ್ತದೆ, ಬಹಳ ಬೇಸರವೂ ಆಗುತ್ತದೆ, ನಿಮ್ಮ ಮೇಲೆ ಸಿಟ್ಟೂ ಬರುತ್ತದೆ. ಆ ರೀತಿಯಾಗಿದೆ. ಆದರೆ ಏಕೆ ಇದು ಎಂದು ಹೇಳಿದರೆ, ಇದು ನಿಮಗೆ ಗುರಿ ಏನೋ ಸರಿಯೇ, ಆದರೆ ನೀವು ಹಣ ಎಷ್ಟು ತೊಡಗಿಸಬೇಕು ಎಂಬ ಬಗ್ಗೆ ನೀವೇ ಅಂದಾಜು ಮಾಡಿರುವುದು. ನಷ್ಟವನ್ನು ಕಡಿಮೆ ಮಾಡುವುದಕ್ಕಾಗಿ ನಿಮಗೆ ಬೇಕಾಗಿರುವ ದುಡ್ಡು ಒಂದು ಲಕ್ಷದ 26,000 ಕೋಟಿ ರೂ. ಇಂಧನದ ದಕ್ಷತೆಯನ್ನು

ಸುಧಾರಿಸುವುದಕ್ಕಾಗಿ ವರ್ಷಕ್ಕೆ ಶೇ. 1 ರಷ್ಟು ನಷ್ಟವನ್ನು ಕಡಿಮೆ ಮಾಡಲು ಡಿಎಮ್‌ಎಸ್‌ಗೆ 99,000 ಕೋಟಿ ರೂ. ಇಂಧನದ ದಕ್ಷತೆಯನ್ನು ಸುಧಾರಿಸಲು, ವಾರ್ಷಿಕ 2 ರಷ್ಟು ನಷ್ಟವನ್ನು ಕಡಿಮೆ ಮಾಡಲು 86,000 ಕೋಟಿ ರೂ. ಇದನ್ನು ಹೇಗೆ ತರುವುದು? ಇದು ಸರ್ಕಾರದಿಂದ ಮಾಡುವುದಕ್ಕಾಗುತ್ತಾ ? ಖಂಡಿತ ಸಾಧ್ಯವಿಲ್ಲ. ಎಲ್ಲಿಂದ ತರಬೇಕು ನೀವು ? ಈ ಯೋಜನೆಗಳು ಖಾಸಗಿ ಸಹಭಾಗಿತ್ವದಿಂದಲೇ ಬರಬೇಕು. ಖಾಸಗಿಯವರಿಂದಲೇ ನೀವು ಇವತ್ತು ಇದನ್ನು ಮಾಡಬೇಕಾಗುತ್ತದೆ. ಅದನ್ನು ಎಷ್ಟರ ಮಟ್ಟಿಗೆ ನೀವು ಮಾಡುವುದಕ್ಕೆ ಸಾಧ್ಯವಾಗಿದೆ, ಸಾಂಪ್ರದಾಯಿಕ ಮತ್ತು ನವೀಕರಿಸಬಹುದಾದ ಸಂಪನ್ಮೂಲಗಳನ್ನು ವೃದ್ಧಿಸಿಕೊಂಡು ವಿದ್ಯುಚ್ಛಕ್ತಿಯ ಲಭ್ಯತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದು ಇತ್ತೀಚೆಗೆ ಛತ್ತೀಸ್‌ಘಡದಲ್ಲಿ ಮಾಡಿಕೊಳ್ಳಲಾದ ಒಪ್ಪಂದವು ಈ ನಿಟ್ಟಿನಲ್ಲಿ ಕೈಗೊಳ್ಳಲಾದ ಒಂದು ಕ್ರಮವಾಗಿದೆ. ರಾಷ್ಟ್ರೀಯ ಗುರಿಯನ್ನು ತಲುಪಲು ಶೇಕಡ 15ಕ್ಕಿಂತ ಕೆಳಗೆ ATS ನಲ್ಲಿ ನಷ್ಟವನ್ನು ಕಡಿಮೆ ಮಾಡುವುದರ ಕಡೆಗೆ ಗಮನ ಹರಿಸಿ, ವಿದ್ಯುತ್ ಪ್ರಸರಣಾ ಮತ್ತು ವಿತರಣಾ ಕಂಪನಿಗಳ ಕಾರ್ಯಾಚರಣೆ ಮತ್ತು ಹಣಕಾಸು ನಿರ್ವಹಣೆಯನ್ನು ಸುಧಾರಿಸುವುದು ಕೂಡ ಬಹಳ ಮುಖ್ಯವಾಗಿದೆ ಎನ್ನತಕ್ಕಂತಹ ಮಾತನ್ನು ನೀವು ಹೇಳುತ್ತಿದ್ದೀರಿ. ನೀವು ಇಷ್ಟೆಲ್ಲಾ ವಿಷನ್ ಡಾಕ್ಯುಮೆಂಟ್ ಇಟ್ಟ ತಕ್ಷಣ ಇದನ್ನೇ ತೋರಿಸಿಕೊಂಡು ಈಶ್ವರಪ್ಪನವರು ಇಲ್ಲಿಯವರೆಗೆ ನಮಗೆ ಏನು ತೊಂದರೆ ಇಲ್ಲವೆಂದು ಹೇಳಿಕೊಂಡು ಎರಡು ವರ್ಷ ಕಾಲ ಕಳೆದರು. ಇದರ ಜೊತೆಗೆ ಹಣಕಾಸನ್ನು ತೊಡಗಿಸಬೇಕಾದಾಗ ದೃಢ ತೀರ್ಮಾನ ತೆಗೆದುಕೊಳ್ಳಬೇಕು. ನೀವು ಹೇಗೆ ಮಾಡುತ್ತೀರಿ ಎಂದು ಯೋಚನೆ ಮಾಡಬೇಕು. ನೀವು ತುಮಕೂರು ಜಿಲ್ಲಾ ಮಂತ್ರಿಗಳು. ಬಯೋಮಾಸ್ ಪ್ರಾಜೆಕ್ಟ್ ಎಂದು ತುಮಕೂರಿನಲ್ಲಿ ನಾಲ್ಕು ಪ್ರಾಜೆಕ್ಟ್ ಇದ್ದವು. ನಾಲಕ್ಕು ಪ್ರಾಜೆಕ್ಟ್‌ಗಳು ನಿಂತು ಹೋಗಿವೆ. ಹಿರಿಯೂರಿನಲ್ಲಿ ನಿಂತು ಹೋಗಿದೆ. ಕಾರಣ ಏನು ? ನಿಮಗೆ 2:85 ಪೈಸೆ ಕೊಟ್ಟರೆ ಅದು ಎಷ್ಟರ ಮಟ್ಟಿಗೆ ಅವರು ನಡೆಸುವುದು ? ನೀವು ಜಿಂದಾಲ್‌ನವರಿಗೆ 4.50 ರೂ. ಕೊಡುತ್ತೀರಿ, ಇವರಿಗೇಕೆ ಉತ್ತೇಜನ ಕೊಡಬಾರದು ? Domestic

production ಅನ್ನು improve ಮಾಡುವುದರ ಬಗ್ಗೆ ಚಿಂತನೆ ಮಾಡಿದ್ದೀರಾ? ಬಂದಿದ್ದ ವಿದ್ಯುಚ್ಛಕ್ತಿಯನ್ನು ಮ್ಯಾನೇಜ್‌ಮೆಂಟ್ ಮಾಡುವುದರಲ್ಲಿಯೇ ನೀವು ವಿಫಲರಾಗಿದ್ದೀರಿ. ನಿಮಗೆ futuristic ideas ಇಲ್ಲವೇ ಇಲ್ಲ. ನೀವೇನಾದರೂ ಕರ್ನಾಟಕ ರಾಜ್ಯವನ್ನು ಕಗ್ಗತ್ತಲಿನಿಂದ ಹೊರಗಡೆ ತರಬೇಕಾದರೆ Please, go for nuclear power, America ದ ಜೊತೆ ಆಗಿದ್ದಂತಹ ಅಣು ಒಪ್ಪಂದದ ಹಿನ್ನೆಲೆಯಲ್ಲಿ ಇವತ್ತು ಖಾಸಗಿ ವಲಯದಲ್ಲಿ ಕೂಡ ವಿದ್ಯುಚ್ಛಕ್ತಿ ತಯಾರು ಮಾಡುವುದಕ್ಕೆ ಬರುವುದಕ್ಕಾಗಿ ಬಹಳಷ್ಟು ಕಂಪನಿಗಳು ತಯಾರಾಗಿವೆ. ಇವತ್ತು ಅವರ ಜೊತೆ ಕೂತು ಚರ್ಚೆ ಮಾಡಿ, ಮಾನ್ಯ ಬಚ್ಚೇಗೌಡರೇ ನಾನು ಹೇಳುತ್ತೇನೆ, ಅಮೇರಿಕಾಕ್ಕೆ ಹೋದಾಗ ಮಾನ್ಯ ಯಡಿಯೂರಪ್ಪನವರು ಬಂದಾಗ ನಾನು ಅಲ್ಲಿಯೇ ಇದ್ದೆ. ನಾನು in the interest of State ಎಲ್ಲರ ಬಳಿ ಕುಳಿತು ಚರ್ಚೆ ಮಾಡುತ್ತದೆ. ಈ nuclear understanding ರಾಜ್ಯಕ್ಕೆ, ದೇಶಕ್ಕೆ ಬರುತ್ತದೆ ಎನ್ನುವ ಕಾರಣಕ್ಕೋಸ್ಕರ ಅನೇಕ ಜನ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ವಿಜ್ಞಾನಿಗಳಿರಬಹುದು, ಬಂಡವಾಳ ಹೂಡಲು ಆಸಕ್ತಿ ಇರತಕ್ಕಂತಹ ಜನ ಇಲ್ಲಿ ಬರುವುದಕ್ಕೆ ತಯಾರಾಗಿದ್ದರು. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಿದೆ ಐದು ಹತ್ತು ನಿಮಿಷ ಕುಳಿತು ಮಾತನಾಡಿ ಇಂತಹ ಕಂಪನಿಗಳು ಬಂದಿವೆ ಎಂದು. ನನಗೆ ಅದ್ವಾನಿಯವರ ಸ್ನೇಹಿತರ ಮನೆಯಲ್ಲಿ appointment ಇದೆ ನಾನು ಹೋಗಲೇ ಬೇಕೆಂದು ಹೇಳಿ ಹೊರಟು ಹೋದರು. ಇವತ್ತು ಅವರು ನಾಲ್ಕಾರು ಸಾರಿ ರಾಜ್ಯಕ್ಕೆ ಬಂದು ಹೋಗಿದ್ದಾರೆ. ನೀವು ಅವರ ಜೊತೆ ಕುಳಿತು ಚರ್ಚೆ ಮಾಡಿದ್ದೀರಾ? ಅವರಿಗೆ attract ಮಾಡುತ್ತಿರುವವರು ಆಂಧ್ರ ಪ್ರದೇಶದವರು ಮತ್ತು ಮಹಾರಾಷ್ಟ್ರದವರು. ಇವತ್ತು ಆಂಧ್ರ ಪ್ರದೇಶ, ಮಹಾರಾಷ್ಟ್ರ ಹಾಗೂ ತಮಿಳುನಾಡಿನಲ್ಲಿ ವಿದ್ಯುಚ್ಛಕ್ತಿ ಕೊರತೆ ಇಲ್ಲವೆಂದು ಹೇಳಬೇಡಿ. ಆಂಧ್ರದಲ್ಲಿಯೂ ಕೊರತೆ ಇದೆ. ಮಹಾರಾಷ್ಟ್ರದಲ್ಲಿ ಕೊರತೆ ಇದೆ. ನಮ್ಮ ರಾಜ್ಯ ಎಲ್ಲದಕ್ಕಿಂತ worst ಆಗಿದ್ದೇವೆ ನಾವು. ಮೆಗಾ ಪ್ರಾಜೆಕ್ಟ್‌ಗಳನ್ನು ನೀವು ಇವತ್ತು welcome ಮಾಡದೆ ಇದ್ದರೆ, ಎಲ್ಲೋ ಒಂದು ಕಡೆ ಆ ಸಮಸ್ಯೆಗಳನ್ನು ಸ್ಥಳೀಯವಾದ ಪರಿಸರ ವಿಚಾರ, land acquisition ದೃಷ್ಟಿ

ಇರಬಹುದು, ಇದನ್ನು ನೀವು ಬಗೆಹರಿಸದೆ ಇದ್ದರೆ, ಖಂಡಿತವಾಗಿ ರಾಜ್ಯಕ್ಕೆ ಭವಿಷ್ಯ ಇಲ್ಲ. ಮಾತಿನಿಂದಲೇ ನೀವು ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಖಾಸಗಿ ಬಂಡವಾಳಕ್ಕೆ ಉತ್ತೇಜನ ಕೊಡತಕ್ಕಂತಹ ರೀತಿಯಲ್ಲಿ ಮಾಡಿದರೆ, ನೀವು ಖಂಡಿತವಾಗಿ ವಿದ್ಯುಚ್ಛಕ್ತಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಜನಗಳಿಗೆ ವಿಶ್ವಾಸ ಬರಿಸುವ ರೀತಿಯಲ್ಲಿ ಯಾವ ಕೆಲಸವೂ ಮಾಡದೆ, ಬೆಳಗ್ಗೆ ಎದ್ದು ನಿಮಗೆ ಈಗ ಕೊಟ್ಟುಬಿಡುತ್ತೇವೆ, ಆಗ ಕೊಡುತ್ತೇವೆ ಎಂದು ಹೇಳುತ್ತೀರಿ. ನಿಜವಾಗಿ ಹೇಳಬೇಕೆಂದರೆ, ಹಳ್ಳಿಗಳಿಗೆ ಹೋದರೆ ಎಷ್ಟು ಬೇಜಾರಾಗುತ್ತದೆ ಎಂದರೆ, ನಿಜವಾಗಿಯೂ ಇನ್ನು ಹಳ್ಳಿಗಳಿಗೆ ಹೋಗಬಾರದು ಎನ್ನುವಷ್ಟು ಬೇಜಾರಾಗುತ್ತದೆ. ನಾನೊಬ್ಬನೇ ಅಲ್ಲ ಎಲ್ಲಾ ಶಾಸಕರ ಅನುಭವ ಕೂಡ ಇದೇ ಆಗಿರಬೇಕಾದಾಗ ದಯಮಾಡಿ ಅದರ ಕಡೆಗೆ ಗಮನ ಕೊಡಿ, ವಿದ್ಯುತ್ ಜನರೇಷನ್ ಕಡೆಗೆ ನೀವು importance ಕೊಡಿ. ಇನ್ನು ಐದು ತಿಂಗಳಲ್ಲಿ ನೀವು ಯಾವ ರೀತಿಯಾಗಿ ಕೆಲಸವನ್ನು ನಿರ್ವಹಣೆ ಮಾಡುತ್ತೀರಿ ಎನ್ನುವುದರ ಬಗ್ಗೆ ಅದಕ್ಕೆ ನೀವು ಒಂದು contingency plan ಪ್ರಕಾರ improvement ಮಾಡಿ. ಆ contingency plan ಅನ್ನು ನೀವು demand and supply, demand ಬಗ್ಗೆ ಬಿಡಿ. Demand ಅನ್ನು ನೀವು fulfill ಮಾಡುವುದಕ್ಕಾಗುವುದಿಲ್ಲ. Supply ಯನ್ನು how you can regulate? ಆದರೆ ಎಲ್ಲೋ ಒಂದು ಕಡೆಗೆ ನಾನು ಹೇಳುತ್ತೇನೆ, you have to go to purchase the power. ಜಿಂದಾಲ್‌ನವರು ತಯಾರಾಗಿದ್ದಾರೆ, ಅವರ ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳಿ. ಇವತ್ತು ಯಾರೋ ಒಂದು ಮಾತು ಹೇಳಬೇಕಾದರೆ ಕೇಳಿದೆ ನಾನು. ವಿದ್ಯುಚ್ಛಕ್ತಿ ಎಲ್ಲಿ ಸಿಗುತ್ತದೆ, ಯಾರು ಕೊಡುವುದಕ್ಕೆ ತಯಾರಾಗಿದ್ದಾರೆ ಎಂದು. ಸಾಕಷ್ಟು ಜನ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ತಯಾರಾಗಿರತಕ್ಕಂತಹ ಜನ ಕೂಡ ನಮ್ಮ ರಾಜ್ಯದಲ್ಲಿ ಇರಬೇಕಾದಾಗ ಅವರ ಜೊತೆ ಕೂತಾದರೂ ಕೂಡ ಚರ್ಚೆ ಮಾಡಿ, ಇವತ್ತು ನೀವು ಒಂದು ಸಾವಿರ ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುತ್ತೇವೆ, ಒಂದು ಸಾವಿರ ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುವುದರಿಂದ ಸಮಸ್ಯೆ ಬಗೆಹರಿಯಬಹುದು ಎನ್ನತಕ್ಕಂತಹ ಮಾತನ್ನು ಕೂಡ ಇವತ್ತು

ನೀವು ಹೇಳುತ್ತಿದ್ದೀರಿ. ದಯಮಾಡಿ ಅದರ ಕಡೆಗೆ ನಿಮ್ಮ ಗಮನ ಇರಲಿ ಎನ್ನತಕ್ಕಂತಹ ಮಾತನ್ನು ಹೇಳುತ್ತಾ, ಜಲ ವಿದ್ಯುತ್ತಿನ ಪೆಂಡಿಂಗ್ ಪ್ರಾಜೆಕ್ಟ್‌ಗಳು ಏನಿವೆ, ಅದನ್ನು expedite ಮಾಡಿ. ನೆನ್ನೆ ಮಾನ್ಯ ಈಶ್ವರಪ್ಪನವರು ನೆನ್ನೆ ಮಾತನಾಡುವಾಗ ನಾನು ಒಂದು ಮಾತು ಹೇಳಿದೆ. ಅವರು ಅದರ ಬಗ್ಗೆ ಸಾಕಷ್ಟು ಗಮನ ಕೂಡ ಹರಿಸಿದ್ದಾರೆ. Wind power ತರುವುದು ಉತ್ತಮ. ಯಾವುದಾದರೂ ಒಂದು ಉದ್ಯಮದವರು effective ಆಗಿ dynamic ಆಗಿ invest ಮಾಡುತ್ತಿದ್ದಾರೆ ಎಂದರೆ Wind energy ಮೇಲೆ. ಶಿವಮೊಗ್ಗ ಒಂದಕ್ಕೆ ನಾನು ಹೇಳುತ್ತೇನೆ. ಎಷ್ಟು ಎಂದರೆ, 560 ಮೆ.ವ್ಯಾ. ತರತಕ್ಕಂತಹ ರೀತಿಯಲ್ಲಿ ಪ್ರಾಜೆಕ್ಟ್ ಅನ್ನು ತಯಾರು ಮಾಡಿದ್ದೀರಿ. ಈ ಪ್ರಾಜೆಕ್ಟ್‌ಗಳು ಕ್ಲಿಯರ್ ಆಗಿರುವುದು ಯಾವಾಗ ಎಂದರೆ 2002, 2003, 2004, ಈ ರೀತಿಯಾಗಿ ಆಗಿದೆ. ಅದರಲ್ಲಿ ಒಂದಾದರೂ ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡುವುದಕ್ಕೆ ಆಗಿದೆಯೆ, ಆಗಿಲ್ಲ. ಇದರ ಬಗ್ಗೆ ಒಂದು ದಿವಸ ಕೂಡ ಕಾಳಜಿ ವಹಿಸಲಿಲ್ಲ. ಆದರೂ ನಾನು ಪವರ್ ಕೊಡುತ್ತೇನೆ, ಕೊಡುತ್ತೇನೆ, ಕೊಡುತ್ತೇನೆಂದು ಹೇಳಿದ್ದೂ ಹೇಳಿದ್ದೇ. ಎಲ್ಲೂ ಕೂಡ ಖಾಸಗಿ ವಲಯವನ್ನು ಚುರುಕು ಮಾಡತಕ್ಕಂಥ ರೀತಿಯಲ್ಲಿ No steps have been taken positively by the Government. ದಯಮಾಡಿ ಈಗ I am categorical in making this allegation against the State Government. ಇದು short term continuous plan ಗೆ ಬೇಕಾಗಿದೆ. ಈಗ ಒಂದು ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿ ಬೇಕು. ವಿದ್ಯುತ್ ಕೊರತೆ ಇದೆ. ರೈತರಿಗೆ ಬೇಕಾಗಿರತಕ್ಕಂಥ 6 ಗಂಟೆಯ ಕಾಲ ವಿದ್ಯುತ್‌ನ್ನು ನೀವು ಬೆಳಿಗ್ಗೆ ಹೊತ್ತು ಕೊಡಿ. ರಾತ್ರಿ ಹೊತ್ತು ಬೇಡ. ನೀವು ರಾತ್ರಿ ಹೊತ್ತು ಕೊಟ್ಟರೂ ಕೂಡ ಪ್ರಯೋಜನವಾಗುವುದಿಲ್ಲ. ಅದೆಲ್ಲಕ್ಕಿಂತ ಮುಖ್ಯವಾಗಿ ನೀವು ಆರು ಗಂಟೆಯ ಕಾಲ ವಿದ್ಯುತ್ ಕೊಟ್ಟರಿ, ಎಂಟು ಗಂಟೆಯ ಕಾಲ ಕೊಟ್ಟರಿ ಎನ್ನುವುದು ಮುಖ್ಯವಲ್ಲ. Proper supply, voltage ಇರಬೇಕು. 220 ವೋಲ್ಟ್ಸ್ ಇಲ್ಲದಿದ್ದರೂ ಕಡೆಯ ಪಕ್ಷ 180 ಆದರೂ ಇರಲಿ. ಆ ರೀತಿಯಲ್ಲಿ ಪವರ್‌ನ್ನು ಕೊಡತಕ್ಕಂಥದ್ದರ ಬಗ್ಗೆ ನೀವು ಮ್ಯಾನೇಜ್

ಮಾಡಬೇಕು. ನೀವು power purchaseನ್ನು ಯಾರಿಂದ ಮಾಡುತ್ತೀರೋ, ಎಲ್ಲಿಂದ ಮಾಡುತ್ತೀರೋ ಎಂಬುದು ನಿಮಗೆ ಬಿಟ್ಟಿರತಕ್ಕಂಥ ಪ್ರಶ್ನೆ. ಆದರೆ ಖಂಡಿತವಾಗಿ ಕೂಡ ಬಹುಶ: ಈ ಸದನದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಕೊನೆಗೆ ಜನರಿಗೆ ನಿಮ್ಮ ಮೇಲೆ ವಿಶ್ವಾಸವಾದರೂ ಬರಬೇಕು. ಇವತ್ತು ಈ ವಿಷಯ ವಿಧಾನಸಭೆಯಲ್ಲಿ ಚರ್ಚೆಯಾಗಿದೆ, ಸಾಯಂಕಾಲಕ್ಕೋ ಅಥವಾ ನಾಳೆಯೋ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಇವತ್ತು ಜನರಿಗೆ ವಿಶ್ವಾಸ ಬರತಕ್ಕಂಥ ರೀತಿಯಲ್ಲಿ ಕೆಲಸಗಳು ಆಗಬೇಕಾಗುತ್ತದೆ. ಇದು ಕೇವಲ ಪಕ್ಷದ ಬಗ್ಗೆ ಹೇಳುವುದಲ್ಲ. ಇವತ್ತು ನಾನು ಮೇಲು, ನೀನು ಮೇಲು ಎನ್ನುವುದಕ್ಕಿಂತ ಹೆಚ್ಚಾಗಿ ರಾಜ್ಯದ ಹಿತದೃಷ್ಟಿಯಿಂದ ಆ ಕೆಲಸವಾಗಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ನಮ್ಮ short term plans ಏನು ಎನ್ನತಕ್ಕಂಥದ್ದರ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು. ಇದಕ್ಕೆ ಯಾವ ರೀತಿಯಾಗಿ ಪ್ಲಾನ್ ಮಾಡುತ್ತೀರಿ ಎನ್ನತಕ್ಕಂಥದ್ದರ ಬಗ್ಗೆ ಹೇಳಬೇಕು. ಕೇವಲ ಭಾಷಣದಲ್ಲಿ ಹೇಳಿದರೆ ರಾಜ್ಯಕ್ಕೆ ಖಂಡಿತವಾಗಿ ಅದರಿಂದ ಲಾಭವಾಗುವುದಿಲ್ಲವೆನ್ನತಕ್ಕಂಥ ಮಾತನ್ನು ಹೇಳಿ ಬಹುಶ: ಇನ್ನೂ ಅನೇಕ ವಿಷಯಗಳನ್ನು ವಿದ್ಯುತ್ ವಿಚಾರದಲ್ಲಿ ನಾನು ಪ್ರಸ್ತಾಪ ಮಾಡಬೇಕು ಎಂದುಕೊಂಡಿದ್ದೆ. ಕಾಲಾವಕಾಶದ ಕೊರತೆಯಿಂದಾಗಿ ನಾನು ಎಲ್ಲ ವಿಷಯಗಳನ್ನು ಹೇಳುವುದಕ್ಕೆ ಆಗಲಿಲ್ಲ. ಆದರೂ ಕೂಡ ಇದರ ಬಗ್ಗೆ ದೊಡ್ಡ ಜವಾಬ್ದಾರಿಕೆ ಈ ಜನತಂತ್ರ ವ್ಯವಸ್ಥೆಯಲ್ಲಿ ನಿಮ್ಮ ಮೇಲಿದೆ. ಇದರಿಂದ ನೀವು ಏನಾದರೂ ಹಿಂದೆ ಸರಿದರೆ ಅಥವಾ ನಿಮ್ಮಿಂದ ಲೋಪವಾದರೆ ಜನರ ಶಾಪಕ್ಕೆ ಗುರಿಯಾಗತಕ್ಕಂಥವರು ನೀವೇನೇ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಸಾಕಷ್ಟು ಸಾರಿ ಹೇಳಿದ್ದಾರೆ ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗಲಿಲ್ಲವೆಂದರೆ ನೀವು ಅಧಿಕಾರದಿಂದ ಬಿಟ್ಟುಹೋಗಿ ಎಂದಿದ್ದಾರೆ. ಆದರೆ ನೀವು ಅಧಿಕಾರ ಬಿಡುತ್ತೀರೋ, ಇರುತ್ತೀರೋ ಅದು ಬೇರೆ ವಿಚಾರ. ಆದರೆ ತಪ್ಪಂತೂ ನಿಮ್ಮ ಕಡೆಯಿಂದ ಆಗಿದೆ ಎಂಬುದನ್ನು ನಾನು ಹೇಳಿದ್ದೇನೆ. ಆ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ನಿಮ್ಮ ಕೈಯಿಂದ ಆಗದಿದ್ದರೆ ನೀವು ಅಧಿಕಾರದಲ್ಲಿ

ಇರುವುದು ಬಿಡುವುದು ಮುಖ್ಯವೆನ್ನುವುದಕ್ಕಿಂತ ಹೆಚ್ಚಾಗಿ ರಾಜ್ಯ ಹಾಳಾಗುತ್ತದೆ. ಇವತ್ತು ಕೈಗಾರಿಕೆ ಸೇರಿದಂತೆ ಎಲ್ಲ ಕಡೆಯಲ್ಲಿಯೂ ನಿಷ್ಪ್ರಯೋಜನವಾಗುತ್ತದೆ. ಶೈಕ್ಷಣಿಕವಾಗಿ ಮಕ್ಕಳಿಗೆ ತೊಂದರೆಯಾಗುತ್ತದೆ. ಆಹಾರದ ಕೊರತೆಯಾಗುತ್ತದೆ. ಜನರಿಗೆ ಒಂದಲ್ಲ, ನೂರಾರು ಸಮಸ್ಯೆಗಳು ಬರುತ್ತದೆ. ಒಂದು ಮಾತನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಇವತ್ತು ವಿದ್ಯುಚ್ಛಕ್ತಿ ಎನ್ನತಕ್ಕಂಥದ್ದು ಮನುಷ್ಯನ ಶರೀರದಲ್ಲಿ ಯಾವ ರೀತಿಯಾಗಿ blood vessels ಇರುತ್ತದೋ ಅದೇ ರೀತಿ ವಿದ್ಯುಚ್ಛಕ್ತಿ. ಆ ವಿದ್ಯುಚ್ಛಕ್ತಿ ಇಲ್ಲದೇ ಮನುಷ್ಯ ಬದುಕುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ರಾಜ್ಯ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವೇ ಇಲ್ಲ. ಮುಖ್ಯಮಂತ್ರಿಗಳು ಆಗಲೇ ಇಲ್ಲಿ ಇರಬೇಕಾಗಿತ್ತು. ನಾನು ಆಗಲೇ ಕೆಲವು ಸಲಹೆಗಳನ್ನು ಕೊಟ್ಟೆ. ಮಾನ್ಯ ಮುಖ್ಯಮಂತ್ರಿಗಳೆ, ನೀವು ಮಾತು ಮಾತಿಗೂ ಅಭಿವೃದ್ಧಿ, ಅಭಿವೃದ್ಧಿ ಎಂದು ಹೇಳುತ್ತೀರಿ. ನಾನು ನಿಮಗೆ ಟೀಕೆ ಮಾಡುತ್ತೇನೆ ಎಂದಲ್ಲ. ನಾನು ನಿಮ್ಮ ಕಳಕಳಿಯನ್ನು ಒಪ್ಪುತ್ತೇನೆ. ಆದರೆ ಕಳಕಳಿಯ ಜೊತೆಗೆ ನೀವು ಎಲ್ಲೋ ಒಂದು ಕಡೆಗೆ ಇಚ್ಛಾಶಕ್ತಿಯನ್ನು ತೋರುತ್ತಿಲ್ಲ. ನಿಮಗೆ ಟೀಕೆ ಮಾಡುತ್ತೇನೆ ಎಂದಲ್ಲ. ಎಲ್ಲೋ ಒಂದು ಕಡೆಗೆ ನಿಮ್ಮ ಇಚ್ಛಾ ಶಕ್ತಿ ಏನಿದೆ ಅದನ್ನು ತೋರಿಸತಕ್ಕಂಥ ಕೆಲಸವನ್ನು ಮಾಡಬೇಕು ಎಂದು ಹೇಳತಕ್ಕಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ನಿಮಗೆ ನಿಜವಾಗಿಯೂ ಕೂಡ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಗಮನವಿದ್ದರೆ, ರೈತರ ವಿಚಾರದಲ್ಲಿ ನೀವು ಗಮನ ಹರಿಸುವುದಾದರೆ ನೀವು ಜನರೇಶನ್ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಿ, ಅದೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದಲ್ಲಿಯೇ ಇರತಕ್ಕಂಥ ಸಣ್ಣ ಸಣ್ಣ projects complete ಮಾಡತಕ್ಕಂಥ ಕೆಲಸವನ್ನು ಮಾಡಿದಾಗ ಮಾತ್ರ . . .

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಜಯಚಂದ್ರರವರೆ ನೀವು ಮುಗಿಸುವುದಕ್ಕಿಂತ ಮುಂಚೆ ಒಂದು ನಿಮಿಷ yield ಆಗಿ.

ಶ್ರೀ ಟಿ.ಬಿ. ಜಯಚಂದ್ರ : ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಗೌರವಾನ್ವಿತ ಹಿರಿಯ ಸದಸ್ಯರುಗಳು ಇಲ್ಲಿಯೇ ಕುಳಿತಿದ್ದಾರೆ. ನೀವೆಲ್ಲಾ ಅನುಭವಿ ರಾಜಕಾರಣಿಗಳು. ಅಧಿಕಾರದಲ್ಲಿ ಇದ್ದಂಥವರು. ಇನ್ನೂ ಒಂದಿಪ್ಪತ್ತು, ಇಪ್ಪತ್ತೈದು ವರ್ಷಕ್ಕೆ,, ನಾನು ರೇವಣ್ಣನವರು ಇದ್ದರೆ ಹೇಳುವುದಕ್ಕೆ ಹೋಗುವುದಿಲ್ಲ, ಏನೂ ಉಪಯೋಗವಿಲ್ಲ ಅವರ ಹತ್ತಿರ ಹೇಳುವುದರಿಂದ, ಇನ್ನು ಇಪ್ಪತ್ತರಿಂದ ಇಪ್ಪತ್ತೈದು ವರ್ಷಕ್ಕೆ ಮುಂದಕ್ಕೆ ಏನು ಬೇಕು, ಇದರ ಅಗತ್ಯತೆ ಏನು ಎಂಬ ಬಗ್ಗೆ ಮುಂದಾಲೋಚನೆಯನ್ನು ಮಾಡಿ ಅಗತ್ಯವಿರುವಂಥ ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ ಬೇಕಾದಂಥ project ಗಳನ್ನು ತಂದು ಅದಕ್ಕೆ clearance ಕೊಟ್ಟು, ಕೇಂದ್ರದಲ್ಲಿಯೂ ನಿಮ್ಮ ಸರ್ಕಾರ, ರಾಜ್ಯದಲ್ಲಿಯೂ ನಿಮ್ಮ ಸರ್ಕಾರವಿದ್ದಾಗ ಬೇಕಾದಷ್ಟು ಅವಕಾಶ ನಿಮಗೆ ಇರಲಿಲ್ಲವೆ ಸಾರ್? ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಾನು ಬಂದ ಮೇಲೆ ಕಳೆದ ಇಪ್ಪತ್ತು ತಿಂಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನೇನು ಮಾಡಿದ್ದೇನೆ ಎಂಬ ಬಗ್ಗೆ ಅಂಕಿ ಅಂಶಗಳೊಂದಿಗೆ ನಿಮಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳುತ್ತೇನೆ. ನೀವು ಬೇಕಾದರೆ ಪರಿಶೀಲನೆ ಮಾಡಿ. ಎರಡನೆಯದಾಗಿ ತಕ್ಷಣಕ್ಕೆ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನು ಮಾಡಬೇಕೋ ಅದನ್ನೂ ಕೂಡ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ನಾನು ಹೇಳುವುದೇನೆಂದರೆ, ಎಲ್ಲೋ ಒಂದು ಕಡೆ ಕಳೆದ ಇಪ್ಪತ್ತು ತಿಂಗಳಲ್ಲಿ ವಿದ್ಯುತ್ ವಿಚಾರದಲ್ಲಿ ಏನೂ ಪ್ರಯತ್ನ ನಡೆಯಲಿಲ್ಲವೆನ್ನುವ ಹಾಗೆ ಕಲ್ಪನೆ ರೀತಿಯಲ್ಲಿ ಹೇಳುವುದು ಬೇಡ. ನಾವು ಏನೇನು ಮಾಡಿದ್ದೇವೆ ಎನ್ನುವ ಬಗ್ಗೆ ನೀವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಜಯಚಂದ್ರರವರೆ, ಹಿಂದೆ ಈ ವಿಚಾರದಲ್ಲಿ ಪ್ರಾಮಾಣಿಕವಾದ ಪ್ರಯತ್ನ ನಡೆಯಲಿಲ್ಲ. ಅದು ಕುಡಿಯುವ ನೀರಿನ ವಿಚಾರವಿರಬಹುದು, ವಿದ್ಯುತ್ ವಿಚಾರವಿರಬಹುದು ಮತ್ತೊಂದಿರಬಹುದು. ಇನ್ನು ಒಂದಿಪ್ಪತ್ತೈದು ವರ್ಷದ ಚಿತ್ರಣ ನಮ್ಮ ಕಣ್ಣು ಮುಂದೆ ಇಟ್ಟುಕೊಂಡು ಪ್ಲಾನಿಂಗ್ ಆಗಲೇ ಆಗಿದ್ದರೆ ಈ ರೀತಿ ಈಗ ಆಗುತ್ತಿರಲಿಲ್ಲ. ಆದರೆ ನಾನು ಬಂದಾಗ ಏನು ಮಾಡಿದೆ ಹೇಳಿ. ನಾನು ಬಂದ ಮೊದಲ ದಿನದಿಂದ ಇನ್ನು ಒಂದಿಪ್ಪತ್ತೈದು ವರ್ಷಕ್ಕೆ ವಿದ್ಯುತ್ ಅಭಾವ ಆಗದಂತೆ ಏನೇನು ಮಾಡಬೇಕು, ಅದಕ್ಕೆ ಏನೇನು ಯೋಜನೆಗಳನ್ನು ತರಬೇಕು, ಏನೇನು ಮಂಜೂರಾತಿಗಳನ್ನು

ತರಬೇಕು ಎನ್ನುವ ದಿಕ್ಕಿನಲ್ಲಿ ಕೇಂದ್ರಕ್ಕೆ ಹೋಗಿ ಸಂಬಂಧಪಟ್ಟವರನ್ನು ಭೇಟಿ ಮಾಡಿ ಕ್ಲಿಯರೆನ್ಸ್ ತೆಗೆದುಕೊಂಡು ಎಲ್ಲ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡುವ ಹಂತದಲ್ಲಿ ನಾನು ಇದ್ದೇನೆ. ಈಗ ತತ್‌ಕಾಲಕ್ಕೆ ಏನು ವಿದ್ಯುತ್ ಬೇಕಾಗಿದೆಯೋ ಅದಕ್ಕಾಗಿ ಏನು ಮಾಡಬೇಕು, ಅದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೋ ಮಾಡಿ ವಿದ್ಯುತ್‌ನ್ನು ತರೋಣ. ಆ ಬಗ್ಗೆ ಏನು ಮಾಡಬೇಕು ಎಂದು ಯೋಚನೆಯನ್ನು ಮಾಡೋಣ. ಇನ್ನು ಹತ್ತಾರು ವರ್ಷದ ಚಿತ್ರಣ ನನ್ನ ಕಣ್ಣ ಮುಂದೆ ಇಟ್ಟುಕೊಂಡು ನಾನು ಏನು ಮಾಡಿದ್ದೇನೆ ಎಂಬ ಬಗ್ಗೆ ಉತ್ತರ ಕೊಡುವಾಗ ನಿಮಗೆ ಹೇಳುತ್ತೇನೆ. ನೀವು ಕೂಡ ಏನು ಮಾಡಬಹುದು ಎಂಬ ಬಗ್ಗೆ ನಿಮ್ಮ ಸಲಹೆಯನ್ನು ಕೊಡಿ. ನಾನು ನಿಮ್ಮ ಸಲಹೆಯನ್ನು ಸ್ವೀಕಾರ ಮಾಡುವುದಕ್ಕೆ ಸಿದ್ಧನಿದ್ದೇನೆ. ಏಕೆಂದರೆ ಈ ಮನೆಯಲ್ಲಿ ನಾವು ಕುಳಿತುಕೊಂಡು ಯಾವುದೋ ಒಂದು ದೃಷ್ಟಿಕೋನವಿಟ್ಟುಕೊಂಡು ಮಾತನಾಡುವುದಕ್ಕಿಂತ ವಾಸ್ತವಿಕವಾಗಿ ನಾವೇನು ಮಾಡಿದ್ದೇವೆ, ನೀವೇನು ಮಾಡಿದ್ದೀರಿ ಎಂಬುದನ್ನು ನೋಡೋಣ. ಈಗ ಹೋಗಲಿ ಹಿಂದೆ ಏನೋ ತಪ್ಪಾಗಿದೆ. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ನೀವು ನಮಗೆ ಸಲಹೆಯನ್ನು ಕೊಡಿ. ನಾನು ಕೆಲಸ ಮಾಡುವುದಕ್ಕೆ ಸಿದ್ಧನಿದ್ದೇನೆ. ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಆ ತರಹದ ಸಲಹೆಗಳನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡುತ್ತೇನೆ. ನಿಮ್ಮ ಸ್ಪೀಚ್‌ನ್ನು ನಾನು ಕೇಳುತ್ತಿದ್ದೆ. ನಮ್ಮ ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿ ನಾನು ರಿಪ್ಲೈ ಕೊಡುತ್ತೇನೆ. ಆದರೆ ವಾಸ್ತವಿಕವಾಗಿ ಬಹಳ ಹಿಂದೆ ಆ ದಿಕ್ಕಿನಲ್ಲಿ ಪ್ರಯತ್ನ ಆಗಲಿಲ್ಲ. ಪ್ರತಿ ವರ್ಷ ನಮ್ಮ ಗ್ರಿಡ್‌ಗೆ ವಿದ್ಯುತ್ ಎಷ್ಟು ಸೇರಿತು ಎಂಬ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇದೆ ಅದನ್ನು ನಿಮಗೆ ಕೊಡುತ್ತೇನೆ. ಇದನ್ನು ನಾನು ನಿಮಗೆ ತಿಳಿಸುವುದಕ್ಕೆ ಪ್ರಯತ್ನ ಮಾಡಿದೆ.

ಶ್ರೀ ಶ್ರೀನಿವಾಸ ಪ್ರಸಾದ್ : ನಾವು ಹೇಳುವುದು ಏನೆಂದರೆ erratic load shedding ಬಗ್ಗೆ ಗಮನ ಕೊಡುತ್ತಿಲ್ಲವೆಂದು ನಿಮ್ಮ ಗಮನವನ್ನು ಸೆಳೆಯುತ್ತಿರುವುದು. ಇದು ಬಹಳ ಮುಖ್ಯವಾದಂಥದ್ದು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳೆ, ನಾನು ಈಗಾಗಲೇ ಅನೇಕ ಉಪಯುಕ್ತ ಸಲಹೆಗಳನ್ನು ಟೀಕೆ ಮಾಡುವುದಕ್ಕಿಂತ

ಹೆಚ್ಚಾಗಿ ಕೊಟ್ಟಿದ್ದೇನೆ. ಯಾವ ರೀತಿಯಾಗಿ ಏನು ಮಾಡಬೇಕು ಎಂಬ ಬಗ್ಗೆ ಹೇಳಿದ್ದೇನೆ. ನಾನು ಏನೇನು ಹೇಳಿದ್ದೇನೆ ಎಂಬುದನ್ನು ತಾವು ಸ್ವಲ್ಪ ತರಿಸಿಕೊಂಡು ನೋಡಿದರೆ ನಿಮಗೆ ಗೊತ್ತಾಗುತ್ತದೆ. ನಿಮಗೆ ನಿಜವಾಗಿಯೂ ಕೂಡ ನಾನು ಮಾಹಿತಿಯನ್ನು ಕೊಡುವ ದೃಷ್ಟಿಯಿಂದಲೇ ಹಲವಾರು ಸಲಹೆಗಳನ್ನು ಕೊಟ್ಟಿದ್ದೇನೆ. ಆದರೆ ಒಂದು ಮಾತನ್ನು ನಿಮಗೆ ಹೇಳುತ್ತೇನೆ. ನಿಮಗೆ Central Grid ನಿಂದ ರಾಜ್ಯಕ್ಕೆ ಬರುವ ವಿದ್ಯುತ್‌ನ ಪ್ರಮಾಣ ಎಷ್ಟು? 1540 ಮೆಗಾವ್ಯಾಟ್ ಬರುತ್ತದೆ. ಇಲ್ಲಿಯವರೆವಿಗೂ ಪೂರೈಕೆಯಾಗಿರುವುದು 1100 ಮೆಗಾವ್ಯಾಟ್. ಕೊರತೆ ಆಗಿರತಕ್ಕಂಥದ್ದು 340 ಮೆಗಾವ್ಯಾಟ್. ಆದರೆ ನಮಗೆ ಸುಮಾರು 3 ಸಾವಿರ ಮೆಗಾವ್ಯಾಟ್ ಕೊರತೆಯಾಗಿದೆಯಲ್ಲಾ ಅದರ ಜವಾಬ್ದಾರಿಕೆ ಯಾರದು? ರಾಜ್ಯದ್ದೇ ತಾನೆ? ಎಲ್ಲದ್ದನ್ನೂ ಕೂಡ ಕೇಂದ್ರದ ಮೇಲೆ ಗೂಬೆ ಕೂರಿಸುವುದಕ್ಕೆ ಆಗುವುದಿಲ್ಲ. ಎಲ್ಲಾ ಸಂದರ್ಭದಲ್ಲಿಯೂ ಕೂಡ ನೀವು ಕೇಂದ್ರದ ಮೇಲೆಯೇ ಗುರಿ ಮಾಡಿಕೊಂಡು ಹೋದರೆ ನಿಮ್ಮ projectಗಳಿಗೆ clearance ಆಗುವುದು ಕಷ್ಟವಾಗುತ್ತದೆ. ಯಾವಾಗಲೂ ಕೂಡ ಕೇಂದ್ರಕ್ಕೆ remarks ಮಾಡುವುದನ್ನು ದಯಮಾಡಿ ಬಿಟ್ಟುಬಿಡಿ. ಈಗ ಮಾನ್ಯ ಸುಶೀಲ್‌ಕುಮಾರ್ ಶಿಂಧೆರವರು ಬಂದಂಥ ಸಂದರ್ಭದಲ್ಲಿ Gas Projects ಬಗ್ಗೆಯೇ clearance ಕೊಡುವುದನ್ನು ಹೇಳಿದ್ದಾರೆ. Take the Government of India into confidence, go with them.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಯಚಂದ್ರರವರೆ, ನಾನು ಕೇಂದ್ರದ ಮೇಲೆ ಏನೂ ಬೆಟ್ಟು ತೋರಿಸುತ್ತಿಲ್ಲ. ನಾನು ಅಧಿಕಾರಕ್ಕೆ ಬಂದಮೇಲೆ ಕೇಂದ್ರದಲ್ಲಿ ನಮಗೆ ಫುಲ್ ಕೋ-ಆಪರೇಶನ್ ಸಿಗುತ್ತಿದೆ. ಅದಕ್ಕಾಗಿಯೇ ಇಷ್ಟು ದೊಡ್ಡ ಹೆಜ್ಜೆಯನ್ನು ಇಡುವುದಕ್ಕೆ ನನಗೆ ಸಾಧ್ಯವಾಗುತ್ತಿದೆ. ಇದನ್ನು ಬಹಿರಂಗವಾಗಿಯೇ ಹೇಳುತ್ತೇನೆ. ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಕೂಡ ಹೇಳಿದ್ದೇನೆ. ಈಗಲೂ ಕೂಡ ಈ ಸ್ಥಳದಲ್ಲಿ ನಿಂತುಕೊಂಡು ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರದಿಂದ ನಮಗೆ

ಎಲ್ಲ ರೀತಿಯ ನೆರವು ಸಿಗುತ್ತಿರುವುದರಿಂದಲೇ ಈ ಪ್ರಗತಿ ಸಾಧಿಸುವುದಕ್ಕೆ ನಮ್ಮಿಂದ ಸಾಧ್ಯವಾಗುತ್ತಿರುವುದು.

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ ಹೇಳಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನೀವು ಹೇಳಿಲ್ಲ. ನಿಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು ಬಹಳ ಜನರು ಹೇಳುತ್ತಿದ್ದರು. ಈಶ್ವರಪ್ಪನವರು ಬೆಳಿಗ್ಗೆ ಎದ್ದರೆ ಸಾಕು ಮಲತಾಯಿ ಧೋರಣೆ, ಮಲತಾಯಿ ಧೋರಣೆ ಎಂದು ಹೇಳಿ ಹೇಳಿ ಹೇಳಿ.

ಶ್ರೀ ಸುರೇಶ್‌ಕುಮಾರ್ : specific ಆಗಿ ಅವರು ಹೇಳಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : Specific ಅಲ್ಲ. ನಾನು ಒಂದು ವಿಚಾರವನ್ನು ಹೇಳುತ್ತೇನೆ ಕೇಳಿ ಸುರೇಶ್‌ಕುಮಾರ್. ಅವರು ಏನು ಹೇಳುತ್ತಿದ್ದಾರೆಂದರೆ, 1500 ಮೆಗಾವ್ಯಾಟ್ ಕೇಂದ್ರದಿಂದ ಬರಬೇಕಾಗಿರುವುದರಲ್ಲಿ ನಮಗೆ ಕೊರತೆಯಾಗಿರುವುದು 340 ಮೆಗಾವ್ಯಾಟ್. ರಾಜ್ಯಕ್ಕೆ 3700 ಮೆಗಾವ್ಯಾಟ್ ಕೊರತೆಯಾಗಿದೆಯೆಂದು ಇಟ್ಟುಕೊಂಡರೆ ಅದರಲ್ಲಿ ರಾಜ್ಯದ ಪಾಲು ಎಷ್ಟಾಗುತ್ತದೆ ಹೇಳಿ. Government of India not even 10%. ಈಗ ನೀವು ಆ 10% ನ್ನು ಮೇಕಪ್ ಮಾಡಬೇಕಾದಾಗ ಏನಾಗುತ್ತದೆ, ನೀವಿಷ್ಟೆ ತಿಳಿದುಕೊಳ್ಳಿ, ಎಲ್ಲಿಯವರೆವಿಗೂ ಕೂಡ ನೈವೇಲಿಯಲ್ಲಿರಬಹುದು, ರಾಮ್‌ಗುಂಡಂನಲ್ಲಿರಬಹುದು, ಆ ರೀತಿಯಾದಂಥ ಪ್ರಾಜೆಕ್ಟ್‌ಗಳನ್ನು ನೀವು ಹಾಕಿದಾಗ ನಿಮ್ಮ State shares ಜಾಸ್ತಿಯಾಗುತ್ತದೆ. ಅದಕ್ಕೆ ಗಮನ ಕೊಡದೆ ನಮ್ಮ share ಕಡಿಮೆ ಇದೆ, ಬೇರೆ ರಾಜ್ಯಕ್ಕೆ ಹೋಲಿಸಿ ಕಡಿಮೆ ಇದೆ ಎಂದು ಹೇಳಿದರೆ ಹೇಗೆ. ಬೇರೆ ರಾಜ್ಯದಲ್ಲಿ ಮೂಲಭೂತವಾಗಿರತಕ್ಕಂಥ ಸೌಕರ್ಯಗಳನ್ನು ಕೊಟ್ಟು ಎನ್‌ಟಿಪಿಸಿಯಂಥ ಯೋಜನೆಗಳು ಬರುವುದಕ್ಕೆ ಸಾಧ್ಯವಾಗಿದೆ. Government of India projects ಬರುವುದಕ್ಕೆ ಸಾಧ್ಯವಾಗಿದೆ. ಅಂಥ projects ಬಂದಾಗ ಮಾತ್ರ ನಮ್ಮ State share ಜಾಸ್ತಿಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಅದರ ಬಗ್ಗೆಯೂ ಕೂಡ ಗಮನ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳಿ, ಬಹುಶ: ನಾನು

ಮಾತನಾಡುವಾಗ ಮುಖ್ಯಮಂತ್ರಿಗಳು ಇದ್ದಿದ್ದರೆ ಇನ್ನೂ ಕೂಡ ಹೆಚ್ಚು ಸ್ಫೂರ್ತಿ ಬರುತ್ತಿತ್ತು, ನಾನು ಇನ್ನೂ ಹೆಚ್ಚು ಸಲಹೆಗಳನ್ನು ಕೊಡಬಹುದಾಗಿತ್ತು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ದಯಮಾಡಿ ನಾನು ನಿಮ್ಮ ಒಂದೇ ಒಂದು ಮಾತನ್ನು ಸ್ವಾಗತ ಮಾಡುತ್ತೇನೆ. ನೀವು contingency plan ಮಾಡುತ್ತಿದ್ದೇನೆ. short term ಸಮಸ್ಯೆಯಿಂದ ಹೊರಬರಬೇಕಾದರೆ ಏನು ಮಾಡಬೇಕೋ ಅದನ್ನು ಮಾಡಿದ್ದೇನೆಂದು ನೀವು ಹೇಳಿದಿರಿ. ಕನಿಷ್ಠ ನೀವು ಒಂದು ಸಾವಿರ ಮೆಗಾವ್ಯಾಟ್‌ನ್ನು ತೆಗೆದುಕೊಂಡು 6 ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಈಗ ನಾಲ್ಕು ತಿಂಗಳು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಆಗತಕ್ಕಂಥ ರೀತಿಯಲ್ಲಿ ಮತ್ತು ಕತ್ತಲೆಯಲ್ಲಿರತಕ್ಕಂಥ ರೈತರಿಗೆ ಸಹಾಯ ಆಗತಕ್ಕಂಥ ರೀತಿಯಲ್ಲಿ ನಿರಂತರ ವಿದ್ಯುತ್‌ನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಬಹುಶ: ನಾವು ಇಲ್ಲಿ ಚರ್ಚೆ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6. ಪ್ರಕಟಣೆ :

ವಿಷಯ : ಮಾನ್ಯ ಸದಸ್ಯರುಗಳು ಸದನ ನಡೆಯುವಾಗ ಹಾಜರಾತಿ ಪುಸ್ತಕದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ 4–00 ಗಂಟೆಗೆ ಸಹಿ ಮಾಡುವ ಬಗ್ಗೆ.

ಅಧ್ಯಕ್ಷರು : ದಿನಾಂಕ: 25–02–2010ರಂದು ನಡೆದ ಕಾರ್ಯ ಕಲಾಪಗಳ ಸಲಹಾ ಸಮಿತಿಯ ಸಭೆಯ ಗಮನಕ್ಕೆ ತಂದಿರುವಂತೆ ಅಧಿವೇಶನ ಸಮಯದಲ್ಲಿ ಮಾನ್ಯ ಸದಸ್ಯರುಗಳು ಸದನದಲ್ಲಿ ಮಧ್ಯಾಹ್ನದ ನಂತರ ಹಾಜರಿಲ್ಲದಿರುವುದು ಸಾಮಾನ್ಯವಾಗಿದೆ. ಈ ಹಿನ್ನಲೆಯಲ್ಲಿ ಪ್ರತಿ ದಿವಸ ಬೆಳಿಗ್ಗೆ ಹಾಗೂ ಮಧ್ಯಾಹ್ನ ಎರಡು ಬಾರಿ ಹಾಜರಾತಿಯನ್ನು ಕಡ್ಡಾಯಗೊಳಿಸುವುದು ಸೂಕ್ತವೆಂದು ಸಮಿತಿ ಸಭೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಆದಕಾರಣ ಮಾನ್ಯ ಸದಸ್ಯರುಗಳು ಬೆಳಿಗ್ಗೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವುದಲ್ಲದೆ ಮಧ್ಯಾಹ್ನ 4.00 ಗಂಟೆಗೂ ಸಹ